ಮಹಾವಿಷ್ಣು ನಿಧಿ

ದೇವನಹಳ್ಳಿ ಚೆನ್ನಕೇಶವ ಆಚಾರ್ಯರ ರೇಖಾಚಿತ್ರಗಳು

ಸಂಪುಟ ೨

ಕೆ.ವಿ. ಸುಬ್ರಹ್ಮಣ್ಯಂ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ಮಹಾವಿಷ್ಣು ನಿಧಿ

ದೇವನಹಳ್ಳಿ ಚೆನ್ನಕೇಶವ ಆಚಾರ್ಯರ ರೇಖಾಚಿತ್ರಗಳು

ಸಂಪುಟ-೨

ಕೆ.ವಿ. ಸುಬ್ರಹ್ಮಣ್ಯಂ

ಪ್ರಧಾನ ಸಂಪಾದಕರು
ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ

ಕರ್ನಾಟಕ
ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು ೫೬೦ ೦೦೨

MAHAVISHNU NIDHI
A collection of drawings of Devanahalli Chennakeshav Acharya. Volume-2
Text and Notes Written and Drawings Edited by : **K.V. Subramanyam**, Bengaluru-26
Chief Editor : **Mahadevappa Shambhulingappa Shilpi**

Published by
Indramma H.V.
Registrar, Karnataka Shilpakala Academy, Kannada Bhavana
J.C. Road, Bengaluru - 560 002, Ph.: 080-22278725

Email: shilpakala.academy@gmail.com
Web : www.karnatakashilpakalaacademy.org

First Edition : 2016

Pages : viii + 164 = 172
Price : **120/-**
Used Paper : 80 GSM NS Book Printing
Copies : 1000

Printed at
Ila Mudrana, Bengaluru-560 026, Ph.: 080-26757159

ಮಹಾವಿಷ್ಣು ನಿಧಿ
ದೇವನಹಳ್ಳಿ ಚೆನ್ನಕೇಶವ ಆಚಾರ್ಯ ಅವರ ಚಿತ್ರಗಳ ಸಂಪುಟ–೨
ಪಠ್ಯ ಮತ್ತು ಟಿಪ್ಪಣಿ ಹಾಗೂ ಚಿತ್ರಗಳ ಸಂಪಾದನೆ **ಕೆ.ವಿ. ಸುಬ್ರಹ್ಮಣ್ಯಂ**
ಪ್ರಧಾನ ಸಂಪಾದಕರು: **ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ**

ಮೊದಲ ಮುದ್ರಣ : ೨೦೧೬
ಪುಟಗಳು : viii + ೧೬೪ = ೧೭೨
ಬೆಲೆ : ೧೨೦/-
ಪ್ರತಿಗಳು : ೧೦೦೦

ಬಳಸಿದ ಕಾಗದ : ೮೦ ಜಿಎಸ್‌ಎಂ ಎನ್‌ಎಸ್ ಬುಕ್ ಪ್ರಿಂಟಿಂಗ್

ಪ್ರಕಾಶಕರು
ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ ಕನ್ನಡ ಭವನ
ಜೆ.ಸಿ.ರಸ್ತೆ, ಬೆಂಗಳೂರು–೫೬೦ ೦೦೨

ಮುದ್ರಣ
ಇಳಾ ಮುದ್ರಣ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು – 560 026
ದೂರವಾಣಿ : 080–26757159

ಅಧ್ಯಕ್ಷರ ನುಡಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಪ್ರಸ್ತುತದಲ್ಲಿ ಬಹು ಪುರಾತನವಾದ ದೇವನಹಳ್ಳಿಯ ದಿ. ಶಿಲ್ಪಿ ಶ್ರೀ ಚನ್ನಕೇಶವಾಚಾರ್ಯರು ಸಂಗ್ರಹಿಸಿರುವ ದೇವತಾದಿ ಚಿತ್ರಸಾರ ಸಂಗ್ರಹ ಎಂಬ ರೇಖಾಚಿತ್ರಗಳ ಪುಸ್ತಕವನ್ನು ನಮ್ಮ ಕಲಾ ಸಾಂಸ್ಕೃತಿಕ ಸಂಪತ್ತನ್ನು ಉಳಿಸುವ ಉದ್ದೇಶದಿಂದ ಮೂಲ ಹಸ್ತಪ್ರತಿಗಳನ್ನು ಪಡೆದು ಅದನ್ನು ಸಂಪಾದಕರಾದ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ವಹಿಸಿ ರೇಖಾಚಿತ್ರಗಳನ್ನು ಮೂರು ಸಂಪುಟಗಳಲ್ಲಿ ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವುದು ನನ್ನ ಅಧಿಕಾರದ ಮೊದಲ ಆದ್ಯತೆ ಆಗಿತ್ತು. ಈ ಹಿನ್ನೆಲೆಯಲ್ಲಿ ಮೊದಲ ಸಂಪುಟ ಶಿವಶಕ್ತಿ ಮುದ್ರಣವಾಗಿದ್ದು, ಈಗ ಮಹಾವಿಷ್ಣು ನಿಧಿ ಎಂಬ ಎರಡನೇ ಸಂಪುಟ ಮುದ್ರಣವಾಗುತ್ತಿದೆ ರೇಖಾಚಿತ್ರಗಳಿರುವ ಪುಸ್ತಕಗಳಿಗೆ ಬೇಡಿಕೆ ದಿನೇ ದಿನೇ ವಿದ್ಯಾರ್ಥಿಗಳಿಂದ, ಕಲಾಸಕ್ತರಿಂದ, ಸಾರ್ವಜನಿಕರಿಂದ ಹೆಚ್ಚಾಗುತ್ತಿರುವುದನ್ನು ಕಂಡು ಶ್ರೇಷ್ಠವಾದ ರೇಖಾಚಿತ್ರಗಳ ಪುಸ್ತಕದ ಕೊರತೆ ಕಾಡುತ್ತಿದೆ ಎಂದು ಮನಗೊಂಡು, ಇಂತಹ ಅಪರೂಪದ ರೇಖಾಚಿತ್ರಗಳ ಪುಸ್ತಕವನ್ನು ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದರೆ ಇಂತಹ ಪುಸ್ತಕವನ್ನು ಕಲಾಭಿಮಾನಿಗಳು ಬಹಳ ಆತ್ಮೀಯವಾಗಿ ಸ್ವಾಗತಿಸುತ್ತಾರೆ ಎಂಬ ಆಶಾಭಾವ ಮೂಡಿತು.

ಸದರಿ ಪುಸ್ತಕವನ್ನು ಸಂಪಾದಿಸುತ್ತಿರವ ಶ್ರೀ ಕೆ.ವಿ.ಸುಬ್ರಮಣ್ಯಂಅವರು ಬಹಳ ಸುಂದರವಾಗಿ ಮೂರು ಸಂಪುಟಗಳಲ್ಲಿ ಹೊರತರಲು ಶ್ರಮಿಸುತ್ತಿದ್ದಾರೆ. ಇದರ ಫಲವಾಗಿ ಎರಡನೇ ಸಂಪುಟವಾಗಿ ಮಹಾವಿಷ್ಣು ನಿಧಿ ಪುಸ್ತಕ ಹೊರಬರುತ್ತಿದೆ. ಸದರಿ ಪುಸ್ತಕದ ರೇಖಾಚಿತ್ರಗಳು ಶಿಲ್ಪಕಲೆಯ ಸಂಪ್ರದಾಯ, ಪಾರಂಪರಿಕ ವೈಶಿಷ್ಟ್ಯತೆ, ಕಲೆಯ ಸಂಸ್ಕೃತಿ ಮುಂತಾದವುಗಳನ್ನು ಬಿಂಬಿಸುವ ರೀತಿಯಲ್ಲಿದೆ. ಇಂತಹ ಅಪರೂಪದ ರೇಖಾಚಿತ್ರದ ಪುಸ್ತಕವನ್ನು ನನ್ನ ಅಧಿಕಾರಾವಧಿಯಲ್ಲಿ ಮುದ್ರಿಸುತ್ತಿರುವುದಕ್ಕೆ ಹೆಮ್ಮೆಯೆನಿಸುತ್ತದೆ. ನನಗೆ ಪುಸ್ತಕ ಮುದ್ರಿಸಲು ಹಸ್ತಪ್ರತಿ ನೀಡಿ ಸಹಕರಿಸಿದ ಶಿಲ್ಪಿ ಶ್ರೀ ಎ.ಸಿ. ಹನುಮಂತಾಚಾರ್ಯರ‌ನರ್ಮಪತ್ನಿಯವರಾದ ಶ್ರೀಮತಿ ಸರೋಜಾದೇವಿ ಆಚಾರ್ಯ ಹಾಗೂ ಅವರ ಮಕ್ಕಳಿಗೆ ಮತ್ತು ಶಿಲ್ಪಕಲಾ ಟ್ರಸ್ಟ್, ದೇವನಹಳ್ಳಿಯ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ರೇಖಾಚಿತ್ರ ಪುಸ್ತಕದ ಮೂರು ಸಂಪುಟದ ಸಂಪಾದಕರಾಗಿರುವ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇರೀತಿ ಈ ಪುಸ್ತಕದ ಮುದ್ರಣಕ್ಕೆ ಸಹಕರಿಸಿದ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀಮತಿ ಇಂದ್ರಮ್ಮ. ಹೆಚ್.ವಿ. ಅವರಿಗೂ ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲೀಕರು, ಇಳಾ ಮುದ್ರಣ, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ

ಅಧ್ಯಕ್ಷರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಪ್ರಕಾಶಕರ ನುಡಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಪ್ರಸ್ತುತದಲ್ಲಿ ಬಹು ಪುರಾತನವಾದ ದೇವನಹಳ್ಳಿಯ ದಿ. ಶಿಲ್ಪಿ ಶ್ರೀ ಚನ್ನಕೇಶವಾಚಾರ್ಯರು ಸಂಗ್ರಹಿಸಿರುವ ದೇವತಾದಿ ಚಿತ್ರಸಾರ ಸಂಗ್ರಹ ಎಂಬ ರೇಖಾಚಿತ್ರಗಳ ಪುಸ್ತಕವನ್ನು ನಮ್ಮ ಕಲಾ ಸಾಂಸ್ಕೃತಿಕ ಸಂಪತ್ತನ್ನು ಉಳಿಸುವ ಉದ್ದೇಶದಿಂದ ಮೂಲ ಹಸ್ತಪ್ರತಿಗಳನ್ನು ಪಡೆದು ಅದನ್ನು ಸಂಪಾದಕರಾದ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ವಹಿಸಿ ರೇಖಾಚಿತ್ರಗಳನ್ನು ಮೂರು ಸಂಪುಟಗಳಲ್ಲಿ ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೊದಲ ಸಂಪುಟ ಶಿವಶಕ್ತಿ ಮುದ್ರಣವಾಗಿದ್ದು, ಈಗ ಈಗ ಮಹಾವಿಷ್ಣು ನಿಧಿ ಎಂಬ ಎರಡನೇ ಸಂಪುಟ ಮುದ್ರಣವಾಗುತ್ತಿದೆ ರೇಖಾಚಿತ್ರಗಳಿರುವ ಪುಸ್ತಕಗಳಿಗೆ ಬೇಡಿಕೆ ದಿನೇ ದಿನೇ ವಿದ್ಯಾರ್ಥಿಗಳಿಂದ, ಕಲಾಸಕ್ತರಿಂದ, ಸಾರ್ವಜನಿಕರಿಂದ ಹೆಚ್ಚಾಗುತ್ತಿರುವುದನ್ನು ಕಂಡು ಶ್ರೇಷ್ಠವಾದ ರೇಖಾಚಿತ್ರಗಳ ಪುಸ್ತಕದ ಕೊರತೆ ಇಂದಿನ ಪೀಳಿಗೆಗೆ ಕಾಡುತ್ತಿದೆ. ಇಂತಹ ಅಪರೂಪದ ರೇಖಾಚಿತ್ರಗಳ ಪುಸ್ತಕವನ್ನು ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುತ್ತಿರುವುದರಿಂದ ಕಲಾಭಿಮಾನಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ತುಂಬಾಉಪಯುಕ್ತವಾಗುತ್ತದೆ.

ಸದರಿ ಪುಸ್ತಕವನ್ನು ಸಂಪಾದಿಸುತ್ತಿರವ ಶ್ರೀ ಕೆ.ವಿ.ಸುಬ್ರಮಣ್ಯಂಅವರು ಬಹಳ ಸುಂದರವಾಗಿ ಮೂರು ಸಂಪುಟಗಳಲ್ಲಿ ಹೊರತರಲು ಶ್ರಮಿಸುತ್ತಿದ್ದಾರೆ. ಇದರ ಫಲವಾಗಿ ಎರಡನೇ ಸಂಪುಟವಾಗಿ ಮಹಾವಿಷ್ಣು ನಿಧಿ ಪುಸ್ತಕ ಹೊರಬರುತ್ತಿದೆ. ಪುಸ್ತಕ ಮುದ್ರಿಸಲು ಹಸ್ತಪ್ರತಿ ನೀಡಿ ಸಹಕರಿಸಿದ ದಿ. ಶಿಲ್ಪಿ ಶ್ರೀ ಎ.ಸಿ. ಹನುಮಂತಾಚಾರ್ಯರ ಧರ್ಮಪತ್ನಿಯವರಾದ ಶ್ರೀಮತಿ ಸರೋಜಾದೇವಿ ಆಚಾರ್ಯ ಹಾಗೂ ಅವರ ಮಕ್ಕಳಿಗೆ ಮತ್ತು ಶಿಲ್ಪಕಲಾ ಟ್ರಸ್ಟ್, ದೇವನಹಳ್ಳಿಯ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ರೇಖಾಚಿತ್ರ ಪುಸ್ತಕದ ಮೂರು ಸಂಪುಟದ ಸಂಪಾದಕರಾಗಿರುವ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇರೀತಿ ಈ ಪುಸ್ತಕದ ಮುದ್ರಣಕ್ಕೆ ಸಹಕರಿಸಿದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ ಅವರಿಗೂ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲೀಕರು, ಇಳಾ ಪ್ರಿಂಟರ್ಸ್, ಬೆಂಗಳೂರು ಇವರಿಗೂತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ನಿಮ್ಮೊಂದಿಗೆ...

ಭಾರತೀಯ ಮಕ್ಕಳ ಬಾಲ್ಯವೇ ಪುರಾಣಗಳ ವೈಭವಯುತ ಪಾತ್ರಧಾರಿಗಳನ್ನು 'ನೋಡುವಿಕೆ' 'ಕೇಳುವಿಕೆ'ಗಳಿಂದ 'ಕಥಾನಕ'ಗಳಿಂದ ತುಂಬಿಹೋಗಿರುತ್ತದೆ. ಮನೆಯಲ್ಲಿ ದೇವ-ದೇವಿಯರ ಪೂಜಾಪಟಗಳು, ಹಳ್ಳಿ ಹಳ್ಳಿಗಳ ನಡುವೆ ಆಕಾಶಕ್ಕೆ ಗುರಿಯಿಟ್ಟ ಗೋಪುರಗಳ ದೇಗುಲಗಳು. ದೇವತಾ ರೂಪಗಳ ಉಬ್ಬು ಶಿಲ್ಪಗಳು ಒಳಗಿನ, ಹೊರಗಿನ ಅವಕಾಶಗಳನ್ನು ತುಂಬಿಕೊಂಡಿದ್ದರೆ, ಗರ್ಭಗುಡಿಯಲ್ಲಿನ ಶಿಲಾಮೂರ್ತಿಗಳು. ಉತ್ಸವದ ಕಂಚಿನ ಶಿಲ್ಪಗಳ ಆಕರ್ಷಣೆ ಅಷ್ಟಿಷ್ಟಲ್ಲ.

ಈ ವಿಗ್ರಹಗಳಿಗೆ ನಮ್ಮ ವಿಷ್ಣು, ಗರುಡ, ಅಗ್ನಿ ಇತ್ಯಾದಿ ಪುರಾಣಗಳು, ಚಿತ್ರಸೂತ್ರ, ಚಿತ್ರಲಕ್ಷಣ, ಸಮರಾಂಗಣ ಸೂತ್ರಧಾರ, ಶುಕ್ರನೀತಿಸಾರ, ಮಾನಸಾರ, ಶಿಲ್ಪರತ್ನ, ಅಗ್ನಿಪುರಾಣ, ವಿಷ್ಣು ಪುರಾಣ, ಕಾಶ್ಯಪ ಶಿಲ್ಪ ಶಾಸ್ತ್ರ ಇತ್ಯಾದಿ ಮಧ್ಯಕಾಲೀನ ಪಠ್ಯಗಳ ಎಲ್ಲ ವಿವರಗಳು ಪೂರಕ ಭೂಮಿಕೆಯನ್ನು ನೀಡುತ್ತವೆ. ಈ ಮೂಲದ ಶಿಲ್ಪ ಸೃಷ್ಟಿ ನಮ್ಮಲ್ಲಿ ಶತಮಾನಗಳಿಂದ ಗುರುಕುಲ ಪದ್ಧತಿಯಲ್ಲಿ ನಡೆದು ಬಂದಿದೆ. ಸಂಪ್ರದಾಯ ಶಿಲ್ಪಕಲಾ ಸೃಷ್ಟಿಯು ನಿರಂತರವಾಗಿ ಬೆಳೆದು ಬಂದಿದೆ. ಸಾವಿರಾರು ಶಿಲ್ಪಿಗಳು ರಾಜ್ಯದಲ್ಲಿ ಇದ್ದಾರೆ. ಶಿವಾರಪಟ್ಟಣದಂತಹ ಸಂಪ್ರದಾಯ ಶಿಲ್ಪಿಗಳ ಹಳ್ಳಿಯು ೨೦೧೬ರಲ್ಲಿಯೂ ತೀವ್ರ ಚಟುವಟಿಕೆಯಿಂದ ಕೂಡಿದ್ದಿತು. ದೇವನಹಳ್ಳಿಯ ಶಿಲ್ಪ ಕಲಾ ಶಾಲೆಯೂ ಈ ಹಿನ್ನೆಲೆಯಲ್ಲಿ ಗಣನೀಯ ಪ್ರಾಮುಖ್ಯತೆಯನ್ನು ಹೊಂದಿದೆ. ಶತಮಾನದ ಹಿಂದೆ ಅಲ್ಲಿದ್ದು ಶಿಲ್ಪಕಲೆಯನ್ನು ಕಲಿಸಿದ ಚೆನ್ನಕೇಶವ ಆಚಾರ್ಯರ ನೂರಾರು ರೇಖಾಚಿತ್ರಗಳನ್ನು ೨೦೧೬ರ ಸಂದರ್ಭದಲ್ಲಿಯೂ ಸಂರಕ್ಷಿಸಿಕೊಂಡು ಬಂದಿರುವ ಶ್ರೀಮತಿ ಸರೋಜಾದೇವಿ ಆಚಾರ್ಯ ಹಾಗೂ ಅವರ ಮಕ್ಕಳು ಮತ್ತು ಅಲ್ಲಿನ ಶಿಲ್ಪ ಕಲಾ ಟ್ರಸ್ಟ್‌ನ ಶಿಲ್ಪಿ ಕೆ.ಬಿ. ಶಂಕರನಾರಾಯಣ ಮತ್ತು ಇತರ ಮಿತ್ರರಿಗೆ ನಾವು ಕೃತಜ್ಞರಾಗಿರಬೇಕು. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಈ ರೇಖಾಚಿತ್ರಗಳನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸುತ್ತಿರುವುದು ಒಂದು ವಿಶೇಷ ಸಂದರ್ಭ ಸೃಷ್ಟಿಯೇ ಸರಿ. ಅಧ್ಯಕ್ಷರು ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿಯವರ ಆಶಯದಂತೆ ಈ ಸಂಪುಟಗಳು ಪ್ರಕಟಗೊಳ್ಳುತ್ತಿವೆ. ಎರಡನೆಯ ಸಂಪುಟ 'ಮಹಾವಿಷ್ಣು ನಿಧಿ' ನಿಮ್ಮ ಕೈಯಲ್ಲಿದೆ. ಈ ಸಂಪುಟದ ರೇಖಾಚಿತ್ರಗಳ ಅಡಿ ಇರುವ ಶೀರ್ಷಿಕೆ ಹೆಸರುಗಳನ್ನು ಚೆನ್ನಕೇಶವ ಆಚಾರ್ಯರ ಮೂಲ ರೇಖಾಚಿತ್ರಗಳಿಂದಲೇ ಸಂಗ್ರಹಿಸಿ ನೀಡಲಾಗಿದೆ. ದೇವನಹಳ್ಳಿಯ ಶಿಲ್ಪಕಲಾ ಶಾಲೆಗೆ ೧೯೮೦ರ ದಶಕದಲ್ಲಿ ಹನುಮಂತಾಚಾರ್ಯರ ಸಂದರ್ಭದಲ್ಲಿ ಅವರಲ್ಲಿ ಕಲಿಯಲು ಪದೇ ಪದೇ ಭೇಟಿ ನೀಡಿದ ನಾನು ತೀವ್ರತೆಯಿಂದ ತೊಡಗಿಕೊಳ್ಳಲು ಆಗಿರಲಿಲ್ಲ. ಆದರೂ ಶಿಲ್ಪಕಲಾ ಶಾಲೆಯ ಸಂಪರ್ಕ ಇದ್ದಿತು. ಸಂಪ್ರದಾಯ ಶಿಲ್ಪದ ಪ್ರೀತಿಯೂ ಬೆಳೆಯಿತು. ಆದರೆ ಆಗ ನೋಡಲು ಆಗದ ಚೆನ್ನಕೇಶವ ಆಚಾರ್ಯರ ರೇಖಾಚಿತ್ರಗಳನ್ನು ಈಗ ನೋಡುವ ಸಂದರ್ಭ ಒದಗಿದೆ. ಈ ಮೊದಲ ಸಂಪುಟವು ರೂಪುಗೊಳ್ಳಲು ಅಕಾಡೆಮಿಯ ಅಧ್ಯಕ್ಷರೇ ಅಲ್ಲದೆ ರಿಜಿಸ್ಟ್ರಾರ್ ಇಂದ್ರಮ್ಮ ಹೆಚ್.ವಿ. ಹಾಗೂ ಇತರ ಸದಸ್ಯ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ. ದೇವನಹಳ್ಳಿ ಶಿಲ್ಪಕಲಾ ಶಾಲೆಯ ಶ್ರೀಮತಿ ಸರೋಜಮ್ಮ ಮತ್ತು ಮಕ್ಕಳು ಹಾಗೂ ಶಿಲ್ಪಕಲಾ ಟ್ರಸ್ಟ್‌ನ ಕೆ.ಬಿ. ಶಂಕರ ನಾರಾಯಣ ಮತ್ತು ಮಿತ್ರರು, ಈ ಪುಟ್ಟ ಸಂಪುಟವು ಸುಂದರವಾಗಿ ಮೂಡಿ ಬರಲು ಶ್ರಮಿಸಿದ್ದಾರೆ. ಇಳಾ ಮುದ್ರಣದ ಮಿತ್ರರು ಮತ್ತು ಶಿಲ್ಪಿ ವೆಂಕಟಾಚಲಪತಿ ಅವರು ಹಲವು ರೀತಿಗಳಲ್ಲಿ ನನಗೆ ನೆರವಾಗಿದ್ದಾರೆ. ಇವರೆಲ್ಲರಿಗೂ ನಾನು ಋಣಿ. ನಿಮ್ಮ ಹಲವು 'ಓದುವಿಕೆ' ಮತ್ತು 'ನೋಡುವಿಕೆ'ಗಳೂ ಈ ಸಂಪುಟದ ಉದ್ದೇಶವನ್ನು ವಿಸ್ತರಿಸಬಲ್ಲದು.

೨೦೧೬

–ಕೆ.ವಿ. ಸುಬ್ರಹ್ಮಣ್ಯಂ

ದೇವನಹಳ್ಳಿಯ ಚೆನ್ನಕೇಶವ ಆಚಾರ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯು ಐತಿಹಾಸಿಕ, ಸಾಂಸ್ಕೃತಿಕ ಕಾರಣಗಳಿಗಾಗಿ ಖ್ಯಾತವಾಗಿದೆ. ಮಾಗಡಿ ಕೆಂಪೇಗೌಡ, ಹೈದರಾಲಿ ಮೊದಲಾದವರು ಈ ಊರಿನೊಂದಿಗೆ ಸಂಬಂಧ ಸಾಧಿಸಿದ್ದರು. ಟಿಪ್ಪುಸುಲ್ತಾನನ ಜನ್ಮಸ್ಥಳವೂ ಈ ದೇವನಹಳ್ಳಿಯೇ ಆಗಿದೆ. ವಿಶಿಷ್ಟ ಕೋಟೆ, ಸುತ್ತಲಿನ ಕಂದಕ, ಆಕರ್ಷಕ ಕೆರೆ ಇತ್ಯಾದಿಗಳು ಅಂದಿನ ದಿನಗಳ ಚಹರೆಗಳನ್ನು ಹೊಂದಿವೆ. ಬಹುಮುಖ್ಯವಾಗಿ ವೇಣುಗೋಪಾಲ ಸ್ವಾಮಿ ದೇವಾಲಯ ೨೦೧೬ರ ಸಂದರ್ಭದಲ್ಲಿಯೂ ತನ್ನ ಐತಿಹಾಸಿಕ, ಸಾಂಸ್ಕೃತಿಕ ಹೊಳಹುಗಳಿಂದಾಗಿ ಗಮನಿಸುವಂತಿತ್ತು.

ದೇವನಹಳ್ಳಿಯ ಕೋಟೆ, ದೇವಾಲಯಗಳ ನಿರ್ಮಾಣದ ಹಿಂದಿನ ಕರಕುಶಲಿಗಳು ಅಸಾಮಾನ್ಯರೇ ಆಗಿದ್ದರು. ಆ ಮನೆತನದ ಶಿಲ್ಪಿಗಳು ೨೦೧೬ರ ಸಂದರ್ಭದಲ್ಲಿಯೂ ಶಿಲ್ಪಕಲಾ ಶಾಲೆಯ ಆಶ್ರಯವನ್ನು ಅಗತ್ಯ ಶಿಲ್ಪಿಗಳಿಗೆ ನೀಡುತ್ತ, ಸಂಪ್ರದಾಯ ಶಿಲ್ಪ ಸೃಷ್ಟಿಗೆ ಪೂರಕ ವಾತಾವರಣ ನಿರ್ಮಿಸಿದ್ದರು.

ಸುಮಾರು ಕ್ರಿ.ಶ. ೧೭೦೦ರ ಸಂದರ್ಭ. ದೇವನಹಳ್ಳಿಯ ಪಾಳೆಯಗಾರ ಮಲ್ಲಭೈರೇಗೌಡ ಮತ್ತು ದೇವೇಗೌಡರು ಆ ಕಾಲಕ್ಕೆ ಪ್ರಸಿದ್ಧ ಶಿಲ್ಪಿಗಳಾಗಿದ್ದ ಶಿಲ್ಪಿ ಸಿದ್ಧಾಂತಿ ವೇದಾಂತಂ ಗೋಪಾಲ ಆಚಾರ್ಯ ಮತ್ತು ಅವರ ಸೋದರ ರಾಮ ಆಚಾರ್ಯರವರುಗಳನ್ನು ದೇವನಹಳ್ಳಿಗೆ ಸ್ವಾಗತಿಸಿದರು. ಈ ಶಿಲ್ಪಿಗಳಿಂದ ದೇವನಹಳ್ಳಿಯ ಕಲ್ಲಿನಕೋಟೆ, ಗೋಪಾಲಸ್ವಾಮಿ ದೇವಾಲಯಗಳು ಕಟ್ಟಲ್ಪಟ್ಟವು. ಕೃಷ್ಣಮಾಚಾರ್ಯರೆಂಬ ಈ ಮನೆತನದ ಶಿಲ್ಪಿಯೊಬ್ಬರು "ದೇಶಪರ್ಯಟನೆಗೆಂದು ಹೊರಟವರು ಅಲ್ಲಲ್ಲಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಇವರ ಪಾಂಡಿತ್ಯವನ್ನು ಮೆಚ್ಚಿದ ತಿರುವಾಂಕೂರು ಮಹಾರಾಜರು ಇವರಿಗೆ "ಶಿಲ್ಪಸಿದ್ಧಾಂತಿ" ಎಂಬ ಬಿರುದನ್ನು ಕೊಟ್ಟು ಗೌರವಿಸಿದರೆಂದು ತಿಳಿದುಬರುತ್ತದೆ. ಇವರ ಮಕ್ಕಳಾದ ಹನುಮಂತಾಚಾರ್ಯರ ಮಕ್ಕಳು ಮೂವರೂ ಯಥಾವತ್ತಾಗಿ ಶಾಸ್ತ್ರವೇತ್ತರು, ಕುಶಲ ಕರ್ಮಿಗಳು. ಒಬ್ಬರು ಜನ್ಮಾಂಧರಾದರೂ ಶಾಸ್ತ್ರಜ್ಞರಿದ್ದರು. ಇನ್ನಿಬ್ಬರಾದ ತಿರುವೆಂಕಟಾಚಾರ್ಯ ಮತ್ತು ಚೆನ್ನಕೇಶವ ಆಚಾರ್ಯರು ಶಿಲ್ಪಶಾಸ್ತ್ರ ಪರಿಣಿತರು. ದಕ್ಷಿಣ ದೇಶದಾದ್ಯಂತ ಇವರು ಶಿಲ್ಪಕೃತಿಗಳನ್ನು ಒದಗಿಸಿ ಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿಯೇ ಪ್ರಾಯಶಃ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅವರು ಕಡೆದಿರುವ ಕಲಾಮೂರ್ತಿಗಳಿವೆ. ದಾವಣಗೆರೆಯಲ್ಲಿರುವ ಶ್ರೀ ಕನ್ನಿಕಾಪರಮೇಶ್ವರಿ ವಿಗ್ರಹ, ರಾಜೇನಹಳ್ಳಿಯವರ ರಾಮಮಂದಿರದ ಶ್ರೀ ರಾಮಮೂರ್ತಿ ವಿಗ್ರಹ, ಮೊದಲಾದ ಸುಂದರ ಮೂರ್ತಿಗಳು ಅವರ ರಚನೆಯದು. ಚೆನ್ನಕೇಶವ ಆಚಾರ್ಯರಿಗೆ ಶಿಲ್ಪಸಿದ್ಧಾಂತಿ, ಶಿಲ್ಪವಲ್ಲಭ, ಶಿಲ್ಪವಿದ್ವಾನ್ ಮೊದಲಾದ ಬಿರುದುಗಳಿದ್ದವು." (ಬಿ.ಎ.ಆರ್. ಬೆಂಗಳೂರಿನ ಕಲಾಮಂದಿರದ 'ಕಲಾ' ಪತ್ರಿಕೆ. ಸಂಪಾದಕರು: ಅ.ನ. ಸುಬ್ಬರಾಯರು.) ಈ ಚೆನ್ನಕೇಶವ ಆಚಾರ್ಯರ ಮಕ್ಕಳೇ ಎ.ಸಿ. ಹನುಮಂತ ಆಚಾರ್ಯ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರೂ ತಾಯಿಯಿಂದ ಕಲಿತು ತಂದೆಯ ಹಾದಿಯಲ್ಲಿ ಮುನ್ನಡೆದರು. ನೂರಾರು ಪುಟಗಳಲ್ಲಿ ಚೆನ್ನಕೇಶವ ಆಚಾರ್ಯರು ರೇಖಿಸಿಟ್ಟಿದ್ದ ರೇಖಾಚಿತ್ರಗಳು ಎ.ಸಿ. ಹನುಮಂತ ಆಚಾರ್ಯರನ್ನೇ ಅಲ್ಲದೆ ೨೦೧೬ರ ಸಂದರ್ಭದಲ್ಲಿಯೂ ಅಲ್ಲಿ ಕಲಿಯುತ್ತಿದ್ದವರಿಗೆ ಉಪಯುಕ್ತವಾಗಿದ್ದವು. ಪ್ರಸ್ತುತ ಪ್ರಕಟಣೆಯಲ್ಲಿ ನೀವು ನೋಡುತ್ತಿರುವ ದೈವೀಕ ರೇಖಾಧ್ಯಾನದಂತಹ ರೇಖಾಚಿತ್ರಗಳು ಶತಮಾನದ ಅಂತರದಲ್ಲಿಯೂ, ಸಂರಕ್ಷಣೆಯ ಸಮಸ್ಯೆಗಳನ್ನು ಮೀರಿ ಉಳಿದುಕೊಂಡಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಚೆನ್ನಕೇಶವ ಆಚಾರ್ಯರ ಕುಟುಂಬದ ಪರಂಪರೆಯ ಪ್ರೀತಿ ಮತ್ತು ಗೌರವಗಳು ಎದ್ದು ಕಾಣುತ್ತವೆ. ಲಭ್ಯ ರೇಖಾಚಿತ್ರಗಳನ್ನು ಸೂಕ್ತ ರೀತಿಯಲ್ಲಿ ಮೂರು ಪುಟ್ಟ ಪುಟ್ಟ ಸಂಪುಟಗಳಲ್ಲಿ ಸಂಗ್ರಹಿಸಲಾಗಿದೆ. ಪ್ರಸ್ತುತ 'ಮಹಾವಿಷ್ಣು ನಿಧಿ' ಎರಡನೆಯ ಸಂಪುಟದಲ್ಲಿ ವಿಷ್ಣು ಸಂಬಂಧಿತ ರೇಖಾಚಿತ್ರಗಳಿವೆ.

❑

ಪರಿವಿಡಿ

೧. ದೇವತೆಗಳು ಪರೋಕ್ಷ ಪ್ರಿಯರು!

ವಿಷ್ಣುವೇ ವಿಷ್ಣುವೇ ನಿತ್ಯ ವಿಷ್ಣುವೇ ನಮಃ ॥
ನಮಾಮಿ ವಿಷ್ಣು ಚಿತ್ತಸ್ಥಮಹಂಕಾರಗತಿಂ ಹರಿಮ್ ॥
ಚಿತ್ತಸ್ಥಮೀಶಮವ್ಯಕ್ತಮ ನಂತಮಪರಾಜಿತಮ್ ।
ವಿಷ್ಣುಮೀಡ್ಯಮಶೇಷೇಣ ಅನಾದಿನಿಧನಂ ವಿಭುಮ್ ॥ *– ಅಗ್ನಿ ಪುರಾಣ, ೧೭೨-೩*

ಬೃಹದಾರಣ್ಯಕ ಉಪನಿಷತ್ತಿನಲ್ಲಿರುವ "ದೇವತೆಗಳು ಪರೋಕ್ಷಪ್ರಿಯರು; ಪ್ರತ್ಯಕ್ಷವಾದುದನ್ನು ಅವರು ದೂರವಿರಿಸುತ್ತಾರೆ" ಎಂಬ ಮಾತುಗಳು ಡಾ. ಆನಂದ ಕುಮಾರಸ್ವಾಮಿಯವರನ್ನು ಬಹುವಾಗಿ ಆಕರ್ಷಿಸಿವೆ.[೧,೨] ಈ ಮಾತುಗಳ ಹಿನ್ನೆಲೆಯಲ್ಲಿ ದೇವತೆಗಳ ಹೆಸರುಗಳು, ಉಡಿಗೆತೊಡಿಗೆ ಮುಂತಾದವುಗಳಿಗೆ ಪ್ರತೀಕಾರ್ಥವಿದೆ; ಭಾರತೀಯ ತತ್ತ್ವಶಾಸ್ತ್ರೀಯ ಅಂತರಾರ್ಥವಿದೆ. ಹೀಗಾಗಿ ಪ್ರಾಜ್ಞರು ವಿಷ್ಣು ಪುರಾಣದ ಅಸ್ತ್ರ ಭೂಷಣ ಅಧ್ಯಾಯವನ್ನು ಪ್ರಮಾಣವಾಗಿ ತೋರಿದ್ದಾರೆ. ದೇವ-ದೇವಿಯರ ಶರೀರಗಳನ್ನು ಅಲಂಕರಿಸುವ ಆಭರಣಗಳು ಮತ್ತು ಆಯುಧಗಳು ವಿಶ್ವ ತತ್ವಗಳನ್ನು (ವಿಶ್ವಾತ್ಮಕ ತತ್ವ) ಪ್ರತಿನಿಧಿಸುವ ಪ್ರತೀಕಗಳೇ ಆಗಿವೆ.[೩] ಜೀವತತ್ವವೇ ಕೌಸ್ತುಭದ ರೂಪದಲ್ಲಿದೆ; ಮಹತ್ತೇ ಕೌಮೋದಕೀ ಎಂಬ ಗದೆ; ಸಾತ್ವಿಕಾಹಂಕಾರವು ಪಾಂಚಜನ್ಯವೆಂಬ ಶಂಖ; ತಾಮಸ ಅಹಂಕಾರವು ಶಾರ್ಙ್ಗ ಧನುಸ್ಸು; ಜ್ಞಾನವೇ ಖಡ್ಗ, ಮೌಢ್ಯವೇ ಅದರ ಒರೆ; ಮನಸ್ಸೇ ಸುದರ್ಶನ ಚಕ್ರ; ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಬಾಣಗಳು; ಸೂಕ್ಷ್ಮ ಸ್ಥೂಲ ಧಾತುಗಳೇ ಕೊರಳ ಹಾರ ಇತ್ಯಾದಿಗಳಂತೆ ಪ್ರತಿಮಾತ್ಮಕವಾಗಿ ವೇದಗಳ ನಂತರದ ಸಾಹಿತ್ಯವನ್ನು ಗ್ರಹಿಸಬಹುದಾಗಿದೆ. ಹೀಗಾಗಿ

ವಿದೇಹರಾಜನಾದ ಜನಕನಿಗೆ ಯಾಜ್ಞವಲ್ಕ್ಯನು ಉಪದೇಶಿಸಿದ ಮಾತುಗಳು.

೧. **ಇಂಧೋ ಹ ವೈ ನಾಮೈಷ ಯೋಽಯಂ ದಕ್ಷಿಣೇಕ್ಷನ್ ಪುರುಷಃ ।**
ತಂವಾ ಏತಮಿಂಧಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣೈವ ।
ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷ ದ್ವಿಷಃ । *–ಬೃಹದಾರಣ್ಯಕ ಉಪನಿಷತ್ತು (೪.೨.೨)*

೨. **ತಸ್ಮಾದಿದಂದ್ರೋ ನಾಮೇದಂದ್ರೋಹ ವೈನಾಮ ।**
ತಮಿದಂದ್ರಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ ।
ಪರೋಕ್ಷಪ್ರಿಯಾ ಇವ ಹಿ ದೇವಾಃ ಪರೋಕ್ಷಪ್ರಿಯಾ ಇವ ಹಿ ದೇವಾಃ ॥ ೧೪ ॥
–ಐತರೇಯ ಉಪನಿಷತ್

೩. **ವಿಷ್ಣು ಧರ್ಮೋತ್ತರ ಪುರಾಣವು ವಿಷ್ಣುವಿನ ಆಯುಧಗಳ ಅಥವಾ ಲಾಂಛನಗಳ ನಡುವೆ ಸಂಬಂಧಗಳನ್ನು ಸ್ಥಾಪಿಸುತ್ತದೆ. ವಾಸ್ತವದಲ್ಲಿ ಅವು ಆಯುಧಗಳು ಅಲ್ಲ ಭಗವಂತ ಹರಿಯಿಂದ ಜನ್ಮ ತಳೆದ ಮಹಾಭೂತಗಳು. ಅವನ ಕೈಯಲ್ಲಿರುವ ಶಂಖವು ಆಕಾಶವೆಂದೂ, ಚಕ್ರವನ್ನು ಗಾಳಿ, ಗದೆಯನ್ನು ಬೆಂಕಿ, ಪದ್ಮವನ್ನು ನೀರು (ಮತ್ತು ಭೂಮಿ) ಎಂದೂ ತಿಳಿಯಬೇಕೆಂದಿದೆ.**

ಹಿಂದೂ ದೇವದೇವಿಯರ ರೂಪ ಕಲ್ಪನೆಗಳ ಅಧ್ಯಯನ, ಅವಲೋಕನಗಳು ಚಿತ್ತಾಕರ್ಷಕವೂ, ಸುಂದರ ಪ್ರತಿಮಾತ್ಮಕವೂ ಆಗಿವೆ. ಸ್ಥೂಲವಾಗಿ ಶಿವನನ್ನು ಆರಾಧಿಸುವ ಶೈವರು, ಶಕ್ತಿಯನ್ನು ಆರಾಧಿಸುವ ಶಾಕ್ತರು ಮತ್ತು ವಿಷ್ಣುವನ್ನು ಆರಾಧಿಸುವ ವೈಷ್ಣವರು ನಮ್ಮಲ್ಲಿದ್ದಾರೆ. ಜತೆಜತೆಗೇ ಪುರಾತನ ಶಾಸ್ತ್ರ ಗ್ರಂಥಗಳನ್ನು ಆಧರಿಸಿರುವ ಜನಪ್ರಿಯ ಹಿಂದೂ ದೈವಶಾಸ್ತ್ರದಲ್ಲಿ ಚತುರ್ಮುಖ ಬ್ರಹ್ಮನೆಂಬ ಇನ್ನೊಬ್ಬ ದೇವರೂಪನೂ ಇದ್ದಾನೆ. ಹಾಗಾಗಿ ಬ್ರಹ್ಮ, ವಿಷ್ಣು ಮತ್ತು ಶಿವ ಮೂವರನ್ನು ತ್ರಿಮೂರ್ತಿಗಳೆಂದು ಕರೆಯಲಾಗಿದೆ. ಬ್ರಹ್ಮನು ವಿಶ್ವದ ಸೃಷ್ಟಿಗೆ ಕಾರಣನಾದರೆ ವಿಷ್ಣುವು ಅದನ್ನು ರಕ್ಷಿಸುವ, ಶಿವನು ನಾಶಮಾಡುವ ಪಾತ್ರ ನಿರ್ವಹಿಸುತ್ತಾರೆಂದು ಹೇಳಲಾಗಿದೆ. ಸೃಷ್ಟಿ, ಸ್ಥಿತಿ, ಲಯಗಳೆಂಬ ಈ ಮೂರು ಕಾರ್ಯಗಳು ಚಕ್ರಿಯವಾಗಿ, ನಿರಂತರ ಆವರ್ತನೆಗೊಳ್ಳುತ್ತಲೇ ಇರುತ್ತವೆ ಎಂದೂ ಹೇಳಲಾಗಿದೆ. ಸೃಷ್ಟಿ, ಸ್ಥಿತಿ, ಲಯಗಳೆಂಬ ಚಟುವಟಿಕೆಗಳಲ್ಲಿ ಸತ್ವ, ರಜೋ ಮತ್ತು ತಮೋಗುಣಗಳ ಪ್ರಸ್ತುತಿಯೂ ತ್ರಿಮೂರ್ತಿಗಳಿಗೆ ಸಂವಾದಿಯಾಗಿದೆ. ಅಸ್ತಿತ್ವ ಮತ್ತು ಸುಸ್ಥಿತಿಗೆ ಕಾರಣವಾಗುವ ಸಾತ್ವಿಕ ಗುಣದ ಶಕ್ತಿಯನ್ನು ವಿಷ್ಣು, ಲಯದ ಅಥವಾ ಸರ್ವನಾಶದ ಅಬ್ಬರವನ್ನು ಪ್ರತಿನಿಧಿಸುವವನು ಶಿವ, ಬ್ರಹ್ಮನು ಈ ಎರಡರ/ಇಬ್ಬರ ನಡುವಿನ ರಜೋಗುಣವನ್ನು ಪ್ರತಿನಿಧಿಸುವನು; ಅಸ್ತಿತ್ವದ ಪ್ರತೀಕವಾಗಿರುವನು.

ಪ್ರಸ್ತುತ ಸಂಪುಟದಲ್ಲಿ ದೇವನಹಳ್ಳಿಯ ದಿ॥ ಚೆನ್ನಕೇಶವ ಆಚಾರ್ಯರ ವಿಷ್ಣು, ಕೃಷ್ಣ, ರಂಗನಾಥ ಇತ್ಯಾದಿ ದೇವ ರೂಪಗಳ ರೇಖಾಚಿತ್ರಗಳನ್ನು ಮಹಾವಿಷ್ಣು ನಿಧಿ ಶೀರ್ಷಿಕೆಯ ಅಡಿ ಸಂಕಲಿಸಿ, ಆ ರೂಪಗಳಿಗೆ ಸಂಬಂಧಿಸಿದಂತೆ ಪುಟ್ಟ ಪುಟ್ಟ ವಿವರಗಳನ್ನು ನೀಡಲಾಗಿದೆ.



೨. ವಿಷ್ಣು

ಮಹಾವಿಷ್ಣು ಎಂದು ಕರೆಯಲ್ಪಡುವ ವಿಷ್ಣುವು ತ್ರಿಮೂರ್ತಿಗಳಲ್ಲಿ ಎರಡನೆಯವನು. ಸತ್ವಗುಣ ಸಂಕೇತಿಯೂ ಆಗಿದ್ದಾನೆ. ಹಾಗಾಗಿ ಈ ವಿಶ್ವದ ಸುಸ್ಥಿತಿಯ ನಿರ್ವಹಣೆ ಮತ್ತು ರಕ್ಷಣೆಗೆ ಕಾರಣನಾಗಿ ಕೇಂದ್ರಾಭಿಗಮನದ ಶಕ್ತಿಯಂತಿರುವನು.


'ವಿಷ್ಣು' ಎಂದರೆ 'ವ್ಯಾಪಿ', ವ್ಯಾಪಿಸಿರುವವನು, ಎಲ್ಲೆಲ್ಲೂ ಪ್ರವೇಶಿಸಿರುವವನು ಎಂದು ಅರ್ಥೈಸಲಾಗಿದೆ. ಹಾಗಾಗಿ ಅವನು ವಿಶ್ವದ ಅಂತಸ್ಥ ಸತ್ಯನಾಗಿಯೂ, ಅತೀತನಾಗಿಯೂ ಕಾಣುತ್ತಾನೆ. ವಿಶ್ವದ ಎಲ್ಲ ವಸ್ತುಗಳ ಅಸ್ತಿತ್ವ ಮತ್ತು ಅವುಗಳೊಳಗಿನ ಶಕ್ತಿಯೂ, ಅವುಗಳ ಕಾರಣವೂ ಅವನೇ ಆಗಿದ್ದಾನೆ ಎಂದು ಹೇಳಲಾಗಿದೆ. ವಿಷ್ಣುವನ್ನು ನಾರಾಯಣ ಎಂಬ ಜನಪ್ರಿಯ ಹೆಸರಿನಿಂದಲೂ ಕರೆಯಲಾಗುತ್ತಿದೆ. ಹಾಗೆಂದರೆ ಕಾರಣ ಜಲದಲ್ಲಿ ನೆಲೆಗೊಂಡಿರುವವನು, ಮನುಕುಲದ ನೆಲೆಯಾಗಿರುವವನು, ಮಾನವರ ಹೃದಯಗಳಲ್ಲಿ ನೆಲೆಸಿರುವವನು, ಮತ್ತು ಮಾನವರೆಲ್ಲರ ಪರಮ ಪದದ ಗುರಿಯಾಗಿರುವವನು ಎಂದೂ ವಿವರಿಸಲಾಗಿದೆ.


ವಿಷ್ಣುವಿನ ರೂಪವನ್ನು ವಿಶಿಷ್ಟವಾಗಿ ಕಲ್ಪಿಸಲಾಗಿದೆ. ನೀಲ ಮೇಘಶ್ಯಾಮ ಎಂದು ಅವನನ್ನು ವರ್ಣಿಸಲಾಗಿದೆ. ಹಾಗಾಗಿ ಅವನ ಮೈಬಣ್ಣವು ಮಳೆ ಹನಿಗಳ ಸಂಕುಲವು ಮಳೆಯನ್ನು ಸುರಿಸಲು ಇನ್ನೇನು ಕ್ಷಣಗಣನೆ ಮಾಡುತ್ತಿರುವ ಕಾಳಮೇಘದ ಬಣ್ಣವೇ ಆಗಿದೆ. ಅನಂತ ಆಕಾಶದ ಬಣ್ಣವು ಗಾಢ ನೀಲವರ್ಣದ್ದಾಗಿದ್ದು ಸರ್ವವ್ಯಾಪಿ, ವಿಶ್ವಶಕ್ತಿಯ ಪ್ರತಿಮಾತ್ಮಕ ವಿಷ್ಣುವನ್ನು ನೀಲನೆಂದು ಕಲ್ಪಿಸಲಾಗಿದೆ. ಹಾಗಾಗಿಯೇ ನೀಲಮೇಘ ಶ್ಯಾಮನೇ ಅವನು.

ಸಾಮಾನ್ಯವಾಗಿ ವಿಷ್ಣುವಿನ ಪ್ರತಿಮೆಗೆ ಒಂದು ಮುಖ, ಶಂಖ, ಚಕ್ರ, ಗದಾ ಪದ್ಮಗಳನ್ನು ಹಿಡಿದಿರುವ ನಾಲ್ಕು ಕೈಗಳು, ಇಳಿಬಿಟ್ಟ ಕೇಶರಾಶಿಯ ನಡುವೆ ಅಲಂಕರಿಸಿರುವ ಕೌಸ್ತುಭವೆಂಬ ರತ್ನದ ಕಂಠಾಭರಣ; ಎಡಭಾಗದ ಎದೆಯ ಮೇಲೆ ಪ್ರಕೃತಿಯ ಸಾಂಕೇತಿಕ

ಶ್ರೀ ವತ್ಸವೆಂಬ ಮಚ್ಚೆ, ರತ್ನಗಳಿಂದಲೋ, ಸುಗಂಧಪುಷ್ಪಗಳಿಂದಲೋ, ರಚಿತವಾಗಿರುವ ವೈಜಯಂತಿ ಎಂಬ ಹಾರ ಇರುತ್ತವೆ. ನಾಲ್ಕು ತೋಳುಗಳು ನಾಲ್ಕು ದಿಕ್ಕುಗಳ ಪ್ರಾತಿನಿಧ್ಯತೆ ವಹಿಸುತ್ತವೆ. ಹಾಗಾಗಿ ಅವನ ಪರಮ ಶಕ್ತಿಯು ಎಲ್ಲೆಡೆ ಹರಡಿಕೊಂಡಿದೆ. ಶಂಖವು ಪಂಚಭೂತಗಳ ಪ್ರತೀಕ, ಚಕ್ರವು ಅವನ ವಿಶಾಲ ಮನಸ್ಸಿನ ಪ್ರತೀಕ. ಗದೆಯು ವಿಶ್ವಬುದ್ಧಿಗೆ ಪ್ರತೀಕವಾದರೆ ಪದ್ಮವು ವಿಕಾಸಗೊಳ್ಳುತ್ತಿರುವ ವಿಶ್ವವನ್ನು ಸಂಕೇತಿಸುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಪದ್ಮವು ಸೃಷ್ಟಿಯ ಸಂಕೇತ, ಚಕ್ರವು ಸ್ಥಿತಿಯ ಸಂಕೇತ, ಗದೆಯು ಸಂಹಾರದ ಸಂಕೇತ ಹಾಗೂ ಶಂಖವು ಮುಕ್ತಿಗೆ ಸಂಕೇತ. ಹೀಗಾಗಿ ವಿಶ್ವದ ಸೃಷ್ಟಿಯು ಪಂಚಭೂತಗಳ, ಮನಸ್ಸಿನ ಮತ್ತು ಬುದ್ಧಿಯ ಸಂಯೋಜನೆಯಿಂದ ಮಾತ್ರ ಸಾಧ್ಯ ಎಂದು ಹೇಳಲಾಗಿದೆ. ಈ ಎಲ್ಲ ಸಾಂಕೇತಿಕ/ ಪ್ರತೀಕಗಳ ಒಟ್ಟು ಅರ್ಥವು "ವಿಷ್ಣುವು ಸೃಷ್ಟಿಕರ್ತನೂ, ವಿಶ್ವಾತ್ಮಕ ಒಡೆಯನೂ ಆಗಿದ್ದಾನೆ" ಎಂಬುದನ್ನು ಸೂಚಿಸುತ್ತದೆ.

ಎಲ್ಲದರಲ್ಲಿಯೂ ಇರುವವನು, ಎಲ್ಲ ದಿಕ್ಕುಗಳಿಗೂ ವ್ಯಾಪಿಸಿರುವವನಾದ ವಿಷ್ಣುವು ಎಲ್ಲವನ್ನೂ ಅರಗಿಸಿಕೊಂಡಿರುವವನು/ ಒಳಗೊಂಡವನು ಆಗಿದ್ದಾನೆ.





చెన్నకేశవులు
శ్రీదేవి
భూదేవి



శ్రీలక్ష్మీనారాయణులు
గరుడాళ్వార్
హనుమంతులు

ಗರುಡವಾಹನ ವಿಷ್ಣು




ಶ್ರೀಮನ್ನಾರಾಯಣ





ಅರ್ಚಾಮೂರ್ತಿ: ಶ್ರೀಮನ್ನಾರಾಯಣ





ಗರುಡವಾಹನ ವಿಷ್ಣು





ಶ್ರೀಹರಿಗೆ ಹನುಮಗರುಡರ ಸೇವೆ



ಶ್ರೀಭೂಸಹಿತ ಶ್ರೀನಾರಾಯಣ



೩. ವಿಷ್ಣುವಿನ ಅವತಾರಗಳು

ಅಗ್ನಿಪುರಾಣದಲ್ಲಿ ವಸಿಷ್ಠರ ಪ್ರಾರ್ಥನೆಯಂತೆ ಅಗ್ನಿಯು ಸಂತೋಷದಿಂದ ವಿವರಿಸಿದ ವಿಷ್ಣುವಿನ ಅವತಾರಗಳ ವಿವರಗಳಿವೆ. ಯುಗಯುಗಗಳಲ್ಲಿ ಹುಟ್ಟಿದ ದುಷ್ಟರನ್ನು ನಾಶಮಾಡಲು ಅನೇಕ ಅವತಾರಗಳನ್ನು ಭಗವಂತನು ತಾಳಿದನೆಂದು ಸೂಚಿಸಲಾಗಿದೆ. ಅವು ಮತ್ಸ್ಯವತಾರ, ಕೂರ್ಮ ಅವತಾರ, ವರಾಹ ಅವತಾರ, ನರಸಿಂಹ ಅವತಾರ, ವಾಮನ ಅವತಾರ, ಪರಶುರಾಮ ಅವತಾರ, ಶ್ರೀರಾಮ, ಬಲರಾಮ, ಶ್ರೀಕೃಷ್ಣ, ಬುದ್ಧ ಮತ್ತು ಕಲ್ಕಿ ಅವತಾರಗಳು.

ವಿಷ್ಣುವಿನ ಪ್ರಧಾನ ಅವತಾರಗಳ ಜತೆಜತೆಗೇ ಹಿಂದೂ ಪುರಾಣಗಳಲ್ಲಿ ಅವನ ಅವತಾರದ ಕಥೆಗಳು ಸಾಕಷ್ಟಿವೆ. ಅವು ಅಪ್ರಧಾನ ಅವತಾರಗಳೆಂದು ಉಲ್ಲೇಖಿಸಲ್ಪಟ್ಟಿವೆ; ವೈಕುಂಠ ನಾರಾಯಣಮೂರ್ತಿ, ಶಯನವಿಷ್ಣು, ಲಕ್ಷ್ಮೀನಾರಾಯಣ, ವಟಪತ್ರಶಾಯಿ, ಹಯಗ್ರೀವ, ಯಜ್ಞಮೂರ್ತಿ, ಕಪಿಲ, ಜಗನ್ನಾಥ, ಅನಂತ, ವಿಶ್ವರೂಪ, ಹಂಸಮೂರ್ತಿ, ಮನ್ಮಥ, ವ್ಯಾಸ, ಹರಿಹರ ಮೂರ್ತಿ, ಗೋಪಾಲಕೃಷ್ಣ ಮೂರ್ತಿ, ಮದನ ಗೋಪಾಲಮೂರ್ತಿ, ದತ್ತಾತ್ರೇಯ, ನರ–ನಾರಾಯಣ, ಧನ್ವಂತರಿ, ವರದರಾಜ, ವೆಂಕಟೇಶ್ವರ, ಪುರಿಜಗನ್ನಾಥ, ಮೋಹಿನೀ ಹೀಗೆ ಹಲವು ರೂಪಗಳು ನೆನಪಾಗುತ್ತವೆ.

ಮೈಸೂರಿನ ಒಡೆಯರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ (ಕ್ರಿ.ಶ. ೧೭೯೪–೧೮೬೮) ಶ್ರೀ ತತ್ವನಿಧಿಯ ಒಂಬತ್ತು ನಿಧಿಗಳಲ್ಲಿ ಎರಡನೆಯದೇ ವಿಷ್ಣು ನಿಧಿ. ಒಟ್ಟು ೩೨೪ ಶ್ಲೋಕಗಳಲ್ಲಿ, ೧೧೯ ಚಿತ್ರಗಳಲ್ಲಿ ವಿಷ್ಣುವಿನ ವಿರಾಟ್ ರೂಪದ ಆತ್ಮವನ್ನು ಗ್ರಹಿಸಲಾಗಿದೆ; ವಿಷ್ಣುವಿನ ವಿಶ್ವಕೋಶವನ್ನೇ ನಮ್ಮ ಮುಂದಿರಿಸಲಾಗಿದೆ. ಭಾಗವತದ ಎರಡನೆಯ ಸ್ಕಂದದಲ್ಲಿ ವಿರಾಟ್ ಪುರುಷನ ಸ್ವರೂಪದ ವರ್ಣನೆ ಇದೆ. ಈ ವರ್ಣನೆಯಿಂದ ಪ್ರಾರಂಭವಾಗಿ ಸಪರಿವಾರ ಶ್ರೀ ಕೃಷ್ಣನ ಧ್ಯಾನದಲ್ಲಿ ಪಠ್ಯವು ಮುಕ್ತಾಯಗೊಂಡಿದೆ. ಅಂದರೆ ವಿಷ್ಣು ನಿಧಿಯಲ್ಲಿ ವಿಷ್ಣುವಿನ ಬೇರೆ ಬೇರೆ ಮೂರ್ತಿಗಳ ಧ್ಯಾನ, ಮತ್ತು ವರ್ಣನೆಗಳಿವೆ. ಪದ್ಮೋತ್ತರ ಖಂಡ, ಪದ್ಮ ಪುರಾಣ, ಅಷ್ಟಾಕ್ಷರಿ ಕಲ್ಪ, ಪಾಂಚರಾತ್ರ, ಬ್ರಹ್ಮಾಂಡ ಪುರಾಣ, ಭಟ್ಟ ಭಾಸ್ಕರೀಯ, ತೃಚಕಲ್ಪ, ರಾಮಾಷ್ಟೋತ್ತರ, ಶ್ರೀರಾಮಕಲ್ಪ, ಮಂತ್ರಸಾರ ಸಂಗ್ರಹ, ರಾಮಾರ್ಚನ ಚಂದ್ರಿಕೆ, ಭಾಗವತ, ಅಥರ್ವಣ ರಹಸ್ಯ, ಮಂತ್ರಸಾರ, ಮಂತ್ರದೇವತಾ ಪ್ರಕಾಶಿಕೆ, ನರಸಿಂಹಕಲ್ಪ, ಭೂಗೋಲ ಸಾರ ಸಂಗ್ರಹ, ವರಾಹ ಪುರಾಣ, ಸುದರ್ಶನ ಸಂಹಿತೆ, ವಿಷ್ಣು ಧರ್ಮೋತ್ತರ, ತ್ರಯೋದಶಾಕ್ಷರ ಮಂತ್ರಧ್ಯಾನ, ಉಮ ಮಹೇಶ್ವರ ಸಂಹಿತೆ, ಬ್ರಹ್ಮಾಂಡ ಪುರಾಣದ ಶ್ರೀರಂಗ ಮಹಾತ್ಮೆ, ಮೊದಲಾದ ಗ್ರಂಥಗಳನ್ನು ಆಕರಗಳನ್ನಾಗಿ ಮುಮ್ಮಡಿ ಅವರು ಬಳಸಿದ್ದಾರೆ.

ಪದ್ಮೋತ್ತರ ಖಂಡದಲ್ಲಿ ಮಹಾ ವೈಕುಂಠ ಮೂರ್ತಿಯ ಧ್ಯಾನವು ವಿಶಿಷ್ಟವಾಗಿದೆ. "ಸಾವಿರ ಕಂಬಗಳಿಂದ ಕೂಡಿ, ಮಣಿಗಳಿಂದ ಅಲಂಕೃತವಾಗಿ, ಸೂರ್ಯನ ಪ್ರಕಾಶದಂತೆ ಹೊಳೆಯುವ, ದಿವ್ಯವಾದ ಆ ಪ್ರಸಿದ್ಧ ಭವನದಲ್ಲಿ ಭಗವಂತನಾದ ಹರಿಯು ಕುಳಿತು ಕಂಗೊಳಿಸುತ್ತಿದ್ದಾನೆ... ಕಮಲ ದಳಗಳ ತುದಿಯಲ್ಲಿ ಸರ್ವಲಕ್ಷಣ ಸಂಪನ್ನರಾದ ವಿಮಲ ಮೊದಲಾದ ಶಕ್ತಿಗಳು ಕೈಯಲ್ಲಿ ಚಾಮರಗಳನ್ನು ಹಿಡಿದು ಕುಳಿತ್ತಿದ್ದಾರೆ. ಆ ಶಕ್ತಿಯರ ನಡುವೆ ಭಗವಂತ ಅಚ್ಯುತನಾದ ಹರಿಯು ಕುಳಿತಿದ್ದಾನೆ. ಅವನ ನಾಲ್ಕು ಕೈಗಳು ದಿವ್ಯವಾದ ಆಭರಣಗಳಿಂದ ಅಲಂಕೃತವಾಗಿವೆ. ಶಂಖ ಚಕ್ರ ಗದೆ ಮತ್ತು ಕಮಲವನ್ನು ಆ ನಾಲ್ಕು ಕೈಗಳಲ್ಲಿ ಹಿಡಿದಿದ್ದಾನೆ. ಭುಜಕೀರ್ತಿ, ತೋಳುಬಳೆ, ಹಾರ ಮೊದಲಾದ ಆಭರಣಗಳನ್ನು ಅಲಂಕರಿಸಿಕೊಂಡಿದ್ದಾನೆ. ಉದಯ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯಿಂದ ಶೋಭಿಸುತ್ತಿರುವ ಕುಂಡಲಗಳು ಕಿವಿಗಳನ್ನು ಅಲಂಕರಿಸಿವೆ. ಪುರುಷೋತ್ತಮನಾದ ಶ್ರೀಹರಿಯು ಸುವರ್ಣ ಲಕ್ಷ್ಮೀದೇವಿ, ಭೂದೇವಿಯರಿಂದ ಸದಾ ಸೇವಿಸಲ್ಪಡತಕ್ಕವನಾಗಿ ವೈಕುಂಠವೆಂಬ ಪಟ್ಟಣದಲ್ಲಿ ಸ್ವತಂತ್ರನಾಗಿ ಸದಾ ಸಂತೋಷ ಅನುಭವಿಸುತ್ತಿದ್ದಾನೆ. ಜ್ಞಾನಿಗಳಾದ ಯೋಗಿಗಳು ಎಂಟು ಅಕ್ಷರಗಳುಳ್ಳ ವೈಷ್ಣವ ಮಂತ್ರದಿಂದ ಸಿದ್ಧಿಯನ್ನು ಪಡೆದು ವೈಕುಂಠಲೋಕವನ್ನು ಹೊಂದುತ್ತಾರೆ. ಇವರನ್ನು ಬಿಟ್ಟು ಬೇರೆಯವರು ಯಾವ ರೀತಿಯಿಂದಲೂ ಈ ಲೋಕವನ್ನು ಹೊಂದಲಾರರು, ಎಂದು ಹೇಳಲಾಗಿದೆ. ಶ್ರೀಹರಿಯ ರೂಪವನ್ನು ಕೆಂಪು ಬಣ್ಣದಲ್ಲಿ ಚಿತ್ರಿಸಬೇಕೆಂದಿದೆ.




ಶ್ರೀ ರಾಮಮೂರ್ತಿ ಬಲರಾಮ ಬುದ್ಧಮೂರ್ತಿ





ನರಸಿಂಹ ವಾಮನ ಪರಶುರಾಮಮೂರ್ತಿ



ಋಷಿಗಳೊಂದಿಗೆ ಕಲ್ಕಿ ಅವತಾರಮೂರ್ತಿ

೪. ವಿಷ್ಣುವಿನ ಚತುರ್ವಿಂಶತಿ ಮೂರ್ತಿಲಕ್ಷಣ

ಪದ್ಮ ಪುರಾಣದಲ್ಲಿ ದೇವತೆಗಳಿಗೂ ಸ್ವಾಮಿಯಾದ ಹರಿಯನ್ನು ಆದಿಶೇಷನ ಮೇಲೆ ಮಲಗಿರುವಂತೆ ಚಿತ್ರಿಸಬೇಕು. ಅವನಿಗೆ ಎರಡು ಕೈಗಳು ಇರಬೇಕು. ಸ್ವಾಮಿಯ ಬಲಗಡೆಯ ಪಾದವೂ ಲಕ್ಷ್ಮಿಯ ಮಡಿಲಲ್ಲಿರಬೇಕು ಮತ್ತೊಂದು ಪಾದ ಅಂದರೆ ಎಡಗಾಲು ಆದಿಶೇಷನ ಶರೀರದ ತೊಡೆಯ ಭಾಗದಲ್ಲಿರಬೇಕು. ಸ್ವಾಮಿಯ ಎಡಗೈ ಅವನ ಎಡಗಡೆಯ ಮೊಣಕಾಲಿನ ಮೇಲೆ ಚಾಚಿಕೊಂಡಿರಬೇಕು. ಆ ದೇವನ ಬಲಗೈ ತನ್ನ ತಲೆಭಾಗದಲ್ಲಿರುವಂತಿರಬೇಕು. ಅವನ ಹೊಕ್ಕುಳಿಂದ ಮೂಡಿ ಬಂದಿರುವ ಕಮಲ ಪುಷ್ಪದಲ್ಲಿ ಬ್ರಹ್ಮನು ಸುಖವಾಗಿ ಕುಳಿತಿರುವಂತೆ ಚಿತ್ರಿಸಬೇಕು. ಈ ರೂಪವು ಮೋಡದಂತಹ ಬಣ್ಣದಲ್ಲಿರಬೇಕು ಎಂದು ಉಲ್ಲೇಖಿಸಲಾಗಿದೆ. ಪಾಂಚರಾತ್ರಾಗಮದ ಕ್ರಿಯಾಪಾದದಲ್ಲಿರುವಂತೆ ಮುಮ್ಮಡಿಯವರು ಕೇಶವ ಮೊದಲಾದ ಹಲವು ಮೂರ್ತಿಗಳ ಲಕ್ಷಣಗಳನ್ನು ವಿವರಿಸಿದ್ದಾರೆ.

ವಿಷ್ಣು

ವಿಷ್ಣುವು ಬಿಳಿಯ ಬಣ್ಣವುಳ್ಳವನು, ಶಂಖ, ಚಕ್ರ, ಗದೆ ಕಮಲಗಳನ್ನು ಹಿಡಿದಿದ್ದಾನೆ. ಚಿನ್ನದಂತೆ ಮಿರುಗುವ ಹಳದಿಯ ರೇಷ್ಮೆಯ ಬಟ್ಟೆಗಳನ್ನು ತೊಟ್ಟಿದ್ದಾನೆ. ಕೊರಳಿನಲ್ಲಿ ಹೂ ಮಾಲೆಯನ್ನು ಧರಿಸಿದ್ದಾನೆ. ಭುಜ ಕೀರ್ತಿ, ತೋಳು ಬಳೆಗಳನ್ನು ಆಭರಣಗಳನ್ನಾಗಿ ಅಲಂಕರಿಸಿಕೊಂಡಿದ್ದಾನೆ. ಎಡಭಾಗದ ಕೈಯಲ್ಲಿ ಶಂಖ, ಎಡಭಾಗದ ಕೆಳಗಿನ ಕೈಯಲ್ಲಿ ಚಕ್ರ, ಬಲಭಾಗದ ಕೆಳಗಿನ ಕೈಯಲ್ಲಿ ಗದೆ, ಬಲಭಾಗದ ಮೇಲಿನ ಕೈಯಲ್ಲಿ ಕಮಲಗಳಿರುತ್ತವೆ. ಬಿಳಿಯ ಬಣ್ಣ ಅಂದರೆ ಪದ್ಮ ಪುರಾಣದಲ್ಲಿರುವಂತೆ ಕಮಲದ, ಹೂವಿನ ಕೇಸರದಂತಹ ಬಣ್ಣದಲ್ಲಿ ವಿಷ್ಣುವನ್ನು ಚಿತ್ರಿಸಬೇಕೆಂದಿದೆ.

ಕೃಷ್ಣ

ಕಪ್ಪು ಬಣ್ಣದ ಕೃಷ್ಣನು ಗದೆ, ಕಮಲ, ಶಂಖ, ಚಕ್ರಗಳನ್ನು ಹಿಡಿದಿದ್ದಾನೆ. ಬಲಭಾಗದ ಕೆಳಗಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಕಮಲ, ಬಲಭಾಗದ ಮೇಲಿನ ಕೈಯಲ್ಲಿ ಗದೆ, ಎಡಭಾಗದ ಕೆಳಗಿನ ಕೈಯಲ್ಲಿ ಚಕ್ರಗಳು ಇರುತ್ತವೆ. ಎಂದು ಉಲ್ಲೇಖಿಸಲಾಗಿದೆ.

ಕೇಶವ

ಚಿನ್ನದಂತಹ ಹಳದಿ ಬಣ್ಣದ ಕೇಶವನು ಶಂಖ, ಚಕ್ರ, ಗದೆ ಮತ್ತು ಕಮಲಗಳನ್ನು ಆಯುಧಗಳಾಗಿ ಧರಿಸಿದ್ದಾನೆ. ಅಚ್ಚ ಬಿಳಿಯ ಬಟ್ಟೆಗಳನ್ನು ತೊಟ್ಟಿದ್ದಾನೆ. ಮುತ್ತಿನ ಆಭರಣಗಳನ್ನು ಅಲಂಕರಿಸಿಕೊಂಡಿದ್ದಾನೆ. ಬಲಭಾಗದ ಮೇಲಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಚಕ್ರ, ಎಡಭಾಗದ ಕೆಳಗಿನ ಕೈಯಲ್ಲಿ ಗದೆ, ಬಲಭಾಗದ ಕೆಳಗಿನ ಕೈಯಲ್ಲಿ ಕಮಲವನ್ನು ಧರಿಸಿದ್ದಾನೆ. ಕೇಶವನ ರೂಪವು ಚಿನ್ನದ ಬಣ್ಣದಲ್ಲಿ ಗ್ರಹಿಸಲ್ಪಡಬೇಕು.

ನಾರಾಯಣ

ಮೋಡದಂತೆ ಕಂದು ನೀಲಿಬಣ್ಣದ ನಾರಾಯಣನ ರೂಪವು ಕಮಲ, ಶಂಖ, ಗದೆ ಮತ್ತು ಚಕ್ರಗಳನ್ನು ಧರಿಸಿದೆ. ಹಳದಿ ಬಣ್ಣದ ಬಟ್ಟೆಗಳನ್ನು, ಮಣಿಮಯವಾದ ಆಭರಣಗಳನ್ನೂ ಈ ರೂಪವು ಹೊಂದಿದೆ. ಬಲಭಾಗದ ಕೆಳಗಿನ ಕೈಯಲ್ಲಿ

ಶಂಖ, ಬಲಭಾಗದ ಮೇಲಿನ ಕೈಯಲ್ಲಿ ಕಮಲ, ಎಡಭಾಗದ ಮೇಲಿನ ಕೈಯಲ್ಲಿ ಗದೆ, ಮತ್ತು ಕೆಳಗಿನ ಕೈಯಲ್ಲಿ ಚಕ್ರವು ಇವೆ. ಪದ್ಮ ಪುರಾಣದ ವಿವರಣೆಯಂತೆ ಬಿಳಿಯ ಬಣ್ಣದ ರೂಪ ಇದು. ಆದರೆ ಪಾಂಚರಾತ್ರಾಗಮದ ಕ್ರಿಯಾ ಪಾದದಲ್ಲಿ ಮೋಡದಂತಹ ಕಂದು ನೀಲಿ ಬಣ್ಣ ಎಂದು ಹೇಳಲಾಗಿದೆ.

ಮಾಧವ

ಮಾಧವನು ನೀಲಿಯ ಕಮಲದಂತಹ ಬಣ್ಣವಿರುವವನು ಚಕ್ರ, ಶಂಖ, ಗದೆ ಮತ್ತು ಕಮಲಗಳನ್ನು ಧರಿಸಿದ್ದಾನೆ. ಹಲವು ಬಣ್ಣಗಳ ಬಟ್ಟೆಗಳನ್ನು ತೊಟ್ಟಿದ್ದಾನೆ. ಕಮಲದಂತಹ ಕಣ್ಣುಗಳು ಇವನವು. ಎಡಭಾಗದ ಮೇಲಿನ ಕೈಯಲ್ಲಿ ಶಂಖ, ಕೆಳಗಿನ ಕೈಯಲ್ಲಿ ಕಮಲ, ಬಲ ಭಾಗದ ಮೇಲಿನ ಕೈಯಲ್ಲಿ ಚಕ್ರ, ಕೆಳಗಿನ ಕೈಯಲ್ಲಿ ಗದೆ ಇವೆ. ಕಪ್ಪು ಬಣ್ಣದ ರೂಪ ಇವನದು.

ಗೋವಿಂದ

ಗೋವಿಂದನು ಚಂದ್ರನಂತೆ ಬಿಳಿಯ ಬಣ್ಣವುಳ್ಳವನು, ಕಮಲ, ಶಂಖ, ಗದೆ, ಮತ್ತು ಚಕ್ರಗಳನ್ನು ಹಿಡಿದಿದ್ದಾನೆ. ಕೆಂಪು ಕಮಲದಂತಿರುವ ಕಣ್ಣುಗಳು, ಹೊಳೆಯುವ ಚಿನ್ನದ ಆಭರಣಗಳನ್ನು ಧರಿಸಿದ್ದಾನೆ. ಎಡಭಾಗದ ಕೆಳಗಿನ ಕೈಯಲ್ಲಿ ಶಂಖ, ಮೇಲಿನ ಕೈಯಲ್ಲಿ ಕಮಲ, ಬಲಭಾಗದ ಮೇಲಿನ ಕೈಯಲ್ಲಿ ಗದೆ, ಕೆಳಗಿನ ಕೈಯಲ್ಲಿ ಚಕ್ರ ಇವೆ. ಬಿಳಿಯ ಬಣ್ಣದ ರೂಪ ಇದು.

ಮಧುಸೂದನ

ಮಧುಸೂದನನು ಕಮಲದ ಬಣ್ಣವುಳ್ಳವನು; ಕಾಂತಿಯುಕ್ತನು. ಕಮಲದಲ್ಲಿಯೇ ವಾಸಿಸುವವನು. ಇವನು ಸದಾಕಾಲವು ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ತನ್ನ ನಾಲ್ಕು ಕೈಗಳಲ್ಲಿ ಹಿಡಿದಿದ್ದಾನೆ. ಬಲಭಾಗದ ಮೇಲಿನ ಕೈಯಲ್ಲಿ ಶಂಖ, ಕೆಳಗಿನ ಕೈಯಲ್ಲಿ ಚಕ್ರ, ಎಡಭಾಗದ ಮೇಲಿನ ಕೈಯಲ್ಲಿ ಪದ್ಮ, ಕೆಳಗಿನ ಕೈಯಲ್ಲಿ ಗದೆ ಇವೆ. ಕೆಂಪುಬಣ್ಣದಲ್ಲಿ ಮಧುಸೂದನನ ರೂಪವನ್ನು ಚಿತ್ರಿಸಬೇಕು.

ತ್ರಿವಿಕ್ರಮ

ತ್ರಿವಿಕ್ರಮನ ಶರೀರದ ಬಣ್ಣವು ಕೆಂಪು, ಶಂಖ, ಚಕ್ರ, ಗದೆ ಮತ್ತು ಕಮಲಗಳನ್ನು ಹಿಡಿದಿದ್ದಾನೆ. ತಲೆಯಲ್ಲಿ ಕಿರೀಟವನ್ನು ಕುತ್ತಿಗೆಯಲ್ಲಿ ಹಾರವನ್ನು, ಭುಜಗಳಲ್ಲಿ ತೋಳುಬಳೆಗಳನ್ನು, ಕಿವಿಗಳಲ್ಲಿ ಕುಂಡಲಗಳನ್ನು ಧರಿಸಿದ್ದಾನೆ. ಎಡಭಾಗದ ಮೇಲಿನ ಕೈಯಲ್ಲಿ ಚಕ್ರ, ಕೆಳಗಿನ ಕೈಯಲ್ಲಿ ಶಂಖ, ಬಲಭಾಗದ ಮೇಲಿನ ಕೈಯಲ್ಲಿ ಗದೆ, ಕೆಳಗಿನ ಕೈಯಲ್ಲಿ ಕಮಲ ಇವೆ. ಈ ಮೊದಲೇ ಹೇಳಿರುವಂತೆ ಕೆಂಪು ಬಣ್ಣದಲ್ಲಿ ಚಿತ್ರಿಸಬೇಕು.

ವಾಮನ

ವಾಮನನು ಬಿಳಿಯ ಕಮಲದಂತಹ ಬಣ್ಣ ಉಳ್ಳವನು. ಕಣ್ಣುಗಳು ಕಮಲದಂತೆ ವಿಶಾಲವಾಗಿವೆ. ಇವನು ಶಂಖ ಗದೆ, ಚಕ್ರ ಮತ್ತು ಕಮಲಗಳನ್ನು ಧರಿಸಿದ್ದಾನೆ. ಬಲಭಾಗದ ಕೆಳಗಿನ ಕೈಯಲ್ಲಿ ಶಂಖ, ಬಲಭಾಗದ ಮೇಲಿನ ಕೈಯಲ್ಲಿ ಚಕ್ರ, ಎಡಭಾಗದ ಮೇಲಿನ ಕೈಯಲ್ಲಿ ಗದೆ, ಎಡಭಾಗದ ಕೆಳಗಿನ ಕೈಯಲ್ಲಿ ಕಮಲ ಇವೆ. ಬಿಳಿಯ ಬಣ್ಣದ ರೂಪ ಇವನದು. ಆದರೆ ಪದ್ಮ ಪುರಾಣದಲ್ಲಿ ಬಾಲ ಸೂರ್ಯನಂತಹ ಕೆಂಪು ಬಣ್ಣ ಎಂದು ಹೇಳಲಾಗಿದೆ.

ಶ್ರೀಧರ

ಬಿಳಿಯ ಕಮಲದಂತಹ ಬಣ್ಣ ಶ್ರೀಧರ ಮೂರ್ತಿಯದು. ಚಕ್ರ, ಶಂಖ, ಗದೆ, ಮತ್ತು ಕಮಲಗಳನ್ನು ಕೈಗಳಲ್ಲಿ ಹಿಡಿದಿದ್ದಾನೆ. ಕೆಂಪು ಕಮಲದಂತಹ ಕಣ್ಣುಗಳು, ಮುತ್ತಿನ ಹಾರದಿಂದ ಅಲಂಕೃತನಾಗಿದ್ದಾನೆ. ಎಡಭಾಗದ ಕೆಳಗಿನ ಕೈಯಲ್ಲಿ ಶಂಖ, ಬಲಭಾಗದ ಕೆಳಗಿನ ಕೈಯಲ್ಲಿ ಕಮಲ, ಬಲಭಾಗದ ಮೇಲಿನ ಕೈಯಲ್ಲಿ ಚಕ್ರ, ಎಡಭಾಗದ ಮೇಲಿನ ಕೈಯಲ್ಲಿ ಗದೆ ಇವೆ. ಬಿಳಿಯ ಬಣ್ಣದ ರೂಪ ಇದು. ಪದ್ಮ ಪುರಾಣದಲ್ಲಿ ಹಳದಿಯ ಬಣ್ಣ ಎಂದು ಹೇಳಲಾಗಿದೆ.

ಹೃಷಿಕೇಶ

ಹೃಷಿಕೇಶನು ಮಿಂಚಿನಂತಹ ಹೊನ್ನಿನ ಬಣ್ಣದಿಂದ ಕಂಗೊಳಿಸುತ್ತಾನೆ. ಚಕ್ರ, ಶಂಖ, ಗದೆ ಮತ್ತು ಕಮಲಗಳನ್ನು ಕೈಗಳಲ್ಲಿ ಹಿಡಿದಿದ್ದಾನೆ. ಕೆಂಪು ಬಣ್ಣದ ಬಟ್ಟೆಗಳನ್ನು ತೊಟ್ಟಿದ್ದಾನೆ. ಕೆಂಪು ಹೂಗಳ ಮಾಲೆಯನ್ನು ಧರಿಸಿದ್ದಾನೆ. ಕಮಲದ ಹೂಗಳನ್ನು ಅಲಂಕರಿಸಿಕೊಂಡಿದ್ದಾನೆ. ಎಡಭಾಗದ ಕೆಳಗಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಕಮಲ, ಬಲಭಾಗದ ಕೆಳಗಿನ ಕೈಯಲ್ಲಿ ಗದೆ, ಬಲಭಾಗದ ಮೇಲಿನ ಕೈಯಲ್ಲಿ ಚಕ್ರಗಳನ್ನು ಹಿಡಿದಿದ್ದಾನೆ. ಚಿನ್ನದ ಬಣ್ಣದ ದೇಹ.

ಪದ್ಮನಾಭ

ಇಂದ್ರನೀಲಮಣಿಯಂತಹ ದೇಹಕಾಂತಿಯವನೇ ಪದ್ಮನಾಭನು. ಚಕ್ರ, ಶಂಖ, ಕಮಲ ಮತ್ತು ಗದೆಗಳನ್ನು ಕೈಗಳಲ್ಲಿ ಹಿಡಿದಿದ್ದಾನೆ. ಹಳದಿಯ ಬಟ್ಟೆಗಳನ್ನು ಧರಿಸಿದ್ದಾನೆ. ಬಣ್ಣಬಣ್ಣದ ಹೂಗಳನ್ನು ಮಾಲೆಯಾಗಿ ಅಲಂಕರಿಸಿಕೊಂಡಿದ್ದಾನೆ. ಮೈಗೆ ಸುಗಂಧ ದ್ರವವನ್ನು ಲೇಪಿಸಿಕೊಂಡಿದ್ದಾನೆ. ಬಲಭಾಗದ ಮೇಲಿನ ಕೈಯಲ್ಲಿ ಕಮಲ, ಕೆಳಗಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಚಕ್ರ, ಎಡಭಾಗದ ಕೆಳಗಿನ ಕೈಯಲ್ಲಿ ಗದೆ ಇವೆ.

ನೀಲಿಯ ಬಣ್ಣದ ದೇಹ ರೂಪ ಇವನದು.

ದಾಮೋದರ

ದಾಮೋದರನು ಗರಿಕೆಯಂತೆ ಕಂದು ನೀಲಿ ಬಣ್ಣವುಳ್ಳವನು. ಗದೆ, ಕಮಲ, ಚಕ್ರ, ಮತ್ತು ಶಂಖಗಳನ್ನು ಹಿಡಿದಿದ್ದಾನೆ. ಹಳದಿಯ ಬಟ್ಟೆಗಳನ್ನು ತೊಟ್ಟಿದ್ದಾನೆ. ವಿಶಾಲವಾದ ಕಣ್ಣುಗಳುಳ್ಳವನು. ಅನೇಕ ರತ್ನಗಳನ್ನು ಅಲಂಕರಿಸಿಕೊಂಡಿದ್ದಾನೆ. ಬಲಭಾಗದ ಮೇಲಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಗದೆ, ಎಡಭಾಗದ ಕೆಳಗಿನ ಕೈಯಲ್ಲಿ ಚಕ್ರ, ಬಲಭಾಗದ ಕೆಳಗಿನ ಕೈಯಲ್ಲಿ ಕಮಲ ಇವೆ. ಪದ್ಮ ಪುರಾಣದಲ್ಲಿ ಇವನ ದೇಹದ ಬಣ್ಣವು ಬಂಧೂಕವೆಂಬ ಹೂವಿನ ಬಣ್ಣವೆಂದು ಹೇಳಲಾಗಿದೆ.

ಸಂಕರ್ಷಣ

ಬಿಳಿಯ ಕಮಲದಂತಹ ದೇಹಬಣ್ಣ ಹೊಂದಿದವನು ಸಂಕರ್ಷಣ. ಶಂಖ, ಕಮಲ, ಚಕ್ರ, ಮತ್ತು ಗದೆಗಳನ್ನು ಹಿಡಿದಿದ್ದಾನೆ. ಬಲಭಾಗದ ಮೇಲಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಕಮಲ, ಎಡಭಾಗದ ಕೆಳಗಿನ ಕೈಯಲ್ಲಿ ಚಕ್ರ, ಬಲಭಾಗದ ಕೆಳಗಿನ ಕೈಯಲ್ಲಿ ಗದೆ ಇವೆ. ಇವನ ದೇಹವು ಬಿಳಿ.

ವಾಸುದೇವ

ವಾಸುದೇವನು ಶಂಖ, ಚಕ್ರ, ಗದೆ, ಕಮಲಗಳನ್ನು ತನ್ನ ಕೈಗಳಲ್ಲಿ ಹಿಡಿದು ನಿಂತಿದ್ದಾನೆ. ಬಲಭಾಗದ ಮೇಲಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಚಕ್ರ, ಎಡಭಾಗದ ಕೆಳಗಿನ ಕೈಯಲ್ಲಿ ಕಮಲ, ಬಲಭಾಗದ ಕೆಳಗಿನ ಕೈಯಲ್ಲಿ ಗದೆ ಇವೆ. ಬಿಳಿಯ ಬಣ್ಣದ ರೂಪವು ಇವನದು.

ಪ್ರದ್ಯುಮ್ನ

ಚಿನ್ನದಂತೆ ಹೊಂಬಣ್ಣವುಳ್ಳವನು ಪ್ರದ್ಯುಮ್ನ. ಶಂಖ, ಕಮಲ, ಚಕ್ರ, ಗದೆಗಳನ್ನು ಹಿಡಿದಿದ್ದಾನೆ. ಬಲಭಾಗದ ಮೇಲಿನ ಕೈಯಲ್ಲಿ ಶಂಖ, ಎಡಭಾಗದ ಮೇಲಿನ ಕೈಯಲ್ಲಿ ಗದೆ, ಎಡಭಾಗದ ಕೆಳಗಿನ ಕೈಯಲ್ಲಿ ಕಮಲ, ಬಲಭಾಗದ ಕೆಳಗಿನ ಕೈಯಲ್ಲಿ ಚಕ್ರ ಇವೆ. ಚಿನ್ನದ ಬಣ್ಣದ ದೇಹ ಇವನದು.

ಅನಿರುದ್ಧ

ಅನಿರುದ್ಧನು ನೀಲಿಯ ಬಣ್ಣದವನು. ಶಂಖ, ಕಮಲ, ಗದೆ, ಚಕ್ರಗಳನ್ನು ತನ್ನ ಕೈಗಳಲ್ಲಿ ಹಿಡಿದಿದ್ದಾನೆ. ಎಡಭಾಗದ ಮೇಲಿನ ಕೈಯಲ್ಲಿ ಶಂಖ, ಎಡಭಾಗದ ಕೆಳಗಿನ ಕೈಯಲ್ಲಿ ಕಮಲ, ಬಲಭಾಗದ ಕೆಳಗಿನ ಕೈಯಲ್ಲಿ ಚಕ್ರ, ಬಲಭಾಗದ ಮೇಲಿನ ಕೈಯಲ್ಲಿ ಗದೆ ಇವೆ. ನೀಲಿಯ ಬಣ್ಣದ ದೇಹ ಇವನದು.

ಪುರುಷೋತ್ತಮ

ಬಿಳಿಯ ಬಣ್ಣದ ಪುರುಷೋತ್ತಮನು ಕಮಲ, ಶಂಖ, ಗದೆ, ಚಕ್ರಗಳನ್ನು ಹಿಡಿದಿದ್ದಾನೆ. ಎಡಭಾಗದ ಮೇಲಿನ ಕೈಯಲ್ಲಿ ಶಂಖ, ಎಡಭಾಗದ ಕೆಳಗಿನ ಕೈಯಲ್ಲಿ ಗದೆ, ಬಲಭಾಗದ ಕೆಳಗಿನ ಕೈಯಲ್ಲಿ ಚಕ್ರ, ಬಲ ಭಾಗದ ಮೇಲಿನ ಕೈಯಲ್ಲಿ ಕಮಲ ಇವೆ. ಬಿಳಿಯ ಬಣ್ಣದ ದೇಹ ಇವನದು.

ಅಧೋಕ್ಷಜ

ಅಧೋಕ್ಷಜನು ನೀಲಿಬಣ್ಣದವನು. ಗದೆ, ಚಕ್ರ, ಶಂಖ, ಕಮಲಗಳನ್ನು ಹಿಡಿದಿದ್ದಾನೆ. ಎಡಗಡೆಯ ಮೇಲಿನ ಕೈಯಲ್ಲಿ ಶಂಖ, ಎಡಗಡೆಯ ಕೆಳಗಿನ ಕೈಯಲ್ಲಿ ಚಕ್ರ, ಬಲಗಡೆಯ ಕೆಳಗಿನ ಕೈಯಲ್ಲಿ ಕಮಲ, ಬಲಗಡೆಯ ಮೇಲಿನ ಕೈಯಲ್ಲಿ ಗದೆ ಇವೆ; ನೀಲಿಯ ಬಣ್ಣ ಇವನದು.

ನರಸಿಂಹ

ಬಿಳಿಯ ಬಣ್ಣದ ದೇಹದ ನರಸಿಂಹನು ಗದೆ, ಶಂಖ, ಚಕ್ರ, ಕಮಲಗಳನ್ನು ಹಿಡಿದಿದ್ದಾನೆ. ಎಡಗಡೆಯ ಕೆಳಗಿನ ಕೈಯಲ್ಲಿ ಶಂಖ, ಬಲಗಡೆಯ ಕೆಳಗಿನ ಕೈಯಲ್ಲಿ ಚಕ್ರ, ಬಲಗಡೆಯ ಮೇಲಿನ ಕೈಯಲ್ಲಿ ಕಮಲ, ಎಡಗಡೆಯ ಮೇಲಿನ ಕೈಯಲ್ಲಿ ಗದೆ ಇವೆ. ಬಿಳಿಯ ಬಣ್ಣದ ರೂಪ ಇವನದು. ಆದರೂ ಪದ್ಮ ಪುರಾಣದಲ್ಲಿ ಚಿನ್ನದ ಬಣ್ಣವೆಂದು ಹೇಳಲಾಗಿದೆ.

ಅಚ್ಯುತ

ಚಿನ್ನದಂತಹ ಹೊಂಬಣ್ಣವುಳ್ಳವನು ಅಚ್ಯತನು. ಗದೆ, ಶಂಖ, ಚಕ್ರ, ಕಮಲಗಳನ್ನು ಹಿಡಿದಿದ್ದಾನೆ. ಎಡಗಡೆಯ ಕೆಳಗಿನ ಕೈಯಲ್ಲಿ ಶಂಖ, ಬಲಗಡೆಯ ಕೆಳಗಿನ ಕೈಯಲ್ಲಿ ಗದೆ, ಬಲಗಡೆಯ ಮೇಲಿನ ಕೈಯಲ್ಲಿ ಕಮಲ, ಎಡಗಡೆಯ ಮೇಲಿನ ಕೈಯಲ್ಲಿ ಚಕ್ರ ಇವೆ. ಚಿನ್ನದ ಬಣ್ಣದ ರೂಪವು ಇವನದು.

ಜನಾರ್ಧನ

ಕೆಂಪು ಬಣ್ಣದ ಜನಾರ್ದನನು ಚಕ್ರ, ಶಂಖ, ಗದೆ, ಕಮಲಗಳನ್ನು ಹಿಡಿದಿದ್ದಾನೆ. ಎಡಗಡೆಯ ಮೇಲಿನ ಕೈಯಲ್ಲಿ ಶಂಖ, ಎಡಗಡೆಯ ಕೆಳಗಿನ ಕೈಯಲ್ಲಿ ಗದೆ, ಬಲಗಡೆಯ ಕೆಳಗಿನ ಕೈಯಲ್ಲಿ ಕಮಲ, ಬಲಗಡೆಯ ಮೇಲಿನ ಕೈಯಲ್ಲಿ ಚಕ್ರ ಇವೆ. ಕೆಂಪು ಬಣ್ಣದ ರೂಪವು ಇವನದು.

ಉಪೇಂದ್ರ

ನೀಲಿಯ ಬಣ್ಣದ ಉಪೇಂದ್ರನು ಗದೆ, ಚಕ್ರ, ಕಮಲ, ಶಂಖಗಳನ್ನು ಹಿಡಿದಿದ್ದಾನೆ. ಬಲಗಡೆಯ ಕೆಳಗಿನ ಕೈಯಲ್ಲಿ ಶಂಖ, ಬಲಗಡೆಯ ಮೇಲಿನ ಕೈಯಲ್ಲಿ ಗದೆ, ಎಡಗಡೆಯ ಮೇಲಿನ ಕೈಯಲ್ಲಿ ಚಕ್ರ, ಎಡಗಡೆಯ ಕೆಳಗಿನ ಕೈಯಲ್ಲಿ ಕಮಲ ಇವೆ.

ಹರಿ

ಚಿನ್ನದ ಬಣ್ಣದ ಹರಿಯು ಚಕ್ರ, ಶಂಖ, ಗದೆ, ಕಮಲಗಳನ್ನು ಹಿಡಿದಿದ್ದಾನೆ. ಬಲಗಡೆಯ ಕೆಳಗಿನ ಕೈಯಲ್ಲಿ ಶಂಖ, ಬಲಗಡೆಯ ಕೆಳಗಿನ ಕೈಯಲ್ಲಿ ಚಕ್ರ, ಎಡಗಡೆಯ ಮೇಲಿನ ಕೈಯಲ್ಲಿ ಕಮಲ, ಎಡಗಡೆಯ ಕೆಳಗಿನ ಕೈಯಲ್ಲಿ ಗದೆ ಇವೆ. ಚಿನ್ನದ ಬಣ್ಣದ ರೂಪವು ಇವನದು. ಹೀಗೆ ಕೇಶವ ಮೊದಲಾದ ೨೪ ಮೂರ್ತಿಗಳ ವಿವರಗಳನ್ನು ಪಾಂಚರಾತ್ರಾಗಮ ಕ್ರಿಯಾಪಾದ ಮತ್ತು ಪದ್ಮ ಪುರಾಣಗಳಲ್ಲಿ ವಿವರಿಸಲಾಗಿದೆ.

ಪದ್ಮಪುರಾಣವು ಮಹಾವಿಷ್ಣುವನ್ನು ವೇದ ಪುರುಷ ಎಂದು ಬಣ್ಣಿಸಿ ಅಗ್ನಿಪುರಾಣವನ್ನು ಮಹಾವಿಷ್ಣುವಿನ ಎಡಪಾದವೆಂದು ತಿಳಿಸಿದೆ. ಸುಗುಣಿ ಮತ್ತು ನಿರ್ಗುಣಿಯಾಗಿರುವ ವಿಷ್ಣುವು ಜಗತ್ ಸೃಷ್ಟಿಯ ಆದಿ ಪುರುಷ ಎಂದು ಅಗ್ನಿಪುರಾಣದಲ್ಲಿ ಹೇಳಲಾಗಿದೆ.

ಶಿವನಿಗೆ ಪ್ರಾಮುಖ್ಯತೆ ನೀಡಿದ ದೇವಾಲಯಗಳಿಗಿಂತಲೂ ವೈಷ್ಣವ ದೇವಾಲಯಗಳಲ್ಲಿ ದೇವಾಲಯ ವಾಸ್ತುವೇ ಅಲ್ಲದೆ ವಿಷ್ಣು ಮೂರ್ತಿಗಳ ಸೃಷ್ಟಿಯಲ್ಲಿ ಶಿಲ್ಪಿಗೆ ವಿಶಿಷ್ಟ ಸಾಧ್ಯತೆಗಳು ಇವೆ. ಶಿಲ್ಪ ಪ್ರಕಾರದ ಎಲ್ಲ ವೈವಿಧ್ಯತೆಗಳನ್ನು ಚಿತ್ರ, ಚಿತ್ರಾರ್ಧ, ಚಿತ್ರಾಭಾಸಗಳನ್ನು ಬಣ್ಣಗಳ ಭಾವ ಸೌಂದರ್ಯದೊಂದಿಗೆ ದೇವಾಲಯ ವಾಸ್ತುಶಿಲ್ಪದಲ್ಲಿ ಅಲಂಕರಿಸುವಲ್ಲಿ ಶಿಲ್ಪಿಯ ಸಾಮರ್ಥ್ಯವು ದುಡಿಸಿಕೊಳ್ಳಲ್ಪಡುವಿಕೆಗೆ ಅಪೂರ್ವ ಅವಕಾಶಗಳಿವೆ. ಶಿಲ್ಪಿಗಳೂ ವಿಷ್ಣುಶಿಲ್ಪ ಲಕ್ಷಣಗಳನ್ನು ರೇಖಾಚಿತ್ರಗಳಲ್ಲಿಯೇ ಅಲ್ಲದೆ ಪಠ್ಯ ಶ್ಲೋಕ ವಿವರವಾದ ಟಿಪ್ಪಣಿ ಇತ್ಯಾದಿಗಳಲ್ಲಿ ಶತಮಾನಗಳಿಂದಲೂ ದಾಖಲಿಸುತ್ತಲೇ ಬಂದಿದ್ದಾರೆ. ದೇವನಹಳ್ಳಿಯ ದಿ। ಚೆನ್ನಕೇಶವ ಆಚಾರ್ಯರ ರೇಖಾಚಿತ್ರಗಳೂ ಅದೇ ಹಾದಿಯವೇ ಆಗಿವೆ.

ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರದಲ್ಲಿ ಪ್ರಾದುರ್ಭಾವ ಕಾಂಡದಲ್ಲಿ ಚತುರ್ವಿಂಶತಿ ಮೂರ್ತಿಗಳ ವಿವರಗಳಿವೆ. ಪಾಂಚರಾತ್ರಾಗಮದ ಕೇಶವ ಇತ್ಯಾದಿ ಚತುರ್ವಿಂಶತಿ ಮೂರ್ತಿಗಳೇ ಅಲ್ಲದೆ ಹಲವು ಮೂಲಗಳನ್ನು ಉಲ್ಲೇಖಿಸಲಾಗಿದೆ.

ವಾಸುದೇವ ಮೊದಲಾದ ಪ್ರತಿಮೆಗಳ ಲಕ್ಷಣ

ವಾಸುದೇವನ ಹನ್ನೆರಡು ಸ್ವರೂಪಗಳನ್ನು ಅಗ್ನಿಪುರಾಣದಲ್ಲಿ ಹನ್ನೆರಡು ಶ್ಲೋಕಗಳಿಂದ ಸ್ತುತಿಸಲಾಗಿದೆ. ಪ್ರತಿಯೊಂದು ಶ್ಲೋಕದಲ್ಲಿ ಭಗವಂತನ ಎರಡೆರಡು ಮೂರ್ತಿಗಳ ಸ್ತೋತ್ರ ಮತ್ತು ಈ ಶ್ಲೋಕಗಳ ಆರಂಭದ ಒಂದೊಂದು ಅಕ್ಷರ ಜೋಡಿಸುವುದರಿಂದ

"ಓಂ ನಮೋ ಭಗವತೇ ವಾಸುದೇವಾಯ"

ಎಂಬ ದ್ವಾದಶಾಕ್ಷರಗಳ ಮಂತ್ರವಾಗುವುದೆಂದೂ ಹೇಳಲಾಗಿದೆ. ಹಾಗಾಗಿ ಈ ಶ್ಲೋಕವನ್ನು ಚತುರ್ವಿಂಶತಿ (೨೪) ಮೂರ್ತಿ ಸ್ತೋತ್ರ ಮತ್ತು ದ್ವಾದಶ ಸ್ತೋತ್ರ ಎನ್ನುತ್ತಾರೆ.

ಓಂ ರೂಪಃ ಕೇಶವಃ ಪದ್ಮಶಂಖ ಚಕ್ರಗದಾಧರಃ ।
ನಾರಾಯಣಃ ಶಂಖಪದ್ಮಗದಾಚಕ್ರೀ ಪ್ರದಕ್ಷಿಣಂ ॥ ೧ ॥
ನತೋಗದೀ ಮಾಧವೋರಿಶಂಖಪದ್ಮೀನಮಾಮಿತಮ್ ।

ಚಕ್ರಕೌಮೋದಕೀ ಪದ್ಮಶಂಖೀ ಗೋವಿಂದ ಊರ್ಜಿತಃ ॥ ೨ ॥

ಮೋಕ್ಷದಃ ಶ್ರೀಗದಿ ಪದ್ಮೀ ಶಂಖೀ ವಿಷ್ಣುಶ್ಚ ಚಕ್ರಧೃಕ್ ।
ಶಂಖಾಚಕ್ರಾಬ್ಜಗದಿನ ಮಧುಸೂ ದನಮಾನಮೇ ॥ ೩ ॥

ಭಕ್ತ್ಯಾ ತ್ರಿವಿಕ್ರಮಃ ಪದ್ಮಗದೀ ಚಕ್ರೀ ಚ ಶಂಖ್ಯಪಿ ।
ಶಂಖಚಕ್ರಾಗಾದಾಪದ್ಮೀವಾಮನಃ ಪಾತುಮಾಸದಾ ॥ ೪ ॥

ಗತಿದಃ ಶ್ರೀಧರ ಪದ್ಮೀ ಚಕ್ರಶಂಖೀಚ ಶಂಖ್ಯಪಿ ।
ಹುಷೀಕೇಶೋ ಗದೀ ಚಕ್ರೀ ಪದ್ಮೀ ಶಂಖೀ ಚ ಪಾತುನಃ ॥ ೫ ॥

ವರದಃ ಪದ್ಮನಾಭಸ್ತುಶಂಕಾಬ್ಜಾರಿಗದಾಧರಃ ।
ದಾಮೋದರಃ ಪದ್ಮಶಂಖಗದಾಚಕ್ರೀ ನಮಾಮಿತಮ್ ॥ ೬ ॥

ತ್ತೇನ ಗದೀ ಶಂಖಚಕ್ರೀ ವಾಸುದೇವಜ್ಜಭೃಜ್ಜಗತ್ ।
ಸಂಕರ್ಷಣೋ ಗದೀ ಶಂಖೀ ಪದ್ಮೀ ಚಕ್ರೀ ಚ ಪಾತು ವಃ ॥ ೭ ॥

ವಾದೀ ಚಕ್ರೀ ಶಂಖಗದೀ ಪ್ರದ್ಯಮ್ನಃ ಪದ್ಮಭೃತ್ಪ್ರಭುಃ ।
ಅನಿರುದ್ಧಶ್ಚಕ್ರಗದೀ ಶಂಖೀ ಪದ್ಮೀ ಚ ಪಾತು ನಃ ॥ ೮ ॥

ಸುರೇಶೋರ್ಯಬ್ಜ ಶಂಖಾಢ್ಯಃ ಶ್ರೀಗದೀ ಪುರುಷೋತ್ತಮಃ ।
ಅಧೋಕ್ಷಜಃ ಪದ್ಮಗದೀ ಶಂಖಚಕ್ರೀ ಚ ಪಾತುವಃ ॥ ೯ ॥

ದೇವೋ ನೃಸಿಂಹಶ್ಚಕ್ರಾಬ್ಜಗದೀಶಂಖೀ ವಯಾಮಿತಮ್ ।
ಅಚ್ಯುತಃ ಶ್ರೀಗದೀ ಪದ್ಮೀ ಚಕ್ರೀ ಶಂಖೀ ಚ ಪಾತುವಃ ॥ ೧೦ ॥

ಬಾಲರೂಪೀ ಶಂಖಗದೀ ಉಪೇಂದ್ರಶ್ಚಕ್ರಪದ್ಮ್ಯ ಪಿ ।
ಜನಾರ್ಧನಃ ಪದ್ಮಚಕ್ರೀ ಶಂಖಧಾರೀ ಗದಾಧರಃ ॥ ೧೧ ॥

ಯಜ್ಞಃ ಶಂಖೀ ಪದ್ಮ ಚಕ್ರೀ ಹರಿಃ ಕೌಮೋದಕೀಧರಃ ।
ಕೃಷ್ಣಃ ಶಂಖೀ ಗದೀ ಪದ್ಮೀ ಚಕ್ರೀಮೆ ಭುಕ್ತಿಮುಕ್ತಿದಃ ॥ ೧೨ ॥

ಆದಿಮೂರ್ತಿರ್ವಾಸುದೇವಸ್ತಸ್ಮಾತ್ಸಂಕರ್ಷಣೋ ಭವತ್ ।
ಸಂಕರ್ಷಣಾಚ್ಚ ಪ್ರದ್ಯಮ್ನಃ ಪ್ರದ್ಯುಮ್ನಾ ದನಿರುದ್ಧಕಃ ॥ ೧೩ ॥

ಕೇಶವಾದಿ ಪ್ರಭೇದೇನ ಏಕೈಕಃ ಸ್ಯಾತ್ರಿಧಾ ಕ್ರಮಾತ್ ॥ ೧೪ ॥

ದ್ವಾದಶಾಕ್ಷರಕಂ ಸ್ತೋತ್ರಂ ಚತುರ್ವಿಂಶತಿ ಮೂರ್ತಿಮತ್ ।
ಯಃ ಪಠೇಚ್ಛೃಣುಯದ್ವಾಪಿ ನಿಮಲಃ ಸರ್ವಮಾಪ್ನುಯಾತ್ ॥ ೧೫ ॥

ಸೋಮೇಶ್ವರನ 'ಮಾನಸೋಲ್ಲಾಸ'ದಲ್ಲಿ ಇದೇ ವಿವರಗಳನ್ನು ಚಮತ್ಕಾರಿಕವಾಗಿ ಒಗಟಿನಂತೆ ಸೂಚಿಸಲಾಗಿದೆ.

ಪ್ರಾದಕ್ಷಿಣ್ಯೇನ ಬೋದ್ಧವ್ಯಾಚತುರ್ವಿಂಶತಿ ಮೂರ್ತಯೆಃ ।
ಅಧೋಹಸ್ತಕ್ರಮೇಣಾದೌ ಯಥೈ ವಾಕ್ಷರ ಸಂಜ್ಞಯಾ ॥ ೮೯ ॥

ಅವಶಿಷ್ಟಮಧೋಬಾಹೋಶ್ಚತುರ್ಥಂ ನಾಮವಾಚಕಂ ।
ಪ್ರಾಧಾನ್ಯಂ ವ್ಯಂಜನೇಷ್ವೇವ ದೀರ್ಘಾನುಸ್ವಾರಯೋರ್ಬಹಿಃ ॥ ೯೦ ॥

ಛಂದಸಂ ಪೂರಣಾರ್ಥಾಯ ಕ್ವಚಿದಾದ್ಯಂ ಪ್ರಲುಪ್ಯತೇ ।
ಪಶಚಂಕೇ ಶಪಂಗಾನಾ ಗಾಚಶಂಮಾ ಚಗಾಪಗೋ ॥ ೯೧ ॥

ಗೋಪಶಂವಿ ಚಶಂಪಾಮ ಪಾಗಚತ್ರಿ ಶಚಾಗವಾ ।
ಪಂಚಾಂಗಶ್ರೀ ಗಚಂಪಾಹೃ ಶಹಚಾಪ ಪಶಾಗದಾ ॥ ೯೨ ॥

ಗಶಾಪಾಶಂ ಗಶಾಚಂವಾ ಚಶಗಾಪ್ರ ಚಗಾಶನಿ ।
ಚಪಾಶಂಪು ಪಗಾಚಾ (ಶಾ)ಧೋ ಚಂಪಾಗೋನ್ನೃಗಪಾಚತುಃ ॥ ೯೩ ॥

ಪಾಚಶಂಜ ಶಗಾಚೋಪೇ ಶೋಚಪಾಹ ಶಗಾಪಕೃ ।
ಚತುರ್ಬಾಹುಯುತಾಃ ಸವಾಃಮೂರ್ತಯೆಃ ಪರಿಕೀರ್ತಿತಾಃ ॥ ೯೪ ॥


ಇತಿ ಕೇಶವಾದಿ ಚತುರ್ವಿಂಶತಿ ಮೂರ್ತಿಭೇದಾಃ



ಕೇಶವ ನಾರಾಯಣ ಮಾಧವಮೂರ್ತಿಗಳು



ಮಾಧವ ಪದ್ಮನಾಭ ದಾಮೋದರ ಮೂರ್ತಿಗಳು



ಸಂಕರ್ಷಣ ಹೃಷಿಕೇಶ ಪ್ರದ್ಯುಮ್ನ ಮೂರ್ತಿಗಳು



ತ್ರಿವಿಕ್ರಮ ಜನಾರ್ಧನ ಶ್ರೀಧರ ಮೂರ್ತಿಗಳು




ಅನಿರುದ್ಧ

ಪುರುಷೋತ್ತಮ



ಅಧೋಕ್ಷಜ   ಹರಿ   ಅಚ್ಯುತಮೂರ್ತಿಗಳು



ಕೇಶವ ನಾರಾಯಣ ಮಾಧವಮೂರ್ತಿಗಳು



ಗೋವಿಂದ ವಿಷ್ಣು ಜನಾರ್ಧನ ಮೂರ್ತಿಗಳು

* ದೇವನಹಳ್ಳಿ ಚೆನ್ನಕೇಶವ ಆಚಾರ್ಯರ ವಿಷ್ಣುವಿನ ಚತುರ್ವಿಂಶತಿ ರೇಖಾಚಿತ್ರಗಳಲ್ಲಿ ಕೆಲವು ರೂಪಗಳು ಕಳೆದುಹೋಗಿವೆ. ಕೆಲವು ಮತ್ತೆ ಮತ್ತೆ ರೇಖಿಸಲ್ಪಟ್ಟಿವೆ! ಉದಾ: ಕೇಶವ, ನಾರಾಯಣ, ಜನಾರ್ಧನ ಮತ್ತು ಮಾಧವ ರೂಪಗಳ ರೇಖಾಚಿತ್ರಗಳು.

೫. ಅನಂತಶಯನಃ ವಿಷ್ಣು

ಪದ್ಮ ಪುರಾಣದ ವಿವರಗಳಂತೆ ವಿಷ್ಣುವನ್ನು ಮೋಡದ ಬಣ್ಣದಲ್ಲಿ ಆದಿಶೇಷನ ಮೇಲೆ ಮಲಗಿರುವಂತೆ ಚಿತ್ರಿಸಬೇಕು. ಅವನಿಗೆ ಎರಡು ಕೈಗಳು ಇರಬೇಕು. ಬಲಗಡೆಯ ಪಾದವು ಲಕ್ಷ್ಮಿಯ ಮಡಿಲಿನಲ್ಲಿರಬೇಕು. ಮತ್ತೊಂದು ಪಾದವು (ಎಡಗಾಲು) ಆದಿಶೇಷನ ಶರೀರದ ತೊಡೆಯ ಭಾಗದಲ್ಲಿರಬೇಕು. ವಿಷ್ಣುವಿನ ಎಡಗೈಯು ಅವನ ಎಡಗಡೆಯ ಮೊಣಕಾಲಿನ ಮೇಲಿರಬೇಕು. ಬಲಗೈಯು ತಲೆಭಾಗದಲ್ಲಿ ಚಾಚಿಕೊಂಡಿರಬೇಕು. ಹೊಕ್ಕುಳಿಂದ ಮೂಡಿಬಂದಿರುವ ತಾವರೆಯಲ್ಲಿ ಬ್ರಹ್ಮನು ಸಂತೋಷದಿಂದ ಕುಳಿತಿರುವಂತೆ ಚಿತ್ರಿಸಬೇಕು. ಆ ಕಮಲದ ಕಾಂಡಕ್ಕೆ ಹತ್ತಿರವಾಗಿ ಮಧುಕೈಟಭ ರಾಕ್ಷಸರನ್ನು ಚಿತ್ರಿಸಬೇಕು. ಶಂಖ, ಚಕ್ರ ಮತ್ತು ಗದೆ ಮೊದಲಾದವುಗಳನ್ನು ವಿಷ್ಣುವಿನ ಸುತ್ತಲೂ ಆಕಾರ ತಾಳಿಕುಳಿತಿರುವಂತೆಯೂ ಚಿತ್ರಿಸಬೇಕು.

ಅಷ್ಟಾಕ್ಷರಿ ಕಲ್ಪದಲ್ಲಿನ ವಿವರಗಳಂತೆ ವೈಕುಂಠನಾರಾಯಣನ ಚಿತ್ರವನ್ನು ಮೋಡದಂತಹ ಬಣ್ಣದಲ್ಲಿ ಚಿತ್ರಿಸಬೇಕು.

ವೈಕುಂಠ ನಾರಾಯಣನ ಧ್ಯಾನ

ಸವ್ಯಂ ಪಾದಂ ಪ್ರಸಾರ್ಯ ಶ್ರಿ ತದರಿತಹರ ದಕ್ಷಿಣಂಕುಞ್ಚಯಿತ್ವಾ
ಜಾನುನ್ಯಾಧಾಯ ಸವ್ಯೇತರಮಿತರಭುಜಂ ನಾಗಭೋಗೇ ನಿಧಾಯ ।
ಪಶ್ಚಾದ್ ಬಾಹುದ್ವಯೇನ ಪ್ರತಿಭಟಶಮನೇ ಧಾರಯನ್ ಶಙ್ಖಚಕ್ರೇ
ದೇವೀಭೂಷಾದಿಜುಷ್ಟೋ ಜನಯತಿಜಗತಾಂ ಶರ್ಮ ವೈಕುಂಠನಾಥಃ ॥

ಆದಿಶೇಷನ ಮೇಲೆ ಶಯನಿಸಿರುವ ಶ್ರೀ ಹರಿಯು ತನ್ನ ಎಡಗಾಲನ್ನು ನೀಡಿ, ಆಶ್ರಿತರ ಪಾಪಗಳನ್ನು ದೂರ ಮಾಡುವ ಬಲಗಾಲನ್ನು ಮಡಿಚಿಕೊಂಡು, ಬಲತೋಳನ್ನು ಬಲಗಾಲಿನ ಮೇಲೆ ಇಟ್ಟು, ಎಡತೋಳನ್ನು ಆದಿಶೇಷನ ಹಾಸಿಗೆಯ ಮೇಲೆ ಇಟ್ಟು, ಮೇಲಿನ ಎರಡು ಕೈಗಳಿಂದ ದುಷ್ಟರನ್ನು ನಿಗ್ರಹಿಸುವುದಕ್ಕಾಗಿ ಶಂಖ, ಚಕ್ರಗಳನ್ನು ಹಿಡಿದುಕೊಂಡು ಲಕ್ಷ್ಮೀದೇವಿಯಿಂದ ಸೇವಿತನಾಗುತ್ತ ಹಲವು ಆಭರಣಗಳನ್ನು ತೊಟ್ಟುಕೊಂಡಿದ್ದಾನೆ. ಈ ರೀತಿಯಲ್ಲಿ ವೈಕುಂಠಪತಿಯನ್ನು ಚಿತ್ರಿಸಬೇಕು. ವಿಷ್ಣುವಿನ ಶಯನ ಸ್ಥಿತಿಯ ರೂಪಗಳಲ್ಲಿ ರಂಗನಾಥ, ಅನಂತಶಯನ ರೂಪಗಳು ಸುಪರಿಚಿತ. ವೈಕುಂಠ ನಾರಾಯಣ ರೂಪವು ಆದಿಶೇಷನ ಮೇಲೆ ಸುಖಾಸನದಲ್ಲಿ ಕುಳಿತಿರುವಂತೆ ವಿವರಿಸಲಾಗಿದೆ.

ಅನಂತ ಪದ್ಮನಾಭ ಮೂರ್ತಿಯ ಧ್ಯಾನ
ಶ್ರೀಭೂಮಿನಾರದ ದಿವಾಕರ ಚಂದ್ರತಾರೈಃ
ಪಞ್ಚಾಯುಧೈರ್ಗರುಡತುಮ್ಬುರಪನ್ನಗಾದ್ಯೈಃ ॥
ಸಂಸೇವಿತಂ ಮಹದನಂತಪುರೇ ಶಯಾನಂ
ಶ್ರೀ ಪದ್ಮನಾಭಮಹಮದ್ಯ ನಮಸ್ಕರೋಮಿ ॥

ಅತ್ಯಂತ ದೊಡ್ಡದಾದ ಅನಂತಪುರದಲ್ಲಿ ನಿದ್ರಿಸುತ್ತಿರುವ ಶ್ರೀಮದನಂತಪದ್ಮನಾಭ ಸ್ವಾಮಿಯ ವಿವರ ದೃಶ್ಯಾತ್ಮಕವಾಗಿದೆ.


'ದೇವನಹಳ್ಳಿಯ ಚೆನ್ನಕೇಶವ ಆಚಾರ್ಯರ ಈ ಹಿನ್ನೆಲೆಯ ಗ್ರಹಿಕೆಗಳು ವೈವಿಧ್ಯಮಯವಾಗಿ ರೇಖಿಸಲ್ಪಟ್ಟಿವೆ. ಆದಿಶೇಷನ ಮೇಲೆ ಒರಗಿಕೊಂಡು/ಕುಳಿತಿರುವ 'ಪರಮಪದವಾಸುಲು ಆದಿನಾರಾಯಣರು,' 'ಅನಂತಪದ್ಮನಾಭನ ಕ್ಷೀರಾಬ್ದಿಶಯನ', 'ರಂಗನಾಥ' ಮೊದಲಾದ ರೇಖಾಚಿತ್ರಗಳು ಗಣನೀಯವಾಗಿವೆ. ಪೆನ್ಸಿಲ್ ಮಾಧ್ಯಮವನ್ನು ಹೆಚ್ಚಿನ

ಕುಶಲತೆಯಿಂದ ದುಡಿಸಿಕೊಂಡಿದ್ದಾರೆ. ಆದರೆ ಕಾಲಾನಂತರ ಈ ರೇಖೆಗಳನ್ನು ಹಲವರು ತಿದ್ದಿ, ತೀಡಿರುವಂತೆಯೂ ಕಾಣುತ್ತವೆ. ಅಂತಹ ರೇಖಾಚಿತ್ರಗಳು ಮೂಲದ ಸೊಬಗನ್ನು ಕಳೆದುಕೊಂಡಿವೆ. 'ವೈಕುಂಠ ದ್ವಾರವು' ರೇಖಾಚಿತ್ರವನ್ನಿಲ್ಲಿ ಉದಾಹರಿಸಬಹುದು, ಮಧ್ಯರಂಗ, ಶ್ರೀರಂಗಪಟ್ಟಣದ ರಂಗನಾಥನನ್ನೂ ಹೆಸರಿಸಿ ಚೆನ್ನಕೇಶವಾಚಾರ್ಯರು ರೇಖಿಸಿ ಆನಂದಿಸಿದ್ದಾರೆ.




ಪರಮಪದವಾಸ ಆದಿನಾರಾಯಣರು







ಅನಂತಶಯನ ಆದಿರಂಗ, ಆದಿಕಾವೇರಿ, ಆಳ್ವಾರರ ಪ್ರಮುಖ ಸ್ಥಳ



ಮಧ್ಯರಂಗ, ಶ್ರೀರಂಗಪಟ್ಟಣ



ವೈಕುಂಠದ್ವಾರವು, ವಿಷ್ಣುಮೂರ್ತಿಯ ಬಲಗಡೆ ದ್ವಾರಪಾಲಕ, ಯಕ್ಷ, ಕಿನ್ನರ, ಕಿಂಪುರುಷ, ಗಂದರ್ವರು, ಭೂದೇವರು ಸನಕ ಮತ್ತು ಸನಂದನರು. ಎಡಗಡೆ ತುಂಬುರ, ನಾರದ, ಗರುಡ, ಹನುಮ, ಪುರುಷಾಮೃಗ ಮತ್ತು ಸನತ್ಕುಮಾರರು




ಅನಂತಪದ್ಮನಾಭನ ಕ್ಷೀರಾಬ್ದಶಯನ. ಗಂಧರ್ವ, ಯಕ್ಷರು, ದಿಕ್ಪಾಲಕರು, ಋಷಿಗಳು





ಅನಂತಪದ್ಮನಾಭಮೂರ್ತಿಯ ರೇಖಾಕಲ್ಪನೆ



ಅನಂತಪದ್ಮನಾಭ



ಸೃಷ್ಟಿಕರ್ತ ಬ್ರಹ್ಮನು ಅನಂತಪದ್ಮನಾಭನ ನಾಭಿಯಿಂದ ಮೂಡಿಬರುತ್ತಿರುವ ಕಲ್ಪನೆಯ ರೇಖಾರೂಪವು

೬. ಮೋಹಿನೀಃ ಮಹಾ ವಿಷ್ಣು


ಕ್ಷೀರಸಾಗರ ಮಂಥನದ ಸಂದರ್ಭದಲ್ಲಿ ಮಹಾವಿಷ್ಣು ಜಗನ್ಮೋಹಿನಿಯಾಗಿ ಕಾಣಿಸಿಕೊಂಡು ಅಮೃತವನ್ನು ದಾನವರಿಗೆ ದಕ್ಕದಂತೆ ಮಾಡಿದ ಸಂದರ್ಭ. ಆಗಲೇ ಜಗನ್ಮೋಹಿನಿಯನ್ನು ಶಿವನು ಮೋಹಿಸಿದನು. ಆ ಕಾರಣದಿಂದಲೇ ಹರಿ-ಹರ ರೂಪ ಧಾರಣೆಯೂ ಆಯಿತು. ಇದೇ ಹಿನ್ನೆಲೆಯು ಅರ್ಧನಾರೀಶ್ವರನ ರೂಪಕ್ಕೂ ಕಾರಣವಾಯಿತೆಂದು ಹೇಳಲಾಗಿದೆ. ಬಲಪಾರ್ಶ್ವವು ಶಿವನಾಗಿದ್ದರೆ ಎಡಪಾರ್ಶ್ವವು ಮೋಹಿನಿಯಾಗಿ (ಹೆಣ್ಣಿನ ರೂಪ) ರೂಪಿತವಾಯಿತು. ಜನಪದ ದೇವನಾದ ಅಯ್ಯಪ್ಪನು ಇವರ ಪುತ್ರನೆಂದೇ ಹೇಳಲಾಗುತ್ತಿದೆ.

ಮತ್ತೊಂದು ಪುರಾಣದ ಕಥಾನಕ ಹೀಗಿದೆ : ಬ್ರಹ್ಮನು ಒಮ್ಮೆ ಶಿವನನ್ನು ಕುರಿತು ಮಾಡಿದ ತಪಸ್ಸಿನ ಫಲವಾಗಿ ಬೇಡಿದ ವರವು ಶಿವನು ಬ್ರಹ್ಮನ ದೇಹದಲ್ಲಿ ಜನಿಸಬೇಕೆಂಬುದೆ ಆಗಿತ್ತು. ಬ್ರಹ್ಮನು ಬೇಡಿದ ವರದ ಫಲವಾಗಿ ಅವನ ದೇಹದಲ್ಲಿ ಶಿವನು ಅತಿಭಯಂಕರ ಆಕಾರದ ರುದ್ರನಾಗಿ, ಉಮೆಯು ಮಹಾಕಾಳಿಯಾಗಿ ಕಾಣಿಸಿಕೊಂಡು ಅಚ್ಚರಿಉಂಟು ಮಾಡಿದರು. ಗಾಬರಿಗೊಂಡ ಬ್ರಹ್ಮನು ಶಿವನಿಗೆ ಒಂದೇ ರೂಪವನ್ನು ತಾಳಿ ಶಾಂತನಾಗುವಂತೆ ಪ್ರಾರ್ಥಿಸಿದನು. ಆಗ ಮಹಾಶಿವನು ಅರ್ಧನಾರೀಶ್ವರನಾಗಿ ಕಾಣಿಸಿಕೊಂಡನು.

ಒಮ್ಮೆ ಭಸ್ಮಾಸುರನಿಗೆ ತಾನು ನೀಡಿದ ವರದಿಂದ ತನಗೇ ಅಪಾಯವಾಗಲಿದ್ದಾಗ ಶಿವನು ಮೋಹಿನಿಯ ನೆರವು ಪಡೆದನು. ಅಂದರೆ ಮಹಾ ವಿಷ್ಣುವಿನ ಮೋಹಿನಿ ರೂಪದ ನೃತ್ಯದಿಂದ ಭಸ್ಮಾಸುರನು ತಾನೂ ನರ್ತಿಸಿ ಅವಳು ಹೇಳಿದಂತೆಲ್ಲ ನೃತ್ತ ಮತ್ತು ನೃತ್ಯಗಳ ನಡುವೆ ತಲ್ಲೀನನಾಗಿ ಆಂಗಿಕಗಳನ್ನು ಮಾಡಿ ತನ್ನ ತಲೆಯ ಮೇಲೆ ತಾನೇ ಕೈ ಇಟ್ಟು ಭಸ್ಮವಾದನು. ದೇವಾಲಯಗಳ ಭಿತ್ತಿಗಳ ಅರ್ಧ ಶಿಲ್ಪಗಳು ಅಥವಾ ಉಬ್ಬು ಶಿಲ್ಪಗಳಲ್ಲಿ ಈ ಕಲ್ಪನಾ ರೂಪಗಳು ಆಕರ್ಷಕವಾಗಿ ಕಾಣಿಸಿಕೊಂಡರುವಂತಿವೆ.



ಅರ್ಧನಾರೀಶ್ವರ




144

೭. ಶ್ರೀ ಕೃಷ್ಣನ ವಿವಿಧ ರೂಪಗಳು

ಮದನಗೋಪಾಲನ ಧ್ಯಾನ

ಪಾಂಚರಾತ್ರ ಮೂಲದ ಮದನ ಗೋಪಾಲನ ಧ್ಯಾನವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ವಿಷ್ಣು ನಿಧಿಯಲ್ಲಿ

"ರಕ್ತವರ್ಣೋದಶಭುಜಃ ಸರ್ವಾಲಙ್ಕಾರಭೂಷಿತಃ ।
ಶಙ್ಖ ಚಕ್ರಗದಾಪದ್ಮ ಪಾಶಾಙ್ಕುಶಸುಮಾಶುಗಾನ್ ॥
ಇಕ್ಷು ಕೋದಣ್ಡಮನ್ಯಾಭ್ಯಾಂವಾದಯನ್ ವೇಣುಮಾದರಾತ್ ।
ಷೋಡಶಚ್ಛದಪದ್ಮ ಸ್ಥಷಟ್ಕೋಣೋ ಪರಿಸಂಸ್ಥಿತಃ ॥
ಸ್ವರಪತ್ರಸ್ಥಗೋಪೀ ಭಿರಾದರಾದೀಕ್ಷಿತೋವತಾತ್ ।
ಗೋಪಾಲೋ ಮದನಾಖ್ಯೋಯಂ ಮನ್ದಸ್ಮಿತಮುಖಾಮ್ಬುಜಃ ॥ *(ರಕ್ತವರ್ಣ)*

ಕೆಂಪು ಬಣ್ಣದ ಮದನಗೋಪಾಲನು ಹತ್ತು ತೋಳುಗಳವನು. ಎಲ್ಲ ರೀತಿಯ ಆಭರಣಗಳನ್ನು ಅಲಂಕರಿಸಿ ಕೊಂಡಿದ್ದಾನೆ. ಶಂಖ, ಚಕ್ರ, ಗದೆ, ಪದ್ಮ, ಹಗ್ಗ, ಅಂಕುಶ, ಹೂವಿನ ಬಾಣ, ಕಬ್ಬಿನ ಜಲ್ಲೆಗಳನ್ನು ಎಂಟು ಕೈಗಳಲ್ಲಿ ಹಿಡಿದು ಉಳಿದೆರಡು ಕೈಗಳಿಂದ ಕೊಳಲನ್ನು ನುಡಿಸುತ್ತಿದ್ದಾನೆ. ಈ ದೇವನು ಹದಿನಾರು ದಳದ ಕಮಲದ ಮೇಲಿರುವ ಆರು ಕೋನಗಳುಳ್ಳ ಆಸನದ ಮೇಲೆ ಕುಳಿತಿದ್ದಾನೆ. ಸುತ್ತಲೂ ಇರುವ ಕಮಲದಳಗಳ ಮೇಲೆ ಗೋಪಿಯರು ಕುಳಿತು ಪ್ರೀತಿಯಿಂದ ನೋಡುತ್ತಿದ್ದರೆ ಮದನ ಗೋಪಾಲನೆಂಬ ಹೆಸರಿನ ಈ ಸ್ವಾಮಿಯು ಕಮಲದಂತಹ ಸುಂದರ ಮುಖದಿಂದ ಮುಗುಳ್ನಗುತ್ತಿದ್ದಾನೆ. ವಿಷ್ಣು ಮತ್ತು ಮನ್ಮಥನ ಲಕ್ಷಣಗಳು ಸಂಯೋಗಗೊಂಡಿರುವ ರೂಪವೇ ಮದನ ಗೋಪಾಲ ಮೂರ್ತಿಯು.

ಚತುರ್ಭುಜವೇಣುಗೋಪಾಲನ ಧ್ಯಾನ

ಕೃಷ್ಣಂ ಬಾಹುಯುಗಾಞ್ಚಿತಾರಿಜಲಜಂನಾನಾ ವಿಭೂಷೋಜ್ವಲಂ
ಹಸ್ತದ್ವನ್ದ್ವ ವಿರಾಜಮಾನಮುರಲೀಪೀತಾಧರೋಷ್ಠಾಮೃತಮ್ ।
ಗೀತಾಸ್ವಾದನಮುಗ್ಧಗೋಪನಿವಹನ್ಯಞ್ಚತ್ವದಾಮ್ಭೋರುಹಂ
ತದ್ ಧ್ಯಾಯೇದ್ ವನಮಾಲಿನಂಕಟಿತಟೀರಾಜದ್ಧಿರಣ್ಯಾಮ್ಬರಮ್ ॥ *–ನೀಲವರ್ಣಃ*


ದ್ವಿಭುಜ ವೇಣುಗೋಪಾಲ ಮೂರ್ತಿಯ ಧ್ಯಾನ


ಮಂತ್ರದೇವತಾಪ್ರಕಾಶಿಕಾದಿಂದ ಶ್ರೀ ತತ್ವನಿಧಿಯ ವಿಷ್ಣುನಿಧಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ವಿವರಗಳು ಹೀಗಿವೆ:

ಅಂಸಾಲಮ್ಬಿತವಾಮಕುಣ್ಡಲಯುತಃ ನಿಮ್ನೋನ್ನತಭ್ರೂಲತಂ
ಕಿಞ್ಚಿತ್ಕುಞ್ಚಿತ್ ಕೋಮಲಾಧರ ಪುಟಂಸಾಚಿಪ್ರಸಾದೇಕ್ಷಣಮ್ ।
ಆಲೋಲಾಙ್ಗುಲಿಪಲ್ಲ ವೈರ್ಮುರಲಿಕಾಮಾಪೂರಯನ್ತಂ
ಮುದಾಮೂಲೇ ಕಲ್ಪತರೋಸ್ತ್ರಿಭಙ್ಗಲಲಿತಂ ಧ್ಯಾಯೇಜ್ಜಗನ್ಮೋಹನಮ್ ॥ *–ಔಚಿತ್ಯಾನ್ನೀಲವರ್ಣಃ*

ಹೀಗೆ ಸಕಲಲೋಕಕ್ಕೆ ಮೋಹಕನಾದ, ಕಲ್ಪವೃಕ್ಷದ ಕೆಳಗೆ ತ್ರಿಭಂಗಿಶೈಲಿಯಲ್ಲಿ ನಿಂತು ಕೊಳಲನ್ನು ಮೋಹಕವಾಗಿ ನುಡಿಸುತ್ತಿರುವ ಕೃಷ್ಣನನ್ನು ಧ್ಯಾನಿಸಬೇಕು.


శ్రీమురళీధరమూర్తిః
రాదాదేవి
తుంబురలు
రుక్మిణీదేవి
నారదలు


శ్రీ
తుంబురుడు
నారదుడు
గరుడాళ్వార్




ಸಂತಾನಕೃಷ್ಣ, ಆದಿಶೇಷ ಕೃಷ್ಣನ ಎಡಗಡೆ ದೇವಸೇನ, ಬಲಗಡೆ ವಳ್ಳಿದೇವಿ



ಅಷ್ಟಭಾರ್ಯಾಕೃಷ್ಣನು



ಶ್ರೀಮಹಾಆದಿಶೇಷ, ಕಾಳಿಂಗಕೃಷ್ಣ, ಎಡಗಡೆ ತದ್ಯೈವಾದೇವಿ ಮತ್ತು ಬಲಗಡೆ ಸುರನಾದೇವಿ ನಾಗಕನ್ನಿಕೆಯರು






ಶ್ರೀಕೃಷ್ಣ ಸಭಾ




ದ್ವಿಭುಜ ವೇಣುಗೋಪಾಲ



ಹತ್ತು ತೋಳುಗಳ ಮದನಗೋಪಾಲನ ರೇಖಾಕಲ್ಪನೆ




ಶ್ರೀ
ತುಂಬುರರು
ರಾಧಾದೇವಿ
ನಾರದರು
ರುಕ್ಮಿಣಿದೇವಿ

೮. ಶ್ರೀರಾಮ ಮೂರ್ತಿ

ಮಂತ್ರ ಸಾರ ಸಂಗ್ರಹದಲ್ಲಿರುವ ಪ್ರತಾಪರಾಮಧ್ಯಾನ :

ದೋರ್ಭಿಃ ಖಡ್ಗಂ ತ್ರಿಶೂಲಂಡಮರುಮಸಿಧನುರ್ದನ್ಡಬಾಣಾಂಕುಠಾರಂ
ಶಙ್ಖಂ ಚಕ್ರಂ ಕೃಪಾಣಂ ಹಲಮುಸಲಗದಾಭಿಣ್ಡಿವಾಲಂ ಚ ಪಾಶಮ್।
ಉದ್ಯದ್ಬಾಹುಂ ಚ ಮುಷ್ಟಿಂಹ್ಯಭಯವರಕರಂ ಬಿಭ್ರತಂ ಶುಕ್ಲವರ್ಣಂ
ವನ್ದೇ ರಾಮಂ ತ್ರಿಣೇತ್ರಂ ತ್ವಮರರಿಪುಕುಲಂ ಮರ್ಧಯನ್ತಂ ಪ್ರತಾಪೈಃ॥

ಚತುರ್ಭುಜರಾಮ ಧ್ಯಾನ

ರಾಮಾರ್ಚನ ಚಂದ್ರಿಕೆಯಲ್ಲಿರುವ ಚತುರ್ಭುಜರಾಮನ ಮೂರ್ತಿಯ ವಿವರಗಳು.

ವಾಮಙ್ಕಸ್ಥಿತಜಾನಕೀಪರಿಲಸತ್ಕೋದಣ್ಡದಣ್ಡಂ ಕರೇ
ಚಕ್ರಂ ಚೋರ್ಧ್ವ ಕರೇಣ ಬಾಹುಯುಗಲೇ ಶಙ್ಖಂ ಶರಂ ದಕ್ಷಿಣೇ।
ಬಿಭ್ರಾಣಂ ಜಲಜಾತಪತ್ರನಯನಂ ಭದ್ರಾದ್ರಿಮೂರ್ಧ್ನಿಸ್ಥಿತಂ
ಕೇಯೂರಾದಿವಿಭೂಷಿತಂ ರಘುಪತಿಂ ಸೌಮಿತ್ರಿಯುಕ್ತಂಭಜೇ॥
ಔಚಿತ್ಯಾದ್‌ದೂರ್ವಾದಲಶ್ಯಾಮವರ್ಣಂಃ



ತೆಲಂಗಾಣದ ಭದ್ರಾಚಲದಲ್ಲಿರುವ ಚತುರ್ಭುಜ ರಾಮನಧ್ಯಾನಮಯ ರೇಖಾಚಿತ್ರಣ



ಮಂತ್ರಸಾರ ಸಂಗ್ರಹ ಮೂಲದ ಪ್ರತಾಪರಾಮ ಮೂರ್ತಿಯ ರೇಖಾಚಿತ್ರವೈಭವ

೯. ದತ್ತಾತ್ರೇಯ ಮೂರ್ತಿ


ಮಹಾವಿಷ್ಣುವಿನ ಹಲವಾರು ಅವತಾರಗಳಲ್ಲಿ ದತ್ತ ಆತ್ರೇಯ ಮೂರ್ತಿ ರೂಪವೂ ಒಂದು. ಮಾರ್ಕಂಡೇಯ ಪುರಾಣದಲ್ಲಿನ ವಿವರಗಳಂತೆ ದತ್ತಾತ್ರೇಯನು ಅತ್ರಿ ಮತ್ತು ಅನಸೂಯಾದೇವಿಯರ ಮಗನು. ವಿಶಿಷ್ಟ ಸಂದರ್ಭವೊಂದರಲ್ಲಿ ಆಕೆಗೆ ಬ್ರಹ್ಮ, ವಿಷ್ಣು, ಮಹೇಶ್ವರರು ದತ್ತಾತ್ರೇಯನಾಗಿ ಹುಟ್ಟಿದರು. ಭಾಗವತದ ವಿವರಗಳಂತೆ ಅತ್ರಿ ಋಷಿಗೆ ದತ್ತ, ಸೋಮ ಮತ್ತು ದೂರ್ವಾಸ ಎಂಬ ಮೂರು ಮಕ್ಕಳು ಕ್ರಮವಾಗಿ ವಿಷ್ಣು, ಬ್ರಹ್ಮ ಮತ್ತು ಶಿವನ ಅವತಾರ ರೂಪವಾಗಿ ಹುಟ್ಟಿದರು. ದತ್ತಾತ್ರೇಯನ ಹುಟ್ಟಿನ ಉದ್ದೇಶವೇ ಕ್ಷಮೆ ಎಂಬ ವಿಶಿಷ್ಟ ಗಣದ ಮಹತ್ವವನ್ನು ಸಾರುವುದು; ವೇದಗಳನ್ನು ಪುನರುಜ್ಜೀವನಗೊಳಿಸುವುದು; ಧರ್ಮವನ್ನು ಸಂಸ್ಥಾಪಿಸುವುದು. ಆತ್ಮಜ್ಞಾನಿಯಾದ ದತ್ತಮೂರ್ತಿಯನ್ನು ಮೂರು ಮುಖ, ಮುಂದೆ ನಾಲ್ಕು ನಾಯಿಗಳು ಇರುವಂತೆ ರೂಪಿಸುತ್ತಾರೆ. ನಾಲ್ಕುನಾಯಿಗಳು ನಾಲ್ಕು ವೇದಗಳಿಗೆ ಸಾಂಕೇತಿಕವಾಗಿವೆ. ಗೋವು ಶ್ರೀ ಕೃಷ್ಣನ ಸಂಕೇತವಾದರೆ, ದತ್ತಾತ್ರೇಯನ ಕೈಯಲ್ಲಿರುವ ಆಯುಧಗಳೇ ತ್ರಿಮೂರ್ತಿಗಳು ಎಂದೂ ಹೇಳಲಾಗಿದೆ. (ರಾಜಾ ರವಿವರ್ಮನ ಪ್ರೆಸ್‌ನಲ್ಲಿ ಪ್ರಿಂಟಾದ ದತ್ತಾತ್ರೇಯನ ವರ್ಣಚಿತ್ರ ಪ್ರಿಂಟ್ ಇಲ್ಲಿ ನೆನಪಾಗುತ್ತದೆ.) ವಿಷ್ಣು ಧರ್ಮೋತ್ತರ ಪುರಾಣದಲ್ಲಿ ದತ್ತ ಮೂರ್ತಿಯನ್ನು ವಾಲ್ಮೀಕಿಯಂತೆ ರೂಪಿಸಬೇಕೆಂದಿದೆ.

ರೂಪಮಂಡನದಲ್ಲಿ ದತ್ತಾತ್ರೇಯನನ್ನು ವಿಶಿಷ್ಟವಾಗಿ ವಿವರಿಸಿದೆ.

ಏಕಪೀಠ ಸಮಾರೂಢಮೇಕ ದೇಹ ನಿವಾಸಿನಮ್
ಷಡ್ಭುಜಂ ಚ ಚತುರ್ವಕ್ತ್ರಂ ಸರ್ವಲಕ್ಷಣ ಸಂಯುತಮ್ ॥
ಅಕ್ಷಮಾಲಾಂ ತ್ರಿಶೂಲಂ ಚ ಗದಾಂಕಾರ್ಯಾಚ್ಚದಕ್ಷಿಣೇ
ಕಮಂಡಲುಂ ಚ ಖಟ್ವಂಗಂಚಕ್ರಂ ವಾಮಭುಜೇ ತಥಾ ॥

ತ್ರಿಮೂರ್ತಿಗಳ ಸಂಯುಕ್ತರೂಪವಾದರೂ ನಾಲ್ಕು ಮುಖಗಳ ಬಗ್ಗೆ ಹೇಳಲಾಗಿದೆ; ಇರಲಿ. ಈ ಎಲ್ಲ ಹಿನ್ನೆಲೆಯಲ್ಲಿ ದೇವನ ಹಳ್ಳಿಯ ಚೆನ್ನಕೇಶವ ಆಚಾರ್ಯರು ದತ್ತಾತ್ರೇಯನನ್ನು ಮೂರು ಮುಖ, ಆರು ಕೈಗಳಿಂದ ಗ್ರಹಿಸಿದ್ದಾರೆ.

ಹಸುವನ್ನು ಧರ್ಮದೇವಿ ಎಂದು ಅಕ್ಷರಗಳಲ್ಲಿ ಉಲ್ಲೇಖಿಸಿದ್ದರು. ಸನಕ, ಸನಂದನ, ಸುಮಂತ, ತುಂಬರ, ನಾರದ, ಪತಂಜಲಿ, ವ್ಯಾಘ್ರಪಾದ ಬುಧ ಮೊದಲಾದವರಿಂದ ಸೇವಿಸಲ್ಪಡುತ್ತಿರುವ ರೇಖಾಚಿತ್ರರೂಪವನ್ನೂ ನೀವು ನೋಡಬಹುದು.



ಶ್ರೀಮೂರ್ತಿರೂಪನಾದ ದತ್ತಾತ್ರೇಯ ಮೂರ್ತಿಯ ಎಡಬದಿಗೆ ಪತಂಜಲಿ, ನಾರದ, ಸನಂದನ ಹಾಗೂ
ಬಲಬದಿಗೆ ವ್ಯಾಘ್ರಪಾದ, ತುಂಬುರ, ಸನಕರ ರೇಖಾ ರೂಪಗಳಿವೆ.



ದತ್ತಾತ್ರೇಯ ಮೂರ್ತಿಯ ಎಡಬದಿ ಸುಮಂತ, ಸನಂದನ, ಬಲಬದಿಗೆ ಸನಕ, ಬುಧರ ರೇಖಾಕಲ್ಪನೆಗಳು



दत्तात्रेय



ದತ್ತಾತ್ರೇಯ

೧೦. ಸಮುದ್ರ ಮಂಥನ

ಕೂರ್ಮಾವತಾರಕ್ಕೂ ಸಮುದ್ರಮಂಥನಕ್ಕೂ ವಿಶಿಷ್ಟ ಸಂಬಂಧವಿದೆ. ದೇವತೆಗಳು ಮತ್ತು ರಾಕ್ಷಸರು ಹಲವು ಲೋಕಗಳ ಆಧಿಪತ್ಯ ಹೊಂದಲು ಯುಗಯುಗಗಳಿಂದ ಪರಸ್ಪರ ಯುದ್ಧ ಮಾಡುತ್ತಾ ಸಾವು ನೋವುಗಳನ್ನು ಅನುಭವಿಸುತ್ತಿದ್ದರು. ಈ ಸೆಣಸಾಟದ ಪರಂಪರೆಗೆ ಮುಕ್ತಾಯ ಕಾಣಿಸಲು ನಾರದನು ದೇವಾಸುರರಿಗೆ "ಮಹಾಸಮುದ್ರದೊಳಗೆ ಧನ್ವಂತ್ರಿಯು ಅಪೂರ್ವಶಕ್ತಿಯ ಅಮೃತವನ್ನು ಮುಚ್ಚಿಟ್ಟುಕೊಂಡಿರುವುದನ್ನು ತಿಳಿಸಿ ಈ ಅಮೃತದ ಸೇವನೆಯಿಂದ ಮೃತ್ಯುವು ಸಂಭವಿಸದು" ಎಂದನು. ಅಮೃತದ ಹೆಸರಿಗೆ ಆಕರ್ಷಿತರಾದ ದೇವಾಸುರರು ಅದನ್ನು ಪಡೆಯುವ ಉದ್ದೇಶದ ಸಮಾಲೋಚನೆಯಲ್ಲಿ ಮುಳುಗಿದ್ದರು. ದೂರ್ವಾಸರ ಶಾಪದಿಂದ ದೇವತಾರಾಜ ಇಂದ್ರನನ್ನು ಸಂರಕ್ಷಿಸುತ್ತಿದ್ದ ರಾಜ್ಯಲಕ್ಷ್ಮಿಯು ಸ್ವರ್ಗ ತೊರೆದು ಎಲ್ಲಿಯೋ ಹೋಗಿ ಬಿಟ್ಟಿದ್ದಳು. ಆ ಹೊತ್ತಿಗೆ ಶಕ್ತಿ ಕುಂದಿದ್ದ ಇಂದ್ರಾದಿ ದೇವತೆಗಳು ಪುನಃ ಶಕ್ತಿವಂತರಾಗಿ ಅಸುರರನ್ನು ಎದುರಿಸಲು ನಿಶ್ಚಯಿಸಿ ಅಮೃತಕ್ಕೆ ಹಾತೊರೆದರು. ಬ್ರಹ್ಮನ ಮೂಲಕ ಮಹಾವಿಷ್ಣುವಿನ ಮೊರೆ ಹೋದರು.


ಶ್ರೀ ಲಕ್ಷ್ಮಿಯನ್ನು ಪುನಃ ಸ್ವರ್ಗಕ್ಕೆ ಕರೆತರಲು ನಿಶ್ಚಯಿಸಿದ ಮಹಾ ವಿಷ್ಣುವು, ದೇವೇಂದ್ರನ ರಾಜ್ಯಲಕ್ಷ್ಮಿಯು ಮಹಾ ಸಾಗರದ ತಳದಲ್ಲಿ ತಪಸ್ಸಿನಲ್ಲಿ ತಲ್ಲೀನಳಾಗಿರುವುದಾಗಿಯೂ, ಆಕೆಯು ತಾನಾಗಿ ಮೇಲೆ ಬರುವಂತೆ ಕ್ಷೀರಸಾಗರವನ್ನು ಕಡೆಯುವ ಸಲಹೆ ನೀಡಿದನು. ಆ ಸಂದರ್ಭದಲ್ಲಿ ಲಕ್ಷ್ಮೀ, ಅಮೃತ ಮೊದಲಾದ ಹಲವು ವಸ್ತುಗಳು ಮೇಲಕ್ಕೆ ಬರುತ್ತವೆ. ಲಕ್ಷ್ಮೀ ಮೇಲೆ ಬಂದರೆ ದೇವತೆಗಳ ಕಷ್ಟಗಳು ದೂರವಾಗುತ್ತವೆ ಎಂದೂ ಹೇಳಿದನು. ಅಮೃತದ ಆಸೆ, ಮರಣಮೀರುವ ಆಸೆ ದೇವತೆಗಳಲ್ಲಿ ಉಂಟಾಯಿತು. ತುಂಬಾ ಆಳ, ವಿಶಾಲ ಕ್ಷೀರಸಾಗರದ ಹತ್ತಿರದಲ್ಲಿಯೇ ಮಂದರಾಚಲ ಎಂಬ ಪರ್ವತ ಕಡೆಗೋಲಿನಂತೆ ಬೆಳೆದಿದ್ದಿತು. ಅದನ್ನು ಪ್ರಾರ್ಥಿಸಿ ಸಮುದ್ರದ ಬಳಿ ಕರೆತಂದರು. ವಿಷ್ಣುವಿನ ಸಲಹೆಯಂತೆ ಪಾತಾಳದಲ್ಲಿದ್ದ ವಾಸುಕಿಯನ್ನು ಕಡೆಗೋಲಿನ ಹುರಿಯಾಗುವಂತೆ ಮನಒಲಿಸಿದರು. ಶಕ್ತಿಶಾಲಿ ರಾಕ್ಷಸರ ಸ್ನೇಹ ಬೆಳಸಿ ಸಂಧಿಮಾಡಿಕೊಂಡು ವಿಷ್ಣುವಿನ ಸೂಚನೆಯಂತೆ ದೇವತೆಗಳು ಅಮೃತದ ಸಮಪಾಲಿನ ಆಶ್ವಾಸನೆಯಿಂದ ರಾಕ್ಷಸರನ್ನು ಸಮುದ್ರ ಕಡೆಯಲು ಕರೆತಂದರು.


ದೇವಾಸುರರು ಸಮುದ್ರದ ಬಳಿ ಮಂದರಾಚಲ ಮತ್ತು ವಾಸುಕಿಯರೊಂದಿಗೆ ಬಂದರು. ಮಂದರ ಪರ್ವತವನ್ನು ಸಮುದ್ರದೊಳಕ್ಕೆ ಇಳಿಸುತ್ತಿದ್ದಂತೆಯೇ ಅದು ಸಂಪೂರ್ಣ ಮುಳುಗುವಂತೆ ಕಂಡಿತು. ಮಹಾವಿಷ್ಣುವು ಆ ಕ್ಷಣವೇ ಭಾರೀ ಆಮೆಯಾಗಿ (ಕೂರ್ಮ) ಸಮುದ್ರದ ತಳ ಸೇರಲಾರಂಭಿಸಿದ್ದ ಮಂದರ ಪರ್ವತವನ್ನು ತನ್ನ ಬೆನ್ನಿನ ಮೇಲೆ ನಿಲ್ಲಿಸಿಕೊಂಡನು. ನಂತರ ವಾಸುಕಿಯನ್ನು ಸುರುಳಿಯಾಗಿ ಪರ್ವತಕ್ಕೆ ಸುತ್ತಿದರು ರಾಹುವಿನ ನೇತೃತ್ವದಲ್ಲಿ ಅಸುರರು ಹಾವಿನ ಬಾಯಿಯ ಕಡೆ ನಿಂತರು. ದೇವತೆಗಳು ವಾಸುಕಿಯ ಬಾಲವನ್ನು ಹಿಡಿದರು; ದೇವಾಸುರರು ಸಮುದ್ರವನ್ನು ಕಡೆದರು! ಕಾಲಾನಂತರ ವಾಸುಕಿಯ ಬಾಯಿಯಿಂದ ಅಲೆ ಅಲೆಯಾಗಿ ಹೊರ ಬರುತ್ತಿದ್ದ ವಿಷವು ದೇವಾಸುರರನ್ನು ಮೂರ್ಛೆಗೊಳಿಸುತ್ತಾ ಅನಾಹುತ ಮಾಡಲಾರಂಭಿಸಿತು. ವಿಷ್ಣುವನ್ನು ನೋಡಿದ ಶಿವನು ತಾನೇ ವಿಷವನ್ನು ಕುಡಿಯಲಾರಂಭಿಸಿದನು. ಮುಖವನ್ನು ಆವರಿಸಿದ ವಿಷವು ಗಂಟಲಿನ ಮೂಲಕ ಇಳಿಯಲಾರಂಭಿಸಿದಾಗ ಪಾರ್ವತಿಯು ಕೈಗಳಿಂದ ಬಿಗಿಯಾಗಿ ಶಿವನ ಕುತ್ತಿಗೆಯನ್ನು ಹಿಡಿದು ವಿಷವನ್ನು ಅಲ್ಲಿಯೇ ತಡೆದಳು. ವಿಷವು ಕಂಠದಲ್ಲಿಯೇ ಉಳಿಯಿತು. ಹೀಗಾಗಿ ವಿಷಕಂಠ, ನೀಲಕಂಠ, ಶ್ರೀಕಂಠ, ನಂಜುಂಡ ಎಂಬ ಹೆಸರುಗಳಿಗೆ ಶಿವನು ಪಾತ್ರನಾದನು; ದೇವಾಸುರರ ಆತಂಕ ದೂರವಾಯಿತು.

ಸಮುದ್ರ ಮಂಥನ ದೇವಾಸುರರಿಂದ ಮುಂದುವರಿಯಿತು. ಸತತ ಕಡೆಯುವಿಕೆಯ ನಂತರ ಸಮುದ್ರರಾಜನ ಮಗಳು ವಾರುಣಿ, ಪಾರಿಜಾತ ವೃಕ್ಷ, ಕೌಸ್ತುಭಮಣಿ, ಕಾಮಧೇನು, ಕುದುರೆ, ಅಪ್ಸರೆಯರು ಸಮುದ್ರದ ಹೊರ ಬಂದರು. ಅಪ್ಸರೆಯರ ಗುಂಪಿನೊಡನೆ ಶ್ರೀ ರಾಜಲಕ್ಷ್ಮೀಯೂ ಬಂದಳು. ದೇವತೆಗಳು ಸಂತೋಷಿಸಿದರು; ಇಂದ್ರನ ಬಲವೂ ಹಿಂತಿರುಗಿದಂತಾಯಿತು. ಲಕ್ಷ್ಮಿಯನ್ನು ಮಹಾವಿಷ್ಣುವಿನ ಬಳಿ ಸಂಭ್ರಮದಿಂದ ಕರೆದೊಯ್ದರು. ಮಂಥನವು ಮುಂದುವರೆಯಿತು. ಆಗ ಶ್ರೀ ವಿಷ್ಣುವಿನ ಅಂಶಭೂತನೇ ಆದ ಧನ್ವಂತರಿಯು ಕೈಯಲ್ಲಿ ಅಮೃತ ಕಲಶ ಹಿಡಿದು ಹೊರಬಂದನು. ಅಮೃತಕ್ಕೆ ಧನ್ವಂತರಿಯ ಬಳಿ ದೇವಾಸುರರು ಕಿತ್ತಾಟ ನಡೆಸಿದರು. ಇದನ್ನು ಕಂಡ ಮಹಾವಿಷ್ಣುವು ಕೂಡಲೇ ಸುಂದರಳಾದ ಮೋಹಿನಿ ರೂಪಧರಿಸಿ ದೇವಾಸುರರಿಗೆ ಅಮೃತವನ್ನು ಹಂಚುವುದಾಗಿ ಅಮೃತ ಕಲಶವನ್ನು ಧನ್ವಂತರಿಯಿಂದ ಪಡೆದನು. ದೇವತೆಗಳು ಮತ್ತು ರಾಕ್ಷಸರು ಸಾಲು ಸಾಲಾಗಿ ನಿಂತರು. ಜಗನ್ಮೋಹಿನಿಯ ಸೌಂದರ್ಯದ ಮತ್ತಿನಲ್ಲಿ ಮಾತಿಲ್ಲದೆ ಮೂಕರಾಗಿದ್ದ ಅಸುರರು ಅಮೃತದಿಂದ ವಂಚಿತರಾದರು. ವಿಷ್ಣುವು ಮೋಹಿನಿಯಾಗಿ ದೇವತೆಗಳು ಅಮೃತವನ್ನು ಸೇವಿಸುವಂತೆ ನೆರವಾದನು. ಇದನ್ನು ಕಂಡ ಅಸುರ ರಾಹುವು ದೇವತೆಗಳ ಸಾಲಿನಲ್ಲಿ ಸೂರ್ಯ ಚಂದ್ರರ ನಡುವೆ ತಲೆಮರೆಸಿಕೊಂಡು ನಿಂತು ಮೋಹಿನಿ ನೀಡಿದ ಅಮೃತವನ್ನು ಸವಿಯುತ್ತಿದ್ದನು. ಈ ಅಪಾಯಕಾರಿ ಸಂದರ್ಭವನ್ನು ಗಮನಿಸಿದ ಸೂರ್ಯ ಚಂದ್ರರು ಮೋಹಿನಿಗೆ ಸನ್ನೆ ಮಾಡಿದರು. ಕೋಪಗೊಂಡ ಜಗನ್ಮೋಹಿನಿಯು ರಾಹುವಿನ ತಲೆಯನ್ನು ಸೌಟಿನಿಂದ ಕುಟ್ಟಿ ಬೇರೆ ಮಾಡಿದಳು. ಆದರೂ ಅಮೃತದ ಪ್ರಭಾವದಿಂದ ರಾಹುವು ಸಾಯಲಿಲ್ಲ; ತಲೆಯು ಒಡೆಯಲಿಲ್ಲ. ಆದರೆ ಅವನ ರುಂಡ ಮುಂಡಗಳು ಬೇರೆಯಾದವು.

ಅಸುರ ರಾಹು ಒಬ್ಬ ಪರಾಕ್ರಮಶಾಲಿಯಾಗಿದ್ದನು. ಹಾಗಾಗಿ ಅವನ ನೇತೃತ್ವದಲ್ಲಿ ಅಸುರರು ಸುರರೊಂದಿಗೆ ಸಮುದ್ರ ಮಂಥನಕ್ಕೆ ಒಪ್ಪಿದ್ದರು. ಹೀಗಾಗಿ ವಿಷ್ಣುವು ದಯೆಯಿಂದ ರಾಹುವಿನ ಎರಡು ಶರೀರಾಂಗಗಳು ಬೇರೆ ಬೇರೆಯಾಗಿದ್ದರೂ ಅವೆರಡೂ ಪ್ರತ್ಯೇಕವಾಗಿಯೇ ಜೀವಂತ ವಾಗಿರುವಂತೆ ಮಾಡಿದನು. ತಲೆಯಾಕಾರದ ರಾಹು ಮತ್ತು ಬಾಲದಾಕಾರದ ಕೇತುವೇ ಆ ಎರಡು ವಿಭಿನ್ನ ಜೀವಗಳು. ಹೀಗಾಗಿಯೇ ರಾಹು ಕೇತುಗಳು ಆಗಾಗ ಸೂರ್ಯ ಚಂದ್ರರನ್ನು (ಗ್ರಹಣದ ನೆಪದಲ್ಲಿ) ಪೀಡಿಸುತ್ತಲೇ ಇರುತ್ತಾರೆ ಎಂದು ಅಗ್ನಿ ಪುರಾಣದಲ್ಲಿ ಅಗ್ನಿಯು ವಸಿಷ್ಠರಿಗೆ ಹೇಳಿದನೆಂದು ಉಲ್ಲೇಖಿಸಲಾಗಿದೆ. ದೇವತೆಗಳು ಅಮೃತಪಾನದಿಂದ ಸಂತೃಪ್ತರಾದ ನಂತರ ಮಹಾವಿಷ್ಣುವು ಮೋಹಿನಿ ರೂಪವನ್ನು ತ್ಯಜಿಸಿದನು.


ದೇವನಹಳ್ಳಿಯ ಚೆನ್ನಕೇಶವ ಆಚಾರ್ಯರು ರೇಖಿಸಿರುವ ಮೇಲಿನ ಸಂದರ್ಭದ ಹಿನ್ನೆಲೆಯ ಹಲವು ರೇಖಾಚಿತ್ರಗಳು ಶಿಲ್ಪ ಸೃಷ್ಟಿಯ ಉದ್ದೇಶದಿಂದ ವಿಶಿಷ್ಟವೆನಿಸುತ್ತವೆ. ಬಹುತೇಕ ಉಬ್ಬುಶಿಲ್ಪ/ಅರ್ಧಶಿಲ್ಪಗಳಿಗಾಗಿ ಈ ರೇಖಾಚಿತ್ರಗಳು ಭೂಮಿಕೆಯಾಗುವಂತಿವೆ. ಕೆಲವು ರೇಖಾರೂಪ ಕಲ್ಪನೆಗಳು ಅಪೂರ್ವವಾಗಿ ಮೂಡಿ ಬಂದಿವೆ. ಅಮೃತ ಕಲಶಕ್ಕಾಗಿ ಕಿತ್ತಾಟ ನಡೆಸಿರುವ ದೇವಾಸುರರ ಸನಿಹದಲ್ಲಿಯೇ ನಿಂತು ಅವರ ಗಮನ ಸೆಳೆದಿರುವ ಜಗನ್ಮೋಹಿನಿ ರೇಖಾಚಿತ್ರವು ವಿಶಿಷ್ಟ ರೇಖಾರೂಪ ಸಂಯೋಜನೆಯಿಂದ ಕೂಡಿದೆ. ಚಿತ್ರ ಅವಕಾಶ (Space) ಸುಂದರ ಸಂತುಲನೆಯಿಂದ ಕೂಡಿದೆ. ಜಗನ್ಮೋಹಿನಿಯು ಅಮೃತವನ್ನು ಹಂಚುತ್ತಿರುವ ಎರಡು ರೇಖಾಚಿತ್ರಗಳೂ ಅಪೂರ್ವ ಉಬ್ಬುಶಿಲ್ಪ ಕಲ್ಪನೆಗೆ ಪೂರಕವಾಗಬಲ್ಲವು. ಬಹುಷಃ ದೇವನಹಳ್ಳಿ, ಹೊಸಕೋಟೆ, ಕೋಲಾರ, ಚಿಕ್ಕಬಳ್ಳಾಪುರ ಭಾಗಗಳ ವಿಷ್ಣು ದೇವಾಲಯಗಳಲ್ಲಿ ಎಲ್ಲಿಯಾದರೂ ಈ ವಿಶಿಷ್ಟ ರೇಖಾಚಿತ್ರಗಳು ಉಬ್ಬಶಿಲ್ಪಗಳಾಗಿ ಕಾಣಿಸಿಕೊಂಡಿರಬಹುದಾದ ಸಾಧ್ಯತೆಗಳು ಇವೆ.


శ్రీ
సముద్ర మథనం
రాక్షసులు
దేవతలు
మందరగిరి
ఆదిశేషుడు


శ్రీ


శ్రీ అమృతం
గంగా
చంద్ర





ರಾಹು
ಸೂರ್ಯ
ಕೇತು



ಸೂರ್ಯಚಂದ್ರರ ನಡುವೆ ಜಗನ್ಮೋಹಿನಿ
ಬ್ರಹ್ಮ, ರಾಹು, ಕೇತು ರೇಖಾರೂಪಗಳು

೧೧. ಮಹಾಭಾರತದ ಕೆಲವು ರೇಖಾಚಿತ್ರಗಳು

ಶ್ರೀಕೃಷ್ಣನ ಅವತಾರದಲ್ಲಿ ಮಹಾವಿಷ್ಣು

ಮಹಾಭಾರತದಲ್ಲಿ ಎಲ್ಲ ವೇದ, ಪುರಾಣ, ಉಪನಿಷತ್ತುಗಳ ಸಾರವು ಸಂಗ್ರಹವಾಗಿದೆ ಎಂದು ವೇದವ್ಯಾಸರು ಹೇಳಿದ್ದಾರೆ. ಅಗ್ನಿ ಪುರಾಣದಲ್ಲಿಯೂ ಮಹಾಭಾರತದ ಸಂಕ್ಷಿಪ್ತ ವಿವರಗಳಿವೆ. ಅಗ್ನಿ ದೇವನು ವಸಿಷ್ಠರಿಗೆ "ನಾನೀಗ ಪಾಂಡವರನ್ನು ನಿಮಿತ್ತ ಮಾಡಿಕೊಂಡು ಶ್ರೀ ಹರಿಯು ಭೂಭಾರ ಕಡಿಮೆ ಮಾಡಿರುವ ಮತ್ತು ಅವನ ಮಹಿಮೆಯನ್ನು ವೈಭವೀಕರಿಸುವ ಮಹಾಭಾರತವನ್ನು ಹೇಳುವೆ" ಎಂದು ಮುಂದುವರಿಯುತ್ತಾನೆ. ಬ್ರಹ್ಮನಿಗೆ ಅತ್ರಿ, ಅತ್ರಿಯಿಂದ ಚಂದ್ರ, ಚಂದ್ರನಿಂದ ಬುಧ, ಬುಧನಿಂದ ಪುರೂರವನು ಹುಟ್ಟಿದರು. ಪುರೂರವನಿಂದ ಆಯು, ಆಯುವಿನಿಂದ ನಹುಷ ಚಕ್ರವರ್ತಿ, ಅವನಿಂದ ಯಯಾತಿ ಹುಟ್ಟಿದರು. ಪುರುವಿನ ವಂಶದಲ್ಲಿ ಭರತ, ಅವನಿಂದ ಕುರು, ಕುರುವಿನಿಂದ ಶಂತನು ಹುಟ್ಟಿದರು. ಶಂತನ ಗಂಗೆಯಿಂದ ಭೀಷ್ಮನನ್ನು ಪಡೆದನು. ಸತ್ಯವತಿಯ ಮೊದಲ ಮಗನಾದ ವ್ಯಾಸನ ಮೂಲಕ ಅಂಬಿಕೆಯಿಂದ ಧೃತರಾಷ್ಟ್ರ ಮತ್ತು ಅಂಬಾಲಿಕೆಯಿಂದ ಪಾಂಡು ಎಂಬಿಬ್ಬರು ಮೊಮ್ಮಕ್ಕಳನ್ನು ಪಡೆದಳು. ಧೃತರಾಷ್ಟ್ರನಿಗೆ ಗಾಂಧಾರಿ ಹಾಗೂ ಪಾಂಡುವಿಗೆ ಕುಂತೀ ಮತ್ತು ಮಾದ್ರಿಯವರೊಂದಿಗೆ ವಿವಾಹ ಮಾಡಿದಳು. ಹುಟ್ಟು ಕುರುಡನಾದ ಧೃತರಾಷ್ಟ್ರನಿಗೆ ಒಂದು ನೂರು ಗಂಡು ಮಕ್ಕಳು ಮತ್ತು ಒಬ್ಬಳೇ ಹೆಣ್ಣು ಮಗಳು ಹುಟ್ಟಿದರು. ಕುಂತಿಯು ಶತಶೃಂಗ ಮುನಿಯ ಶಾಪಕ್ಕೆ ಪಾತ್ರನಾಗಿ ಹೆಂಡತಿಯರಿಂದ ಸಂತಾನಕ್ಕೆ ಅಪಾತ್ರನಾಗಿದ್ದ ಪಾಂಡು ರಾಜನ ಅಪ್ಪಣೆ ಪಡೆದು ತಾನು ಹಿಂದೆ ದೂರ್ವಾಸರಿಂದ ಪಡೆದ ವರಗಳ ಫಲವಾಗಿ ಯುಧಿಷ್ಠಿರ, ಭೀಮ, ಅರ್ಜುನರನ್ನು ಪಡೆದಳು. ಮಾದ್ರಿಗೆ ಕುಂತಿಯು ನೀಡಿದ ಉಳಿದೊಂದು ವರದಿಂದ ಮಾದ್ರಿಯು ನಕುಲ ಸಹದೇವರನ್ನು ಪಡೆದಳು. ಪಾಂಡುರಾಜನನ್ನು ಮದುವೆಯಾಗುವ ಮೊದಲೇ ಕುಂತಿಯು ಸೂರ್ಯನಿಂದ ಮಗುವೊಂದನ್ನು ಪಡೆದು ಅವನನ್ನು ತ್ಯಜಿಸಿದ್ದಳು. ಅವನು ಕರ್ಣನೆಂಬ ಹೆಸರಿನಲ್ಲಿ ದುರ್ಯೋಧನನ ಆಶ್ರಯದಲ್ಲಿ ಸಾಮಂತ ರಾಜನಾಗಿ ಬೆಳೆದನು. ಹಲವು ಸಂದರ್ಭಗಳ ಕಾರಣವಾಗಿ ಕೌರವರು ಮತ್ತು ಪಾಂಡವರ ನಡುವೆ ಅಸಹನೆ, ಶತೃತ್ವ ಬೆಳೆಯಿತು. ಪಾಂಡವರ ಬಗೆಗಿನ ದುರ್ಯೋಧನನ ದ್ವೇಷವು ಹೆಚ್ಚುತ್ತಲೇ ಹೋಯಿತು. ನಂತರ ಅರಗಿನ ಮನೆಯ ಅನಾಹುತ, ಏಕಚಕ್ರನಗರವಾಸ, ಬಕಾಸುರನ ವಧೆಗಳ ನಂತರ ಪಾಂಡವರು ಪಾಂಚಾಲ ರಾಜ ಪುತ್ರಿಯ ಸ್ವಯಂವರದಲ್ಲಿ ಅರ್ಜುನನು ಮತ್ಸ್ಯಯಂತ್ರ ಭೇದಿಸಿ ಗೆದ್ದ ದ್ರೌಪದಿಯನ್ನು ವಿಚಿತ್ರ ಸಂದರ್ಭವೊಂದರ ಕಾರಣವಾಗಿ ಐವರೂ ಮದುವೆಯಾದರು; ಶ್ರೀ ಕೃಷ್ಣನ ಸಂಪರ್ಕವೂ ಸಿಕ್ಕಿತು. ಕೌರವರಿಗೂ ಪಾಂಡವರು ಜೀವಿಸಿರುವ ವಿಷಯ ತಿಳಿಯಿತು. ಅರ್ಧರಾಜ್ಯ ಪಡೆದ ಪಾಂಡವರು ಬೇರೊಂದು ರಾಜಧಾನಿ ಕಟ್ಟಿಕೊಂಡರು; ರಾಜಸೂಯಯಾಗ ಮಾಡಿದರು. ಪಾಂಡವರ ಸಂಪತ್ತನ್ನು ಸಾಮಂತರ ವೈಭವವನ್ನೂ ನೋಡಿ ದುರ್ಯೋಧನನು ಅಸಹನೆಯಿಂದ ತೊಳಲಿದನು. ನಂತರದ ಖಾಂಡವ ವನ ದಹನದ ಸಂದರ್ಭದಲ್ಲಿ ಅಗ್ನಿದೇವನು ಅರ್ಜುನನಿಗೆ ಗಾಂಡೀವ ಧನುಸ್ಸು, ಎಂದೂ ಬರಿದಾಗದ ಬತ್ತಳಿಕೆಯನ್ನೂ, ಶ್ರೀ ಕೃಷ್ಣನಿಗೆ ಸುದರ್ಶನ ಚಕ್ರವನ್ನೂ ಉಡುಗೊರೆಯಾಗಿ ಕೊಟ್ಟನು. ಶಕುನಿಯ ಉಪಾಯ, ದುರ್ಯೋಧನನ ಚಿಂತೆ, ಯುಧಿಷ್ಠಿರನ ಪಗಡೆಯಾಟದ ಹುಚ್ಚುಗಳೆಲ್ಲವೂ ಒಟ್ಟಾಗಿ ಪಾಂಡವರು ಎಲ್ಲವನ್ನೂ ಕಳೆದುಕೊಂಡು ಹನ್ನೆರಡು ವರ್ಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸ ಮಾಡಬೇಕಾದ ಸಂದರ್ಭವೂ ಬಂದು ಹೋಯಿತು. ಅರಣ್ಯವಾಸ ಮುಗಿದು ಅಜ್ಞಾತವಾಸದಲ್ಲಿ ವೇಷ ಮರೆಸಿಕೊಂಡು ವಿರಾಟನ ಗರಿಯಲ್ಲಿ ವಿರಾಟ ರಾಜನ ಸೇವೆಯಲ್ಲಿ ನಿರತರೂ ಆಗಿದ್ದರು. ಕೀಚಕನ ಸಂಹಾರವೂ ಭೀಮನಿಂದ ನಡೆಯಿತು. ಕೌರವರು ವಿರಾಟನ ಸಮಸ್ತ ಗೋವುಗಳನ್ನು ಅಪಹರಿಸಿದ ಕಾರಣಕ್ಕಾಗಿ ನಡೆದ ಯುದ್ಧದಲ್ಲಿ ಉತ್ತರ ಕುಮಾರನ ಹಿನ್ನೆಲೆಯಲ್ಲಿನಿಂತ ಬೃಹನ್ನಳೆ/ಅರ್ಜುನ ಕೌರವ ಸೈನ್ಯವನ್ನು ಧ್ವಂಸ ಮಾಡಿದನು. ವಿರಾಟನ ಮಗಳು ಉತ್ತರೆ ಮತ್ತು ಅರ್ಜುನನ ಮಗನಾದ ಅಭಿಮನ್ಯುವಿನ ಮದುವೆಯಾಯಿತು. ಅನಂತರ ಪಾಂಡವರ ಮತ್ತು ಕೌರವರ ನಡುವೆ ಉತ್ತಮ ಸಂಬಂಧ ಏರ್ಪಡಲು ಅನೇಕ ಹಿರಿಯರು ಮಾಡಿದ ಪ್ರಯತ್ನಗಳು ವಿಫಲವಾದವು. ಶ್ರೀ ಕೃಷ್ಣನ ಪ್ರಯತ್ನಕ್ಕೂ ಐದು ಗ್ರಾಮಗಳನ್ನು ಕೊಡಲೂ ಸಹ ದುರ್ಯೋಧನನು ನಿರಾಕರಿಸಿದನು. ಹೀಗಾಗಿ ಕೌರವರು, ಪಾಂಡವರಿಗೆ ಯುದ್ಧವೇ ಆತ್ಯಂತಿಕ ಉತ್ತರವಾಯಿತು.

ಕುರುಕ್ಷೇತ್ರದಲ್ಲಿ ಕೌರವ ಪಾಂಡವರ ಸೈನ್ಯಗಳು ಮುಖಾಮುಖಿಯಾದವು. ಶ್ರೀ ಕೃಷ್ಣನು ಅರ್ಜುನನ ಸಾರಥಿಯಾದನು. ಬಂಧು ಬಳಗ, ಗುರು ಹಿರಿಯರ ಸಾವನ್ನು ಊಹಿಸಿ ಆತಂಕಗೊಂಡ ಅರ್ಜುನನು "ಯುದ್ಧವೂ ಬೇಡ– ಭೂಮಿಯೂ ಬೇಡ" ಎಂದು ಶ್ರೀ ಕೃಷ್ಣನ ಮುಂದೆ ದುಃಖಿಸಿದನು. ಶ್ರೀಕೃಷ್ಣನು ಅರ್ಜುನನಿಗೆ ಧರ್ಮ, ಕರ್ಮ – ಕರ್ತವ್ಯಗಳ ಕುರಿತು ಹಲವು ರೀತಿಗಳಲ್ಲಿ ಸಮಾಧಾನ ಮಾಡಿ ಅವನನ್ನು ಯುದ್ಧಕ್ಕೆ ಸಿದ್ಧನಾಗುವಂತೆ ಮಾಡಿದನು. ಮುಂದೆ ನಡೆದ ಭೀಕರ ಕಾಳಗದಲ್ಲಿ ಅಪಾರ ಸಂಖ್ಯೆಯ ಶೂರ–ವೀರ ಸೈನಿಕರು, ಕುದುರೆ, ಒಂಟೆ, ಆನೆಗಳೂ ಬಲಿಯಾದವು. ವೀರ ಅಭಿಮನ್ಯುವನ್ನು ಕೌರವರು ಕುಟಿಲತೆಯಿಂದ ಕೊಂದರು.

ಭೀಷ್ಮ ಪಿತಾಮಹನು ಹತ್ತು ದಿನಗಳವರೆಗೆ ಪಾಂಡವರ ಸೈನ್ಯವನ್ನು ಸದೆಬಡಿದನು; ಶಿಖಂಡಿಯ ಮೂಲಕ ಗಾಯಗೊಂಡು ನೆಲಕ್ಕೆ ಉರುಳಿದನು. ಉತ್ತರಾಯಣದವರೆಗೆ ಶರಶಯ್ಯೆಯ ಮೇಲಿದ್ದು ನಂತರ ಸ್ವರ್ಗಕ್ಕೆ ಹೋಗಲು ನಿರ್ಧರಿಸಿದನು. ದ್ರೋಣಾಚಾರ್ಯ ಕೌರವರ ಸೇನಾದಿಪತಿಯಾಗಿ ಪಾಂಡವರ ಹಲವಾರು ವೀರರನ್ನು ನೆಲಕ್ಕುರಳಿಸಿ ಶ್ರೀ ಕೃಷ್ಣನಲ್ಲಿ ಆತಂಕಕ್ಕೆ ಕಾರಣನಾದನು; ಶ್ರೀ ಕೃಷ್ಣನ ಜಾಣತನದಿಂದ ಧೃಷ್ಟದ್ಯುಮ್ನನಿಂದ ವಧಿಸಲ್ಪಟ್ಟನು. ಹದಿನಾರನೆಯ ದಿನ ಕರ್ಣನು ಅರ್ಜುನನೊಡನೆ ಸೆಣಸಾಡಿ ಕೊಲ್ಲಲ್ಪಟ್ಟನು. ಕೌರವರ ಸೇನಾಧಿಪತಿಯಾಗಿ ಹೋರಾಡಿದ ಶಲ್ಯನು ಅರ್ಧದಿನದಲ್ಲಿಯೇ ಯುಧಿಷ್ಠಿರನಿಂದ ವಧಿಸಲ್ಪಟ್ಟನು. ಕೌರವರ ಸಮಸ್ತ ಸೈನ್ಯವೂ ನಾಶವಾಗಿ ಪಾಂಡವರ ಅಪಾರ ಸೈನ್ಯವೂ ಬಲಿಯಾಯಿತು.

ಹದಿನೆಂಟನೆಯ ದಿನದ ಭೀಮ ದುರ್ಯೋಧನರ ಭೀಕರ ಗಧಾಯುದ್ಧದಲ್ಲಿ ದುರ್ಯೋಧನನು ಹತನಾದನು. ತಂದೆಯ ವಧೆಯ ಶೋಕ ಮತ್ತು ದುರ್ಯೋಧನನ ದುರ್ಗತಿಯಿಂದ ಕ್ರೋಧಿತನಾದ ಅಶ್ವತ್ಥಾಮನು ಹದಿನೆಂಟನೆಯ ದಿನದ ರಾತ್ರಿ ಪಾಂಡವರ ಪಾಳಯಕ್ಕೆ ಹೋಗಿ ಸಿಕ್ಕ ಸಿಕ್ಕವರನ್ನು ಕೊಲ್ಲ ತೊಡಗಿದನು. ಶ್ರೀ ಕೃಷ್ಣನ ಉಪಾಯದಿಂದ ಪಾಂಡವರು ಐವರೂ ಬದುಕಿದರೂ ದ್ರೌಪದಿಯು ತನ್ನೆಲ್ಲ ಮಕ್ಕಳನ್ನು ಕಳೆದು ಕೊಳ್ಳಬೇಕಾಯಿತು; ಉತ್ತರೆಯ ಗರ್ಭವು ಕೆಳಗೆ ಬಿದ್ದಿತು. ಆಕ್ರೋಶಗೊಂಡ ಅರ್ಜುನನು ಅಶ್ವತ್ಥಾಮನನ್ನು ನಾರಾಯಣ ಅಸ್ತ್ರದಿಂದ ಬಂಧಿಸಿದನು; ಅಶ್ವತ್ಥಾಮನ ತಲೆಯಲ್ಲಿದ್ದ ರತ್ನವನ್ನು ಕಿತ್ತು ದ್ರೌಪದಿಗೆ ಕೊಟ್ಟು ಸಮಾಧಾನಪಡಿಸಿದನು. ಉತ್ತರೆಯ ಗರ್ಭದಿಂದ ಕೆಳಗೆ ಬಿದ್ದಿದ್ದ ಪಿಂಡವನ್ನು ಶ್ರೀ ಕೃಷ್ಣನು ಜೋಪಾನವಾಗಿಸಿ ಆರೈಕೆ ಮಾಡಿದ್ದರಿಂದ ಅದು ಮುಂದೆ ಪರೀಕ್ಷಿತರಾಜನಾಗಿ ಹೆಸರು ಗಳಿಸುವಂತಾಯಿತು.

ಮಹಾಭಾರತ ಯುದ್ಧದಲ್ಲಿ ಅಂತಿಮವಾಗಿ ಕೌರವರ ಪಕ್ಷದಲ್ಲಿ ಕೃತವರ್ಮ, ಕೃಪಾಚಾರ್ಯ, ಮತ್ತು ಅಶ್ವತ್ಥಾಮ ಈ ಮೂವರು ಮಾತ್ರ ಉಳಿದುಕೊಂಡರೇ ಪಾಂಡವರ ಪಕ್ಷದಲ್ಲಿ ಅಣ್ಣತಮ್ಮಂದಿರಾದ ಐವರು ಪಾಂಡವರು, ಸಾತ್ಯಕಿ ಮತ್ತು ಶ್ರೀಕೃಷ್ಣನು ಮಾತ್ರ ಉಳಿದುಕೊಂಡರು. ಬಲರಾಮನು ಯುದ್ಧದಲ್ಲಿ ಕಾಣಿಸಿಕೊಳ್ಳಲಿಲ್ಲ. ಮಡಿದವರಿಗೆ ಜಲತರ್ಪಣೆ ನೀಡಿದ ಯುಧಿಷ್ಠಿರನು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನ ಬಳಿ ರಾಜ ಧರ್ಮವೇ ಮೊದಲಾದ ಹಲವು ಧರ್ಮ ರಹಸ್ಯಗಳನ್ನು ತಿಳಿದನು. ಹಲವಾರು ವರ್ಷಗಳ ರಾಜ್ಯಭಾರದ ನಂತರ ಮಾಡಿದ ರಾಜಸೂಯಯಾಗದಿಂದ ಯುಧಿಷ್ಠಿರನು ಯುದ್ಧದ ನರಹತ್ಯೆಯ ಪಾಪದಿಂದ ಮುಕ್ತನಾದನು ಎಂದು ಹೇಳಲಾಗಿದೆ. ದ್ವಾರಕೆಯ ಯಾದವೀ ಕಲಹದಲ್ಲಿ ಒನಕೆಗಳ ಬಡಿದಾಟದಲ್ಲಿ ಯಾದವರೆಲ್ಲರೂ ನಾಶವಾದರು. ಶ್ರೀ ಕೃಷ್ಣನು ಗಾಂಧಾರಿಯ ಶಾಪದ ಕಾರಣವಾಗಿ ಅಸುನೀಗಿದನು. ದುಃಖ ತಪ್ತ ಯುಧಿಷ್ಠಿರನು ಅರ್ಜುನನ ಮೊಮ್ಮಗನಾದ ಪರೀಕ್ಷಿತನಿಗೆ ರಾಜ್ಯಭಾರವಹಿಸಿ ಎಲ್ಲ ಪಾಂಡವರೊಡನೆ ಮಹಾಪ್ರಸ್ಥಾನ ಮಾಡಿದನು. ಸ್ವಲ್ಪ ಹಿಂದೆ ಅಂದರೆ ಯುಧಿಷ್ಠಿರನು ಸಿಂಹಾಸನಾರೂಢನಾದ ಕೂಡಲೇ ಧೃತರಾಷ್ಟ್ರನು ಎಲ್ಲವನ್ನೂ ತೊರೆದು ಗಾಂಧಾರಿ ಸಮೇತ ವಾನಪ್ರಸ್ಥ ಆಶ್ರಮಕ್ಕೆ ಹೋದನು. ಅವರನ್ನು ನೋಡಿಕೊಳ್ಳಲು ಕುಂತಿಯೂ ಹೋದಳು. ವಿದುರನು ದಾವಾನಲದಲ್ಲಿ ಸುಟ್ಟುಹೋದನು. ಹೀಗೆ ಮಹಾವಿಷ್ಣುವು ಶ್ರೀ ಕೃಷ್ಣನ ರೂಪದಲ್ಲಿ ಅವತರಿಸಿ ದಾನವ – ದೈತ್ಯರಾಗಿ ಪಾಂಡವ ಕೌರವರನ್ನು ನಿಮಿತ್ತ ಮಾಡಿಕೊಂಡು ಭೀಕರ ಯುದ್ಧ ಸಾಧಿಸಿ ಅಪಾರ ಸಂಖ್ಯೆಯ ಪ್ರಾಣಹಾನಿ ಮಾಡಿದನು. ಯದುಕುಲನಾಶ, ಪ್ರಭಾಸ ಕ್ಷೇತ್ರದ ಸರಸ್ವತಿ ದಂಡೆಯ ಮೇಲೆ ಶ್ರೀ ಕೃಷ್ಣನ ಶರೀರ ತ್ಯಾಗದ ನಂತರ ಎಲ್ಲರನ್ನು ಕಳೆದುಕೊಂಡು ಅರ್ಜುನನು ಅಣ್ಣನ ಬಳಿ ಹೋಗಿ ಗೋಳಾಡಿದನು; ಎಲ್ಲವೂ ಇದ್ದೂ ಇಲ್ಲದಂತಾಗಿವೆ ಎಂದೂ ದುಃಖಿಸಿದನು. ಅಂತಿಮವಾಗಿ ಪಂಚಪಾಂಡವರೂ ದ್ರೌಪದಿಯೂ ಶ್ರೀ ಕೃಷ್ಣನ ಅಷ್ಟೋತ್ತರ ಹೇಳುತ್ತಾ ಮಹಾ ಪ್ರಸ್ಥಾನಕ್ಕೆ ಹೊರಟರು. ಸ್ವರ್ಗಾರೋಹಣದ ಸಂದರ್ಭದಲ್ಲಿ ಮೊದಲು ದ್ರೌಪದಿ, ನಂತರ ಸಹದೇವ, ನಕುಲ, ಅರ್ಜುನ ಮತ್ತು ಭೀಮ ಹೀಗೆ ಒಬ್ಬೊಬ್ಬರೇ ಭೂಮಿಯತ್ತ ಬೀಳತೊಡಗಿದರು; ಯುಧಿಷ್ಠಿರನೊಬ್ಬನೇ ಸ್ವರ್ಗಕ್ಕೆ ಹೋದನು. ಇಂದ್ರನ ರಥವು ಅವನನ್ನು ಸ್ವಾಗತಿಸಿತು. ಸ್ವರ್ಗದಲ್ಲಿ ಯುಧಿಷ್ಠಿರನು ಎಲ್ಲ ಕೌರವರೊಂದಿಗೆ, ಇನ್ನೂ ಹಲವರು ವೀರಾಧಿವೀರರನ್ನು ಗುರು ಹಿರಿಯನ್ನು, ತಂದೆ ತಾಯಿಯರನ್ನು ನೋಡಿದನು. ಕೊನೆಗೆ ವಾಸುದೇವನ ದರ್ಶನವೂ ದೊರಕಿತು, ಎಂದು ಅಗ್ನಿಪುರಾಣದಲ್ಲಿ ಹೇಳಲಾಗಿದೆ.



ಧರ್ಮರಾಜನ ವಂಶವಿವರದ ರೇಖಾಕಲ್ಪನೆ ದ್ರೌಪತಿ, ನಾರದರ ರೇಖಾರೂಪಗಳು



ಭೀಮಾರ್ಜುನರ ವಂಶವಿವರ
ಬಲಗಡೆಯಿಂದ ಚಿತ್ರಾಂಗದ, ಬಬ್ರುವಾಹನ, ವುಲೂಚಿ, ಸುಭದ್ರ, ಅರ್ಜುನ
ಅಭಿಮನ್ಯು, ಭೀಮ, ಹಿಡಂಬಿ, ಘಟೋತ್ಗಜ ಮೊದಲಾದವರ ರೇಖಾ ರೂಪಗಳು




ನಕುಲ ಸಹದೇವರ ವಂಶವಿವರದ ರೇಖಾಕಲ್ಪನೆ




ಸುಯೋಧನ ಸಭಾದಲ್ಲಿ ಶ್ರೀಕೃಷ್ಣ, ಶಲ್ಯ, ಅಶ್ವತ್ಥಾಮ, ಭೀಷ್ಮ, ಗಾಂಧಾರಿ, ಭಾನುಮತಿ
ದ್ರೋಣಚಾರ್ಯ, ದುಶ್ಶಾಸನ ಮೊದಲಾದವರಿದ್ದಾರೆ



ದ್ರೌಪತಿಯ ಮಾನ, ವಸ್ತ್ರಾಪಹರಣ, ದುರ್ಯೋಧನ, ದುಶ್ಶಾಸನ, ಅರ್ಜುನ, ಭೀಮ, ಧರ್ಮ, ಸಹದೇವ
ನಾರದ ಮೊದಲಾದವರಿದ್ದಾರೆ.



ಬಾಲಕ ಶಿಶುಪಾಲ, ಶಚಿದೇವಿ, ಇಂದ್ರ, ನಾರದ, ತುಂಬುರ ಮೊದಲಾದವರಿದ್ದಾರೆ



ಶಿಶುಪಾಲ



ಕೌರವರು ಮತ್ತು ಪಾಂಡವರ ನಡುವೆ ಶ್ರೀಕೃಷ್ಣ ಮೂರ್ತಿಯು ಶಿಶುಪಾಲನ ನೇತ್ರ
ಮತ್ತು ಭುಜಗಳ ವಿಸರ್ಜನೆಯ ಸಾಂದರ್ಭಿಕ ರೇಖಾಕಲ್ಪನೆ



ವಿರಾಟ ಮಹಾಭಗವಾನ್ ರಾಯರ ಆಸ್ಥಾನ. ಸಹದೇವ, ಪೋತರಾಜ, ಭೀಮ
ದ್ರೌಪತಿ, ಧರ್ಮರಾಜ, ಅರ್ಜುನ, ಕೀಚಕ, ನಕುಲ ಮೊದಲಾದವರ ರೇಖಾಚಿತ್ರಕಲ್ಪನೆ



ವಿರಾಟ ಭಗವಾನ್ ಭೀಮ, ಸುಧೀಷ್ಣ ದೇವಿ, ಕೀಚಕ, ದ್ರೌಪತಿದೇವಿ ರೇಖಾ ರೂಪ ಕಲ್ಪನೆಗಳು



ಕೀಚಕನ ಕಾಮಾಂಧಕಾರ, ದ್ರೌಪದಿ ರಹಸ್ಯ, ಕೀಚಕ, ಭೀಮ, ಬೆರಳು ಮುರಿಯುತ್ತಿರುವ ದ್ರೌಪದಿ, ಕೀಚಕ ದ್ರೌಪದಿ
ಇತ್ಯಾದಿ ರೇಖಾರೂಪ ಕಲ್ಪನೆಗಳು

೧೨. ಶ್ರೀ ಕೃಷ್ಣಃ ಶಿಶುಪಾಲವಧೆ

ಮಹಾವಿಷ್ಣುವಿನ ಕೃಷ್ಣಾವತಾರದ ಮಹಾಭಾರತ ಸಂದರ್ಭ. ಧರ್ಮರಾಯನು ರಾಜಸೂಯ ಯಾಗವನ್ನು ಪೂರ್ಣಗೊಳಿಸಿದನು. ಯಾಗದಲ್ಲಿ ಭಾಗವಹಿಸಿದವರನ್ನು ಧರ್ಮರಾಯನು ಸೂಕ್ತ ರೀತಿಯಲ್ಲಿ ಗೌರವಿಸಿದ ನಂತರ 'ಅಗ್ರಪೂಜೆ'ಯ ಕುರಿತು ಚಿಂತಿಸಿದನು. ಅಸಾಮಾನ್ಯ ಅನೇಕ ಮಹಾನುಭಾವರಿದ್ದ ಸಭೆಯಲ್ಲಿ ಯಾರನ್ನು ಗೌರವಿಸಬೇಕೆಂಬ ಸಮಸ್ಯೆಯಲ್ಲಿ ಸಿಲುಕಿದನು. ಆಗ ಸಹ ದೇವನು ಸಹಜವಾಗಿಯೇ "ಯೋಚಿಸುವ ಅಗತ್ಯವೇನಿದೆ? ಶ್ರೀ ಕೃಷ್ಣಪರಮಾತ್ಮನೇ ಅಗ್ರ ಪೂಜೆಗೆ ಅರ್ಹನು; ಆತನು ಚರಾಚರ ಜಗತ್ತಿಗೆಲ್ಲ ಆತ್ಮ ರೂಪಿ" ಎಂದನು.

ಸಹದೇವನ ಮಾತನ್ನು ಅಲ್ಲಿದ್ದವರೆಲ್ಲರೂ ಒಪ್ಪಿದರು. ಆಗ ಶ್ರೀಕೃಷ್ಣನನ್ನು ಅಗ್ರಪೂಜೆಯಿಂದ ಗೌರವಿಸಲಾಯಿತು; ಎಲ್ಲರೂ ವಂದಿಸಿದರು. ಶ್ರೀ ಕೃಷ್ಣನಿಗೆ ಸಂದ ಪಾದಪೂಜೆ. ವೈಭವೋಪೇತ ಸನ್ಮಾನ, ಕಾಣಿಕೆಗಳು, ವಂದನೆ ಇತ್ಯಾದಿಗಳು ಅಲ್ಲಿಯೇ ರಾಜರ ನಡುವೆ ಕುಳಿತಿದ್ದ ಶಿಶುಪಾಲನಿಗೆ ಸಹನೆ ತಪ್ಪುವಂತೆ ಮಾಡಿದವು. ಈ ಹಿಂದೆ ಶಿಶುಪಾಲನು ವಿವಾಹವಾಗಬೇಕಿದ್ದ ರುಕ್ಮಿಣಿಯನ್ನು ಶ್ರೀ ಕೃಷ್ಣನು ಕದ್ದೊಯ್ದು ದ್ವಾರಕಾ ನಗರದಲ್ಲಿ ವಿವಾಹವಾಗಿದ್ದನು. ಹಾಗಾಗಿ ಈ ಸಂದರ್ಭವು ಶಿಶುಪಾಲನನ್ನು ಆಕ್ರೋಶಗೊಳಿಸಿತು. "ಈ ಸಭೆಯಲ್ಲಿ ಬ್ರಹ್ಮಜ್ಞರಾದ ಮಹರ್ಷಿಗಳು, ಮಹಾ ಮಹಿಮರು ಎಷ್ಟೋ ಜನರು ಇದ್ದಾರೆ. ಅವರನ್ನೆಲ್ಲಾ ಬಿಟ್ಟು, ಗೊಲ್ಲನಾದ, ಕೃಷ್ಣನಿಗೆ ಅಗ್ರ ಪೂಜೆಯೆ? ಇವನಿಗೆ ವರ್ಣಾಶ್ರಮ ಧರ್ಮಗಳುಂಟೇ? ನೀತಿ ನಿಯಮಗಳುಂಟೇ? ಇವನೊಬ್ಬ ಧರ್ಮಬಾಹಿರ..." ಇತ್ಯಾದಿ, ಇತ್ಯಾದಿಯಾಗಿ ತನ್ನ ಪೀಠದಿಂದ ಸಿಡಿದೆದ್ದು ಗುಡುಗಿದನು. ಸಭೆಯಲ್ಲಿದ್ದ ಸಜ್ಜನರು ಕೃಷ್ಣನಿಂದೆಯನ್ನು ಕೇಳಲಾರದೆ ಅಲ್ಲಿಂದ ಹೊರ ನಡೆದರೆ, ಪಾಂಡವರ ಪಕ್ಷಪಾತಿಗಳಾದ ಹಲವು ರಾಜರು ಹಿರಿದ ಖಡ್ಗಗಳೊಂದಿಗೆ ಶಿಶುಪಾಲನನ್ನು ಕೊಲ್ಲಲು ಅವನತ್ತ ಧಾವಿಸಿದರು. ಶಿಶುಪಾಲನೂ ಅವರನ್ನು ಎದುರಿಸುಲು ಖಡ್ಗವನ್ನು ಹೊರತೆಗೆದನು. ಆಗ ಶ್ರೀಕೃಷ್ಣನು ಯುದ್ಧಕ್ಕೆ ಸಿದ್ಧರಾಗಿದ್ದ ರಾಜರನ್ನು ತಡೆದು, ತಾನೇ ತನ್ನ ಚಕ್ರಾಯುಧದಿಂದ ಶಿಶುಪಾಲನ ಕುತ್ತಿಗೆಯನ್ನು ಕಡಿದು ಹಾಕಿದನು. ಆ ಕ್ಷಣವೇ ಅವನ ದೇಹದಿಂದ ದಿವ್ಯವಾದ ತೇಜಸ್ಸು ಹೊರಟು ಬಂದು ಶ್ರೀ ಕೃಷ್ಣನಲ್ಲಿ ಪ್ರವೇಶಿಸಿತು! ನಂತರ ರಾಜಸೂಯಯಾಗವು ಸುಸೂತ್ರವಾಗಿ ಮುಕ್ತಾಯಗೊಂಡಿತು; ಎಲ್ಲರೂ ಸಂತೋಷಿಸಿದನು. ಆ ಹಿಂದೆ ಶಿಶುಪಾಲನ ಜೀವದ ಗೆಳೆಯ ಸಾಲ್ವನು ಯಾದವ ಕುಲವನ್ನು ನಿರ್ಮೂಲ ಮಾಡುತ್ತೇನೆ ಎಂದು ರುಕ್ಮಿಣಿಯನ್ನು ಕೃಷ್ಣನು ಕದ್ದು ಒಯ್ದಾಗ ಶಿಶುಪಾಲನಿಗೆ ಮಾತುಕೊಟ್ಟಿದ್ದನು. ಶಿವನನ್ನು ಕುರಿತು ತಪಸ್ಸು ಮಾಡಿ ಅಭೇದ್ಯ ವಿಮಾನವನ್ನು ಪಡೆದಿದ್ದನು. ಶ್ರೀ ಕೃಷ್ಣನು ಶಿಶುಪಾಲನನ್ನು ಕೊಂದ ಸುದ್ದಿ ಕೇಳುತ್ತಲೇ ತನ್ನ ಸೈನ್ಯ ಮತ್ತು ವಿಮಾನದೊಡನೆ ದ್ವಾರಕೆಗೆ ಬಂದು ಆ ನಗರವಾಸಿಗಳಿಗೆ ಹಲವು ರೀತಿಗಳಲ್ಲಿ ಆತಂಕ ಉಂಟು ಮಾಡಿದನು. ಶ್ರೀ ಕೃಷ್ಣನ ಮಗನಾದ ಪ್ರದ್ಯುಮ್ನ ಮತ್ತು ಸಾಲ್ವರ ನಡುವೆ ಭೀಕರ ಯುದ್ಧವೂ ನಡೆಯಿತು. ಅಂತಿಮವಾಗಿ ಶ್ರೀಕೃಷ್ಣನ ಆಗಮನದಿಂದ ಅವನ ಚಕ್ರಕ್ಕೆ ಸಾಲ್ವನು ಬಲಿಯಾದನು. ಈ ಸುದ್ದಿ ತಿಳಿದ ಸಾಲ್ವನ ಗೆಳೆಯನೂ ಆಗಿದ್ದ ದಂತವಕ್ತ್ರನು ಕೋಪಗೊಂಡು ಗದೆಯೊಡನೆ ಶ್ರೀ ಕೃಷ್ಣನ ಮೇಲೆ ಎರಗಿದನು; ಕೌಮೋದಕಿಯೆಂಬ ಶ್ರೀ ಕೃಷ್ಣನ ಗದೆಗೆ ಬಲಿಯಾದನು. ಅವನ ದೇಹದಿಂದ ದಿವ್ಯವಾದ ತೇಜಸ್ಸು ಹೊರ ಹೊರಟು ಶ್ರೀಕೃಷ್ಣನ ದೇಹವನ್ನು ಪ್ರವೇಶಿಸಿತು!

ಶಿಸುಪಾಲ ಮತ್ತು ದಂತವಕ್ತ್ರರ ದೇಹಗಳಿಂದ ಹೊರ ಹೊರಟ ದಿವ್ಯ ಪ್ರಭೆಯು ಶ್ರೀ ಕೃಷ್ಣನ ದೇಹ ಪ್ರವೇಶಿಸುವ ಎರಡು ರೇಖಾ ದೃಶ್ಯನೋಟಗಳನ್ನು ದೇವನ ಹಳ್ಳಿ ಚೆನ್ನಕೇಶವ ಆಚಾರ್ಯರು ಪೆನ್ಸಿಲ್ ಮಾಧ್ಯಮದಿಂದ ರೇಖಿಸಿದ್ದಾರೆ. ಇವು ಕಥಾನಕ ಚಿತ್ರ ಪ್ರಕಾರಕ್ಕೆ ಉತ್ತಮ ಉದಾಹರಣೆಯಂತಿವೆ. ಹಲವಾರು ಚಿತ್ರಗಳ ಗುಂಪಿನಲ್ಲಿ ಉತ್ತಮವಾಗಿ ಉಳಿದುಕೊಂಡಿರುವ ಈ ಸಂದರ್ಭಗಳ ನಾಲ್ಕು ಚಿತ್ರಗಳನ್ನು ಮಾತ್ರ ಪ್ರಸ್ತುತ ಬಳಸಿಕೊಳ್ಳಲಾಗಿದೆ.




ಮುನಿಯಶಾಪದಿಂದ ದಂತವಕ್ರನ ಜನ್ಮ, ಎಡಗಡೆಯಿಂದ : ಶ್ವೈತದೇವಿ, ವೃದ್ಧಶರ್ಮ, ದಂತವಕ್ರ, ಮೈತಂಡ, ಕುಬೇರ ಮತ್ತು ಬಕಾಸುರರ ರೇಖಾ ರೂಪ ಕಲ್ಪನೆಗಳು



ಶಿಶುಪಾಲ ಮತ್ತು ವಕ್ರದಂತರ ಶಿವಪೂಜಾ ಸಂದರ್ಭದ ರೇಖಾಚಿತ್ರ



ಶಿಶುಪಾಲವಧೆ : ಪಾಂಡವರು, ಕೌರವರ ನಡುವೆ ಶಿಶುಪಾಲಸ್ವಾಮಿಯ ತೇಜಸ್ಸನ್ನು ಕೃಷ್ಣಮೂರ್ತಿಯು ನುಂಗುತ್ತಿರುವಿಕೆ



ದಂತವಕ್ರನ ವಧೆ : ದಂತವಕ್ರನ ಎಡಗಡೆ ಶ್ರೀಕೃಷ್ಣ, ದೇವಕಿ, ಧರ್ಮರಾಜ, ಬಲಗಡೆ ನಂದಗೋಪ ಯಶೋದ, ಸುಯೋದನ, ಭಾನುಮತಿ ಮೊದಲಾದವರಿದ್ದಾರೆ.


೧೩. ತಾಲಮಾನ ರೇಖಾ ಕೃತಿ ಲಕ್ಷಣಗಳು

ಅಂಗುಲಗಳ ಸಂಖ್ಯೆ ಸೂಚಿಸಲು ಶಿಲ್ಪ ಶಾಸ್ತ್ರಗಳಲ್ಲಿ ಹಲವಾರು ಪದಗಳನ್ನು ಬಳಸಲಾಗಿದೆ. ಉದಾಹರಣೆಗೆ ಎರಡು ಅಂಗುಲಗಳಿಗೆ ಕಲೆ, 12 ಅಂಗುಲಗಳಿಗೆ ವಿತಸ್ತಿ, ಇತ್ಯಾದಿ. ಚಿತ್ರ ಸೂತ್ರದಲ್ಲಿ 12 ಬೆರಳ ವಿಸ್ತಾರಕ್ಕೆ 'ತಾಲ' ಎನ್ನುತ್ತಾರೆ ಎಂದಿದೆ. (ಚಿತ್ರಸೂತ್ರ: 35.12) ನಾಲ್ಕು ಅಂಗುಲಗಳು 'ಭಾಗ' ಪ್ರಮಾಣವಾಗುತ್ತದೆ. ಮೂರು 'ಭಾಗ'ಗಳು 'ವಿತಸ್ತಿ' ಎಂಬ ಪ್ರಮಾಣ ಆಗುವುದು. ಒಂದು 'ವಿತಸ್ತಿ'ಯು 'ತಾಲ' ಎಂಬ ಪ್ರಮಾಣವಾಗುತ್ತದೆ.... ಕೂದಲ ತುದಿಯಿಂದ ಗದ್ದದವರೆಗೆ ಇರುವ ಮುಖವು ಒಂದು 'ತಾಲ' ಅಳತೆ ಎಂದೂ ಹೇಳಲಾಗಿದೆ, (ಮಾನಸೋಲ್ಲಾಸ: 3.1.196–200).

ಮೂರ್ತಿಗಳ 'ತಾಲ' ಮಾನಕ್ರಮದಲ್ಲಿ ದಶತಾಲದಿಂದ ಏಕತಾಲದವರೆಗೂ ಹತ್ತು ತಾಲಮಾನಕ್ರಮಗಳು ಇವೆ. ದಶತಾಲದಿಂದ ತ್ರಿತಾಲದ ತನಕ ಪ್ರತಿಯೊಂದು ತಾಲಮಾನ ಕ್ರಮದಲ್ಲಿಯೂ ನಾಲ್ಕು ಅಂಗುಲ ತಾಲಮಾನಕ್ಕೆ ಸೇರಿಸುವುದರಿಂದ ಅಥವಾ ಕಳೆಯುವುದರಿಂದ ಅಥವಾ ತಾಲಮಾನದ ಅಳತೆಯನ್ನೇ ಇಟ್ಟುಕೊಳ್ಳುವುದರಿಂದ ಮೂರು ವಿಧವಾದ ತಾಲಮಾನಗಳು ಬರುತ್ತವೆ. ನಾಲ್ಕು ಅಂಗುಲ ಸೇರಿದಾಗ ಅದನ್ನು 'ಉತ್ತಮ ತಾಲ' ಎಂದು, ನಾಲ್ಕು ಅಂಗಲು ಕಡಿಮೆ ಮಾಡಿದರೆ 'ಅಧಮ ತಾಲ' ಎಂದು ಹೇಳಲಾಗಿದೆ. ಹಾಗೆಯೇ ತಾಲಮಾನವು ಬದಲಾಗದೆ ಹಾಗೆಯೇ ಇದ್ದರೆ 'ಮಧ್ಯಮ ತಾಲ' ಎಂದು ಮೂರು ರೀತಿಗಳಲ್ಲಿ ಪರಿಗಣಿಸಲಾಗುತ್ತಿದೆ. ಏಕ ಮತ್ತು ದ್ವಿತಾಲಗಳಲ್ಲಿ ಇಂತಹ ವಿಭಜನೆ ಇಲ್ಲ.

ತ್ರಿಮೂರ್ತಿಗಳಾದ ಬ್ರಹ್ಮ, ಮಹಾವಿಷ್ಣು, ಮಹೇಶ್ವರರಿಗೆ ಉತ್ತಮ ದಶತಾಲವನ್ನು ಬಳಸಬೇಕು. ದೇವಿಯರಾದ ಲಕ್ಷ್ಮೀ, ಸರಸ್ವತಿ, ಪಾರ್ವತಿ ಇವರುಗಳಿಗೆ ಮಧ್ಯಮ ದಶತಾಲ ಸ್ತ್ರೀಮಾನಗಳನ್ನು ಬಳಸಬೇಕು. ಚಂದ್ರ, ಇಂದ್ರ, ಅಗ್ನಿ, ಯಮ, ವರುಣ, ವಾಯು, ಈಶಾನ, ಸಪ್ತಋಷಿಗಳು, ಅಷ್ಟವಸುಗಳು, ಅಶ್ವಿನಿಗಳು, ಇವರನ್ನು ಅಧಮ ದಶತಾಲದಲ್ಲಿ ರೂಪಿಸಬೇಕು.

ಗರುಡ, ಸಿದ್ಧರು, ಶನಿ, ರಾಹು, ಕೇತು, ಮಂಗಳ ಮೊದಲಾದ ಮೂರ್ತಿ ರೂಪಗಳನ್ನು ನವತಾಲದಲ್ಲಿ ರೂಪಿಸಬೇಕು. ಮನುಷ್ಯರನ್ನು ಅಷ್ಟತಾಲದಲ್ಲಿಯೂ, ಪಿಶಾಚಿಗಳನ್ನು ಸಪ್ತ ತಾಲದಲ್ಲಿಯೂ, ಕುಬ್ಜರನ್ನು, ಗೂನುಬೆನ್ನಿನವರನ್ನು ಷಟ್‌ತಾಲದಲ್ಲಿಯೂ ರೂಪಿಸಬೇಕು. ವಾಮನ, ಗಣಪತಿ, ಬಾಲಸುಬ್ರಹ್ಮಣ್ಯ, ಬಾಲಕೃಷ್ಣ ಮೊದಲಾದ ಮೂರ್ತಿಗಳನ್ನು ಪಂಚತಾಲದಲ್ಲಿ ರೂಪಿಸಬೇಕು. ವಾನರರನ್ನು ಚತುಸ್ತಾಲದಲ್ಲಿಯೂ, ಕಿನ್ನರರನ್ನು ತ್ರಿತಾಲದಲ್ಲಿಯೂ ರೂಪಿಸಬೇಕು. ಇವುಗಳಲ್ಲಿ ಉತ್ತಮ, ಮಧ್ಯಮ ಅಧಮ ತಾಲ ಪ್ರಮಾಣಗಳನ್ನು ಸೂಕ್ತರೀತಿಯಲ್ಲಿ ರೂಪಿಸಬೇಕು. ಕೀರ್ತಿ ಮುಖವನ್ನು ಏಕತಾಲದಲ್ಲಿ ರೂಪಿಸಬೇಕು. ಬಹುತೇಕ ಈ ಎಲ್ಲ ದೃಷ್ಟಿಗಳಿಗೂ ಪೂರಕವಾಗಿರುವ, ಉದಾಹರಣೆಗಳಂತಿರುವ ರೇಖಾ ರೂಪಗಳು ದೇವನಹಳ್ಳಿ ಚೆನ್ನಕೇಶವ ಆಚಾರ್ಯರಿಂದ ರೇಖಿಸಲ್ಪಟ್ಟಿವೆ. ಸಾಕಷ್ಟು ಉತ್ತಮವಾಗಿಯೇ ಉಳಿದುಕೊಂಡಿದ್ದ ಕೆಲವು ರೇಖಾಚಿತ್ರಗಳನ್ನು ಪ್ರಸ್ತುತ ನೀವು ಮುಂದಿನ ಪುಟಗಳಲ್ಲಿ ನೋಡಬಹುದು.




ಬ್ರಹ್ಮ ವಿಷ್ಣು ರುದ್ರ

ಉತ್ತಮ ದಶತಾಲ ಬಿಂಬಗಳು



ಮಧ್ಯಮದಶತಾಲ ರೂಪಗಳು



ಅಧಮದಶತಾಲ

ಕ್ಷೇತ್ರಪಾಲ

ದೇವೇಂದ್ರ

ಚಂಡಿಕೇಶ್ವರ




ಉತ್ತಮ ನವತಾಲ ಬಿಂಬಗಳು ಅಷ್ಟವಸುಗಳು ಅರಸರು




ಮಧ್ಯಮನವತಾಲ ಬಿಂಬಗಳು, ಯಕ್ಷರು, ಅಪ್ಸರೆಯರು, ವಿದ್ಯಾಧರರು, ಮರುದ್ಗಣಗಳು



ಅಧಮನವತಾಲ ಬಿಂಬಗಳು, ಅಸುರರು, ಅಸುರ ಸ್ತ್ರೀಯರು, ಗಂಧರ್ವರು, ಪಿತೃದೇವತೆಗಳು, ಸಿದ್ಧರು



ಸಪ್ತತಾಲಗಳು, ದೀಪಸ್ತಂಭ, ಪೈಶಾಚಿಗಳು, ಬೃಗು, ಕಲ್ಪವೃಕ್ಷ, ಯೂಪಸ್ತಂಭ




ಷಟ್ತಾಲ ಬಿಂಬಗಳು, ವಾಮನ ಮೂರ್ತಿ, ಕುಬ್ಜಸ್ತ್ರೀ, ಕಬ್ಜನಾ, ರಕ್ಕಸರು, ರಕ್ಕಸಿ




ಪಂಚತಾಲ ಮೂರ್ತಿಗಳು


ಮಯೂರ, ಮಧ್ಯಮ ಗಣಪತಿ, ಉತ್ತಮ ಬಾಲಕೃಷ್ಣ ಮೂರ್ತಿ, ಅಧಮಭೂತಾದಿಗಳು, ಗಂಡಬೇರುಂಡ, ವ್ಯಾಘ್ರ, ವೃಷಭ



ದ್ವಿತಾಲಮಾನ: ದ್ವಜ, ಪಿಶಾಚಿ, ಪಂಚಪಾತ್ರೆ, ಮೀನಿನ ರೂಪ, ಛಾಮರ, ಘಂಟೆ, ಧೂಪಾರತಿ ಇತ್ಯಾದಿಗಳು



ಏಕತಾಲ ವಸ್ತುಗಳು: ಚಕ್ರ, ಕೂರ್ಮ, ಶಂಖ, ಷೋಡಶಂ(16)
ಚದರ, ಪದ್ಮ, ಚದರ (ಚೌಕ), ದ್ವಾದಶಂ (10), ಮಂಡೂಕ ಮತ್ತು ದರ್ಪಣ



ಚತುರ್‌ವಿದ ಪುರುಷ ಲಕ್ಷಣ
ಉತ್ತಮ ಪುರುಷರ ರೇಖಾ ರೂಪಗಳು

೧೪. ನರಸಿಂಹಮೂರ್ತಿ

ನರಸಿಂಹ ಮೂರ್ತಿಯು ಕೋಪದಿಂದ ಕೂಡಿದ ರೌದ್ರ ಮುಖವುಳ್ಳದ್ದಾಗಿರುತ್ತದೆ. ಈ ಮೂರ್ತಿಯ ನೋಟವು ಅತಿಕ್ರೂರ, ತೀಕ್ಷ್ಣವೂ ಆಗಿರುತ್ತದೆ. ಮೈಬಣ್ಣವು ಶಂಖ, ಹಸುವಿನ ಹಾಲು ಅಥವಾ ಮಲ್ಲಿಗೆಯ ಹೂವಿನಂತೆ ಬಿಳುಪಾಗಿರಬೇಕು. ಸಿಂಹಮುಖದ ಕೇಸರಗಳು ನೀಳವಾಗಿದ್ದು ರಕ್ತವರ್ಣ ಮಿಶ್ರಿತ ಕೇಸರಿ ಬಣ್ಣದಲ್ಲಿರುತ್ತವೆ. ಕೆಂಪು ವಸ್ತ್ರ ಹಾಗೂ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು ಧರಿಸಿರುವ ಮೂರ್ತಿ ಇದು ಎಂದು ಶ್ರೀ ಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರದಲ್ಲಿ ಧ್ಯಾನಿಸಲಾಗಿದೆ.

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ ಶ್ರೀತತ್ವ ನಿಧಿಯ ವಿಷ್ಣು ನಿಧಿಯಲ್ಲಿ ಸಿಂಹಮುಖ ಮೂರ್ತಿಯ ಧ್ಯಾನವನ್ನು ಮಂತ್ರಸಾರದಿಂದ ಆಯ್ದು ಕೊಡಲಾಗಿದೆ.

ಕಾಲಾಗ್ನಿ ಕೋಟಿ ಸದೃಶಂ ಮುಣ್ಡ ಮಾಲಾವಿಭೂಷಿತಮ್ ।
ದಶಬಾಹುಂ ಶ್ವೇತವರ್ಣಂ ನೀಲಕಣ್ಠಂ ತ್ರಿಲೋಚನಮ್ ।
ಶಙ್ಖಂ ಚಕ್ರಂ ಗದಾಂ ಶೂಲಂ ಖಡ್ಗಕಾರ್ಮುಕ ಖೇಟಕಮ್ ।
ಪಾಶಾಙ್ಕುಶಕಪಾಲಾದಿ ಸಕಲಾ ಯುಧಧಾರಿಣಮ್ ।
ಏವಂ ಧ್ಯಾಯೇನ್ಮಹಾವಿಷ್ಣುಂ ಸರ್ವಶತ್ರುವಿನಾಶನಮ್ ॥

ಉಗ್ರನರಸಿಂಹಮೂರ್ತಿ

ಪಾಂಚರಾತ್ರ ಆಗಮದಲ್ಲಿ

"ಜ್ವಲದಗ್ನಿ ಸಮಾಕಾರಂ ಸಿಂಹಮಕ್ತ್ರಂ ನರಾಂಗಕಮ್
ದಂಷ್ಟ್ರಾಕರಾಳವದನಂ ಲೋಲಜಿಹ್ವಾ ಸುಭೀಷಣಮ್ ॥
ವೃತ್ತಾಸ್ಯಂ ಜಟಿಲಂ ಕ್ರುದ್ಧಮಾಲೀಢಂಪೀನವಕ್ಷಸಮ್
ಅಭೇದ್ಯತೀಕ್ಷ್ಣ ನಖರಮಾತ್ಮೋರುಕೃತದಾನವಮ್ ॥
ತದ್ವಕ್ಷೋ ದಾರಯಂತಂ ಚ ಕರಾಭ್ಯಾಂ ನಖರೈರ್ಭೃಶಮ್
ಗದಾಚಕ್ರಧರಂ ದ್ವಾಭ್ಯಾಂನ್ನೃಸಿಂಹಂ ಪ್ರಣವತ್ಪ್ರಭುಮ್ ॥

ಎಂದು ಸಿಂಹಮುಖದ ಮನುಷ್ಯದೇಹವಿರುವ ಉಗ್ರನರಸಿಂಹನ ರೂಪವು ಉರಿವ ಅಗ್ನಿಯಂತೆ ಭಯಂಕರವಾಗಿದೆ. ನಾಲಿಗೆಯು ಹೊರ ಚಾಚಿದೆ. ನಾಲ್ಕು ಕೈಗಳಿರುವ, ವಿಶಾಲ ಎದೆಯ ನರಸಿಂಹನು ತನ್ನ ನಿಜಹಸ್ತಗಳಿಂದಲೇ ದಾನವನಾದ ಹಿರಣ್ಯಕಶಿಪುವನ್ನು ಸೀಳುತ್ತಿದ್ದಾನೆ. ಚೂಪಾದ ಉಗುರುಗಳ ಕೈಗಳು ಅವು. ಪರಹಸ್ತದಲ್ಲಿ ಚಕ್ರ ಮತ್ತು ಗದೆಗಳಿವೆ. ಒಂದು ಕಾಲನ್ನು ಮೇಲಿಟ್ಟು, ಇನ್ನೊಂದನ್ನು ಕೆಳಗೆ ಇಳಿಬಿಟ್ಟು ಕುಳಿತಿದ್ದಾನೆ. ಮೈಬಣ್ಣವು ಶ್ವೇತವರ್ಣದ್ದಾಗಿದೆ.

ಲಕ್ಷ್ಮೀನರಸಿಂಹಮೂರ್ತಿ

ಅಥರ್ವಣಸಾರದಿಂದ ಮುಮ್ಮಡಿಕೃಷ್ಣರಾಜ ಒಡೆಯರು ಗ್ರಹಿಸಿರುವ ಲಕ್ಷ್ಮೀನರಸಿಂಹ ಮೂರ್ತಿಯ ಧ್ಯಾನವು

"ದಿವ್ಯಾಮ್ಬರಧರಂ ದೇವಂ ವಿಚಿತ್ರ ಮಕುಟೋಜ್ಜ್ವಲಮ್ ।
ಅನರ್ಘ್ಯರತ್ನಖಚಿತ ಕುಣ್ಡಲದ್ವಯ ಶೋಭಿತಮ್ ॥
ಶಂಖ ಚಕ್ರಗದಾಮ್ಭೋಜದರಂ ಶ್ರೀವತ್ಸವಕ್ಷಸಮ್ ।
ವಾಮಾಙ್ಕಸ್ಥಿತಯಾ ಲಕ್ಷ್ಮ್ಯಾ ಶ್ಲಿಷ್ಟವಾಮಭುಜಂ ವಿಭುಮ್ ।
ಪಶ್ಯನ್ತಂ ತನ್ಮುಖಾಮ್ಭೋಜಂ ಮಾಲೋಲಂ ನೃಹರಿಂ ಭಜೇತ್ ॥

ಎಂದಿದೆ.

ಲಕ್ಷ್ಮೀನರಸಿಂಹನು ಶ್ರೇಷ್ಠವಾದ ವಸ್ತ್ರಗಳನ್ನು ಉಟ್ಟಿದ್ದಾನೆ. ಸುಂದರವಾದ ಕಿರೀಟವನ್ನು ತಲೆಯಲ್ಲಿ ಧರಿಸಿದ್ದಾನೆ. ಅಮೂಲ್ಯವಾದ ಶ್ರೇಷ್ಠರತ್ನಗಳಿಂದ ಅಲಂಕೃತವಾದ ಚಿನ್ನದ ಕುಂಡಲಗಳನ್ನು ತನ್ನೆರಡು ಕಿವಿಗಳಿಗೆ ಹಾಕಿಕೊಂಡಿದ್ದಾನೆ. ಶಂಖ, ಚಕ್ರ, ಗದೆ ಮತ್ತು ಕಮಲಗಳನ್ನು ಕೈಗಳಲ್ಲಿ ಹಿಡಿದಿದ್ದಾನೆ. ಇವನ ಎದೆಯಲ್ಲಿ ಶ್ರೀವತ್ಸಲಾಂಛನವಿದೆ. ಇವನ ಎಡತೊಡೆಯಲ್ಲಿ ಲಕ್ಷ್ಮೀದೇವಿಯು ಕುಳಿತು, ತನ್ನ ಬಲತೋಳಿನಿಂದ ಇವನ ಎಡಗಡೆಯ ಭುಜವನ್ನು ತಬ್ಬಿಕೊಂಡಿದ್ದಾಳೆ. ನರಸಿಂಹನ ಮುಖವು ವೀಕ್ಷಕರಿಗೆ ಕಮಲದಂತೆ ಸುಂದರವಾಗಿ ಕಾಣುವುದು. ಲಕ್ಷ್ಮೀದೇವಿಗೆ ಇವನು ಅತ್ಯಂತ ಪ್ರಿಯನಾದವನು ಎಂದೂ ಹೇಳಲಾಗಿದೆ.

"ಶರಚಂದ್ರನಿಭಂ ದೇವಂ ಶಂಖ ಚಕ್ರವರಾಭಯಾನ್
ಬಿಭ್ರಾಣಂ ಪುಂಡರೀಕಾಕ್ಷಂ ಲಕ್ಷ್ಮ್ಯಾಲಂಕೃತ ವಿಗ್ರಹಮ್ ।
ಸಿಂಹವಕ್ತ್ರಂ ಮಹಾಕಾಯಂ ನೃಸಿಂಹಂ ಹೃದಿಭಾವಯೇ ॥

(ನರಸಿಂಹಕಲ್ಪ)

ಶರತ್ಕಾಲದ ಚಂದ್ರನಂತಹ ಸುಂದರಮುಖದವನು ಇವನು; ಸಿಂಹಮುಖಿ, ಪುರುಷರೂಪದವನು. ಲಕ್ಷ್ಮಿಯು ಎಡತೊಡೆಯ ಮೇಲಿದ್ದಾಳೆ. ಶುಭ್ರವಾದ ಮೈಬಣ್ಣವನ್ನು ಹೊಂದಿದ ನರಸಿಂಹನಿಗೆ ನಾಲ್ಕು ಕೈಗಳು. ಅಭಯ ಮುದ್ರೆ, ಚಕ್ರ, ಶಂಖ ಮತ್ತು ವರದ ಮುದ್ರೆ ಇದೆ.

ಲಕ್ಷ್ಮಿಯ ಕೈಯಲ್ಲಿ ಕಮಲವಿದೆ.

ಯೋಗಾ ನರಸಿಂಹಮೂರ್ತಿ

ವಂದೇಹಂ ನೃಹರಿಂ ಯೋಗಪಟ್ಟವಿರಾಜಿತಮ್ ।
ಜ್ಞಾನ್ವೋಪರಿನ್ಯಸ್ತ ಸಾಚೀಕೃತ ಭುಜದ್ವಯಮ್ ॥
ಶಂಖಂ ಚೈವ ಚಕ್ರಂ ಬಿಭ್ರಾಣಮ ಪರೈಃ ।
ಸೌಮ್ಯಂ ಯದ್ಯಪಿ ಕೋಟಿ ಸೂರ್ಯಸಮಪ್ರಭಮ್ ॥

ಯೋಗಪಟ್ಟದಲ್ಲಿ ವಿರಾಜಿತ ರೂಪನಾಗಿರುವ ಯೋಗಾನರಸಿಂಹನು ಸೌಮ್ಯವಾಗಿದ್ದಾನೆ. ನಾಲ್ಕು ಕೈಗಳಿವೆ. ಮುಂದಿನ ಕೈಗಳು ಮೊಣಕಾಲಿನ ಮೇಲೆ ಹರಡಿಕೊಂಡಿವೆ. ಪರಹಸ್ತಗಳಲ್ಲಿ (ಮೇಲಿನ ಎಡ ಮತ್ತು ಬಲ ಹಸ್ತಗಳಲ್ಲಿ) ಶಂಖ ಮತ್ತು ಚಕ್ರಗಳಿವೆ.

ಜ್ವಾಲಾ ನರಸಿಂಹಮೂರ್ತಿ

ಅಥರ್ವಣಸಾರ ಮತ್ತು ನವನರಸಿಂಹ ಕಲ್ಪದಲ್ಲಿ ಜ್ವಾಲಾನರಸಿಂಹನ ರೂಪವನ್ನು ಧ್ಯಾನಿಸಿರುವ ರೀತಿಯು ಸಂಕ್ಷಿಪ್ತತೆಯಿಂದ ಕೂಡಿದೆ.

ಮಧ್ಯೇ ಚಕ್ರಂ ಮಹಾಸ್ಯ ಜ್ವಲದನಲಶಿಖಾಗ್ರಸ್ತ ವೇತಾಲವರ್ಗಃ
ಸ್ಫೂರ್ಜದ್ಘೋರಾರಿಜಾತ ಪ್ರಣಿಹನನ ಪದವ್ಯ ಗ್ರಹಸ್ತಸ್ಸಮನ್ತಾತ್ ।
ಧ್ಯೇಯೋಸ್ಮಾಭಿಃ ಸಮುದ್ಯಿದ್ದಿನಕರಸದೃಶಸ್ತ್ರೀಕ್ಷಣಸ್ತೀಕ್ಷ್ಣದಂಷ್ಟ್ರಃ
ಸಂರಮ್ಭೋದ್ಭೂತರೋಮಾ ಧ್ವನಿರಚಿತಮಹಾಮ್ಭೋಧಿ ಘೋಷೋನೃಸಿಂಹಃ ॥

ದೊಡ್ಡಚಕ್ರದ ಮಧ್ಯದಲ್ಲಿ ನರಸಿಂಹನು ಇದ್ದಾನೆ. ತನ್ನ ಬಾಯನ್ನು ದೊಡ್ಡದಾಗಿ ತೆರೆದಿದ್ದಾನೆ. ಬಾಯಿಯಿಂದ ಹೊರಬರುತ್ತಿರುವ ಬೆಂಕಿಯ ಜ್ವಾಲೆಗಳು ಬೇತಾಳಗಳನ್ನು ಸೆಳೆದು ನುಂಗುತ್ತಿವೆ. ಸುತ್ತಲೂ ಗರ್ಜಿಸುತ್ತ ನುಗ್ಗಿ ಬರುತ್ತಿರುವ ಭಯಂಕರ ಶತ್ರುಗಳನ್ನು ಸಂಹರಿಸುವ ಕಾರ್ಯದಲ್ಲಿ ಇವನ ಕಾಲು ಮತ್ತು ಕೈಗಳು ನಿರತವಾಗಿವೆ. ಉದಯಸೂರ್ಯ ಸಮಾನಕಾಂತಿ ಇವನದು. ಮೂರು ಕಣ್ಣುಗಳುಳ್ಳ ಇವನು ಭಯಂಕರ ಕೋರೆದಾಡೆಗಳನ್ನು ಹೊಂದಿದ್ದಾನೆ. ದೇಹದ ರೋಮಗಳು ಆಕ್ರೋಶದ ಕಾರಣಕ್ಕಾಗಿ ನಿಮಿರಿ ನಿಂತಿವೆ. ಇವನ ಅಬ್ಬರವು ಸಮುದ್ರದ ಭೋರ್ಗರೆತದಂತಿದೆ ಎಂದು ಧ್ಯಾನಿಸಲಾಗಿದೆ.

ಮೂವತ್ತೆರಡು ಭುಜಗಳ ನರಸಿಂಹಮೂರ್ತಿ

ಮಂತ್ರದೇವತಾ ಪ್ರಕಾಶಿಕೆಯಲ್ಲಿ ಮೂವತ್ತೆರಡು ಭುಜಗಳ ಅಪೂರ್ವ, ವಿಶಿಷ್ಟ ನರಸಿಂಹ ಮೂರ್ತಿಯ ರೂಪವನ್ನು ವಿವರಿಸಲಾಗಿದೆ.

ಧ್ಯೇಯೋಮಹತ್ತಮೇ ಕಾರ್ಯೇದೇವೋದ್ವಾತ್ರಿಂಶಹಸ್ತವಾನ್ ।
ನೃಹರಿಃ ಸರ್ವಭೂಷಾಢ್ಯಃ ಸರ್ವಸಿದ್ಧಿಕರಃ ಪ್ರಭುಃ ॥
ದಕ್ಷಿಣೇ ಚಕ್ರಪದ್ಮೇ ಚ ಪರಶುಂಬಾಣಮೇವ ಚ ।
ಹಲಂ ಚ ಮುಸಲಂ ಚೈವಮಭಯಂ ಚಾಙ್ಕುಶಂ ತಥಾ ॥
ಪಟ್ಟಸಂ ಭಿಣ್ಣಿವಾಲಂಚ ಖಡ್ಗಮುದ್ಗರ ತೋಮರಾನ್ ।
ವಾಮಭಾಗಕರೇ ಶಙ್ಖಂ ಖೇಟಂಪಾಶಂ ತ್ರಿಶೂಲಕಮ್
ವರಂ ವಜ್ರಂ ಚ ಶಕ್ತಿಂ ಚ ಕುಣ್ಡಿಕಾಂ ಚ ತತಃ ಪರಮ್ ॥
ಕಾರ್ಮುಕಂ ತರ್ಜನೀಂ ಚೈವ ಗದಾಂಡಮರುಸರ್ಪಕೌ ।
ದ್ವಾಭ್ಯಾಂ ಕರಾಭ್ಯಾಂ ಚ ರಿಪೋರ್ಜಾನುಮಸ್ತಕ ಪೀಡನಮ್ ॥
ತತೋರ್ಧ್ವೀಕೃತ ಹಸ್ತಾಭ್ಯಾಮನ್ತ್ರಮಾಲಾಧರಂ ಹರಿಮ್ ।
ಅಧಃ ಸ್ಥಿತಾಭ್ಯಾಬಾಹುಭ್ಯಾಂ ಹಿರಣ್ಯಕವಿದಾರಣಮ್ ॥
ಪ್ರಿಯಂಕರಂ ಚ ಭಕ್ತಾನಾಂ ದೈತ್ಯಾನಾಂ ಚ ಭಯಂಕರಮ್ ।
ನೃಸಿಂಹಂ ಶ್ವೇತರೂಪಾಢ್ಯಂ
ಮಹಾಮೃತ್ಯುಭಯಾಪಹಮ್ ॥



ಉಗ್ರನರಸಿಂಹ : ಹಿರಣ್ಯಕಶಿಪುವಿನ ಸಂಹಾರ



ಯೋಗನರಸಿಂಹ ಉಗ್ರನರಸಿಂಹ


ಶ್ರೀ
ಶ್ರೀ ಲಕ್ಷ್ಮೀನೃಸಿಂಹಮೂರ್ತಿ



ಜ್ವಾಲಾ ನರಸಿಂಹ



ಅಭಯನರಸಿಂಹ ಮೂರ್ತಿ



32 ಭುಜಗಳ ನರಸಿಂಹಮೂರ್ತಿ, ಹರಿಣ್ಯಕಶಿಪು ಸಂಹಾರಮೂರ್ತಿ



ಜ್ವಾಲಾನರಸಿಂಹಮೂರ್ತಿ
(ಅಥರ್ವಣಸಾರ, ನವನಾರಸಿಂಹ ಕಲ್ಪದಲ್ಲಿ)




ಶ್ರೀಲಕ್ಷ್ಮೀ ನರಸಿಂಹಮೂರ್ತಿ

೧೫. ತತ್ಪುರುಷ ಮೂರ್ತಿ

ತತ್ಪುರುಷ ಎಂದು ಕರೆಯಲ್ಪಡುವ ಮೂರ್ತರೂಪವು ವಿಶ್ವಕರ್ಮನ ಉತ್ತರ ದಿಕ್ಕಿಗೆ ಅಭಿಮುಖವಾಗಿರುವ ತತ್ಪುರುಷ ಮುಖದಿಂದ ಮೂಡಿಬಂದಿದೆ ಎಂದು ಹೇಳಲಾಗಿದೆ. ತತ್ಪುರುಷ ಮೂರ್ತಿಗೆ ಇಂದ್ರ, ಪ್ರತ್ನಬ್ರಹ್ಮ ಎಂಬ ಇತರ ನಾಮಗಳೂ ಇವೆ. ಈ ರೂಪವು ಉತ್ತರ ದಿಕ್ಕಿಗೆ ಅಧಿಪತಿ ಎಂದು ಯಜುರ್ವೇದದಲ್ಲಿ ಹೇಳಲಾಗಿದೆ; ಶಿಲ್ಪರ್ಷಿಯೂ ಸಹ. ಶಿಲಾಶಿಲ್ಪದ ಆದ್ಯ ಪ್ರವರ್ತಕನೆಂದೂ ಹೇಳಲಾಗಿದೆ. ವಿಶ್ವಕರ್ಮ ಪುರಾಣದಲ್ಲಿ ತತ್ಪುರುಷನು ಮಾಯಾಶಕ್ತಿಯೊಂದಿಗೆ ಸೇರಿ ಶಿಲ್ಪಿ ಬ್ರಹ್ಮನಾದನು. ಶಿಲ್ಪಿ ಬ್ರಹ್ಮನು ಪಂಚಬ್ರಹ್ಮದಲ್ಲಿ ನಾಲ್ಕನೆಯವನು ಎಂದು ಹೇಳಲಾಗಿದೆ.







೧೬. ಸೂರ್ಯ ಮತ್ತು ಇತರ ಗ್ರಹಗಳು

೧. ಸೂರ್ಯಮೂರ್ತಿ

ಅಗ್ನಿಪುರಾಣದಲ್ಲಿ ಹಯಗ್ರೀವನು ಬ್ರಹ್ಮನನ್ನು ಕುರಿತು 'ಏಳು ಕುದುರೆಗಳಿಂದ ಹೂಡಲ್ಪಟ್ಟ ಒಂದೇ ಚಕ್ರವಿರುವ ರಥದಲ್ಲಿ ಕುಳಿತಿರುವ ಸೂರ್ಯ ಮತ್ತು ಅವನ ಸುತ್ತಲೂ ನಿರಂತರ ಸುತ್ತುತ್ತಿರುವ ಇತರೆ ಗ್ರಹದೇವತೆಗಳ ಪ್ರತಿಮೆಗಳ ಲಕ್ಷಣವನ್ನು ವಿವರಿಸುವೆ ಎಂದು ಹೇಳಿ ಮುಂದುವರೆದು ವಿವರಿಸಿದ್ದಾನೆ.

ಸೂರ್ಯದೇವನ ಪ್ರತಿಮೆಯನ್ನು ಏಳುಕುದುರೆಗಳಿಂದ ಎಳೆಯಲ್ಪಡುತ್ತಿರುವ ಒಂಟಿ ಚಕ್ರದ ರಥದಲ್ಲಿ ಕುಳಿತಿರುವಂತೆ ಸ್ಥಾಪಿಸಬೇಕು. ಅವನು ತನ್ನೆರಡು ಕೈಗಳಲ್ಲಿ ಕಮಲದ ಹೂಗಳನ್ನು ಹಿಡಿದಿರುವನು. ಬಲಬದಿಯಲ್ಲಿ ದಾವಾಗ್ನಿ ಮತ್ತು ಕಮಲವನ್ನು ಹಿಡಿದಿರುವ ದಂಡೀ (ದ್ವಾರಪಾಲಕರು) ನಿಂತಿದ್ದರೆ, ಎಡಬದಿಯಲ್ಲಿ ಪಿಂಗಳ ದಂಡಧಾರಿಯಾಗಿ ನಿಂತಿರುತ್ತಾನೆ. ಇವರಿಬ್ಬರೂ ಸೂರ್ಯದೇವನ ಸೇವಕರು. ಸೂರ್ಯದೇವನ ಎಡಬಲಗಳಲ್ಲಿ ರಾಜ್ಞಿ ಮತ್ತು ನಿಷ್ಪ್ರಭೆಯರು ಚಾಮರ ಹಿಡಿದು ನಿಂತಿರುವರು. ಈ ರೂಪಕಲ್ಪನೆಗೆ ಬದಲಾಗಿ ಕುದುರೆ ಸವಾರಿಯಲ್ಲಿರುವ ಒಬ್ಬನೇ ಒಬ್ಬ ಸೂರ್ಯನ ವಿಗ್ರಹವನ್ನೂ ಪ್ರತಿಷ್ಠಾಪಿಸಬಹುದೆಂದು ಹೇಳಲಾಗಿದೆ.*

ಹನ್ನೆರಡು ದಳಗಳಿರುವ ಕಮಲ ಚಕ್ರವೊಂದನ್ನು ರೂಪಿಸಿ ಅದರಲ್ಲಿ ಸೂರ್ಯ, ಅರ್ಯಮಾ ಮೊದಲಾದ ಹೆಸರುಗಳುಳ್ಳ ಹನ್ನೆರಡು ಆದಿತ್ಯರನ್ನು ಕ್ರಮವಾಗಿ ಹನ್ನೆರಡು ದಳಗಳಲ್ಲಿ ಸ್ಥಾಪಿಸಬೇಕು.

ಈ ಪ್ರತಿಮೆಗಳು ಅಂದರೆ ೧೨ ಆದಿತ್ಯರುಗಳು ನಾಲ್ಕು ನಾಲ್ಕು ಭುಜವುಳ್ಳವರು ಮತ್ತು ಎಲ್ಲರೂ ಕೈಗಳಲ್ಲಿ ಅರ್ಧಚಂದ್ರ, ಶೂಲ, ಚಕ್ರ ಮತ್ತು ಕಮಲಗಳನ್ನು ಧರಿಸಿರಬೇಕೆಂದಿದೆ.

ಸೋಮೇಶ್ವರನ 'ಮಾನಸೋಲ್ಲಾಸ'ದ ಗೃಹೋಪಭೋಗದ (೮೧೯-೮೨೪) ಶ್ಲೋಕಗಳಲ್ಲಿ ಸೂರ್ಯಮೂರ್ತಿಯ ಲಕ್ಷಣಗಳು ವಿವರಿಸಲ್ಪಟ್ಟಿವೆ.

ರಕ್ತವರ್ಣೋ ಮಹಾತೇಜಾದ್ವಿಬಾಹುಃ ಪದ್ಮಭೃದ್ರವಿಃ ॥ ೮೧೯ ॥
ಸಪ್ತಭಿಸ್ತುರಗೈರ್ಯುಕ್ತೇ ಸಪ್ತರಜ್ಜುಸಮನ್ವಿತೇ ।

ಏಕಚಕ್ರೇ ರಥೇ ತಿಷ್ಠನ್ ಪಾದಾಕ್ರಾಂತ ಸರೋರುಹಃ ॥ ೮೨೦ ॥

ಮಾಣಿಕ್ಯಕುಂಡಲೋದಾರಃ ಪದ್ಮರಾಗಕಿರೀಟಕಃ ।
ರಕ್ತಾಂಬರಧರೋ ರಮ್ಯಃ ಸವ್ಯಕ್ತಾಂಗೋ ಮನೋಹರಃ ॥ ೮೨೧ ॥

ಪಾದೌ ತಸ್ಯ ಪ್ರಕರ್ತವ್ಯೌ ಸುಮಹತ್ತೇಜಸಾ ವೃತೌ ।

*** ಪದ್ಮಾಸನ ಪದ್ಮಕರಃ ಪದ್ಮಗರ್ಭ ಸಮದ್ಯುತಿಃ ।**
ಸಪ್ತಾಶ್ವರಥ ಸಂಯುಕ್ತೋದ್ವಿಭುಜಃ ಸ್ಯಾತ್ಸದಾರವಿಃ ॥ – *ಮಯೂಖಸ್ಮೃತಿ*

ಅನೂರಃ ಸಾರಥಿಃ ಕಾರ್ಯಃಪ್ರತೀಹಾರೌ ಚ ಪಾರ್ಶ್ವಯೋಃ ॥ ೮೨೨ ॥
ದಂಡಪಿಂಗಲ ನಾಮಾನೌ ಖಡ್ಗಖೇಟಕಧಾರಿಣೌ ।
ಧಾತಾ ಚ ಲೇಖನಿ ಹಸ್ತೋ ಜಗತ್ಕರ್ಮ ವಿಲೇಖಕಃ ॥ ೮೨೩ ॥

ಕಾರ್ಯೋಃಭಾನುಸಮೀಪಸ್ಥಶ್ಚಿತ್ರ ಕರ್ಮವಿಶಾರದೈಃ ।
ಇತಿ ಸೂರ್ಯಮೂರ್ತಿ

ಪ್ರಸ್ತುತ ಪ್ರಕಟಣೆಯ ದೇವನಹಳ್ಳಿಯ ಚೆನ್ನಕೇಶವ ಆಚಾರ್ಯರ ಸೂರ್ಯನ ರೂಪ ಕಲ್ಪನೆಯು ಈ ಮೂಲಗಳಿಂದಲೇ ಮೂಡಿ ಅವರದೇ ಆದ ರೇಖಾ ರೂಪ ಕಲ್ಪನೆಯಿಂದ ರೇಖಿಸಲ್ಪಟ್ಟಿದೆ.

ಪಠ್ಯದ ಜತೆಜತೆಗೇ ಶಿಲ್ಪಸೃಷ್ಟಿಗೆ ಪೂರಕವಾಗುವ ಉಬ್ಬುಶಿಲ್ಪ, ಪೂರ್ಣಶಿಲ್ಪಗಳ ಸೃಷ್ಟಿಗೆ ಪೂರಕವಾಗುವಂತೆ ಅವರು ಯೋಚಿಸಿದ್ದಾರೆ. ದೇವನಹಳ್ಳಿಯ ವೇಣುಗೋಪಾಲದೇವಾಲಯದ ಉಬ್ಬು ಶಿಲ್ಪಗಳು ಮತ್ತು ದೇವನಹಳ್ಳಿಯ ಶಿಲ್ಪ ಕಲಾಶಾಲೆಯ ಸಂಗ್ರಹದಲ್ಲಿರುವ ಶಿಲ್ಪಗಳು ಈ ಮಾತುಗಳಿಗೆ ಪೂರಕವಾಗಿವೆ.

ಸೂರ್ಯ

ಸೂರ್ಯನನ್ನು ವಿಷ್ಣು ಧರ್ಮೋತ್ತರ ಪುರಾಣದಲ್ಲಿ
"ಪದ್ಮಾಸನಃ ಪದ್ಮಕರಃ ಪದ್ಮಗರ್ಭಸಮದ್ಯುತಿಃ
ಸಪ್ತಾಶ್ವರಥ ಸಂಯುಕ್ತೋ ದ್ವಿಭುಜಃಸ್ಯಾತ್ಸದಾ ರವಿಃ" ॥
ಎಂದು ಹೇಳಲಾಗಿದ್ದರೆ

ವಿಶ್ವಕರ್ಮ ಶಿಲ್ಪಶಾಸ್ತ್ರದಲ್ಲಿ
"ಏಕಚಕ್ರಂ ಸಸಪ್ತಾಶ್ವಂ ಸಸಾರಥಿಂ ಮಹಾರಥಂ
ಹಸ್ತದ್ವಯಂ ಪದ್ಮಧರಂ ಕಂಚುಕಶ್ಚರ್ಮ್ಮ ವಕ್ಷಸಮ್ ॥
ಅಕುಂಚಿತ ಸುಕೇಶಸ್ತು ಪ್ರಭಾಮಂಡಲ ಮಂಡಿತಮ್
ಕೇಶವೇಶಸಮಾಯುಕ್ತಂ ಸ್ವರ್ಣರತ್ನವಿಭೂಷಿತಮ್ ॥

ನಿಕ್ಷುಭಾ ದಕ್ಷಿಣೇಪಾರ್ಶ್ವೇ ವಾಮೆ ರಾಜ್ಞೀ ಪ್ರಕೀರ್ತಿತಾ ।
ಸರ್ವಾಭರಣ ಸಂಯುಕ್ತಾ ಕೇಶಹಾರಸಮುಜ್ಜ್ವಲಾ ॥
ಏವಮುಕ್ತರಥಸ್ತಸ್ಯ ಮಕರಧ್ವಜ ಇಷ್ಯತೇ
ಮಕುಟಂಚಾಪಿ ದಾತವ್ಯಮನ್ಯತ್ ಸರ್ವಂ ಸಮಂಡಲಮ್ ॥
ಏಕ ವಕ್ತ್ರಾಂಕಿತೋ ದಂಡ ಸ್ಸ್ಕಂದಸ್ತೇಜೋಕರಾಂಬುಜಮ್
ಕೃತ್ವಾತು ಸ್ಥಾಪಯೇತ್ ಪೂರ್ವ್ವಂ ಪುರುಷಾಕೃತಿರೂಪಿಣೌ ॥
ಹಯಾ ರೂಢಸ್ತು(ಂತು) ಕುರ್ವ್ವೀತ ಪದ್ಮಸ್ಥಂ ವಾರ್ಚಿನಾಮಕಮ್
ಸದೀವ್ಯಮಾನವಪುಷಂ ಸರ್ವ್ವ ಲೋಕೈಕ ದೀಪಕಮ್ ॥
ಜಾತಿಹಿಂಗುಲ್ಯ ಸಂಸ್ಥಾಪ್ಯ ಕಾರಯೇತ್ ಸೂರ್ಯಮಂಡಲಮ್
ಚತುರ್ಬಾಹುರ್ದ್ವಿಹಸ್ತೋ ವಾ ರೇಖಾ ಮಣಿ ವಿಭಾಜನಾ ॥
ದ್ವಿಹಸ್ತ ಸರೋಜಜನ್ಮ ಶಬಲಾಶ್ವರಥ ಸ್ಥಿತಃ
ದಂಡಶ್ಚ ಪಿಂಗಲೈಶ್ಚೈವ ದ್ವಾರಪಾಲೌ ಚ ಖಂಗಿನೌ" ॥
ಎಂದು ಅಭಿವರ್ಣಿಸಲಾಗಿದೆ.

ದೇವನಹಳ್ಳಿಯ ಚೆನ್ನಕೇಶವ ಆಚಾರ್ಯರು ಬಹುತೇಕ ಮೇಲಿನ ವಿಶ್ವಕರ್ಮ ಶಿಲ್ಪಪಥ್ಯವನ್ನು ಅನುಸರಿಸಿ ತಮ್ಮ ಸೂರ್ಯದೇವನ ರೇಖಾಚಿತ್ರವನ್ನು ರೇಖಿಸಿದಂತೆ ಕಾಣುತ್ತದೆ.

ರೂಪಮಂಡನದ ಈ ವಿವರ ಗಮನಿಸಿ

"ಸರ್ವಲಕ್ಷಣ ಸಂಯುಕ್ತಂ ಸರ್ವಾಭರಣ ಭೂಷಿತಮ್
ದ್ವಿಭುಜಂ ಚೈ ಕವಕ್ತ್ರಂ ಚ ಶ್ವೇತಪಂಕಜಧೃತಕರಮ್ ॥
ವರ್ತುಲಂ ತೇಜಸೋ ಬಿಂಬಂ ಪದ್ಮಸ್ಥಂ ರಕ್ತವಾಸಸಮ್
ಆದಿತ್ಯಸ್ಯ ತ್ವಿದಂ ರೂಪಂ ಕುರ್ಯಾತ್ ಪಾಪ ಪ್ರಣಾಶನಮ್" ॥

ಸುಪ್ರಬೇದಾಗಮದಲ್ಲಿ

"ದ್ವಿಭುಜಂ ಪದ್ಮಹಸ್ತಂತುರಕ್ತವರ್ಣ ಸುರೂಪಕಮ್
ಕರಂಡ ಮಕುಟೋಪೇತಂ ಸರ್ವಾಭರಣ ಭೂಷಿತಂ ॥
ಮಕುಟಾದ್ವಿಗುಣಂ ತಾರಂ ಪ್ರಭಾಮಂಡಲ ಮಧ್ಯಮಮ್
ಉಷಾಶ್ಚ ಪ್ರತ್ಯುಷಾದೇವೀ ಸವ್ಯಾಸವ್ಯೇತು ಸಂಸ್ಥಿತಃ ॥
ಅರುಣಂ ಜಾಗ್ರತಃ ಕೃತ್ವಾ ಪಂಕಜಂತತ್ ಸ್ವರೂಪಕಮ್
ಸಪ್ತಾಶ್ವರಥ ಮಧ್ಯಸ್ಥಂ ಭಾಸ್ವರಂ ಪಾಪನಾಶನಮ್ ॥
ರಕ್ತ ಪದ್ಮಾಸನಸ್ಥಾಂ ಹಿ ಆಸನಂ ತತ್ರ ಕಲ್ಪಯೇತ್"

ಎಂಬ ವಿವರಗಳೂ ಸಹ ಚೆನ್ನಕೇಶವಾಚಾಯರ ಸೂರ್ಯದೇವನ ರೇಖಾ ರೂಪಕಲ್ಪನೆಗೆ ಬಹಳ ಬಹಳ ಹತ್ತಿರವಾಗಿದೆ.

ಇತರ ಗ್ರಹ ದೇವತೆಗಳಲ್ಲಿ ಚಂದ್ರನಮೂರ್ತಿಯು ಜಿಂಕೆ ಮತ್ತು ಅಕ್ಷರಮಾಲೆಯನ್ನು, ಮಂಗಳನು (ಕುಜ) ಶಕ್ತಿ ಮತ್ತು ಅಕ್ಷ ಮಾಲೆಯನ್ನು, ಬುಧನು ತನ್ನ ಕೈಗಳಲ್ಲಿ ಧನಸ್ಸು ಮತ್ತು ಅಕ್ಷಮಾಲೆಯನ್ನು, ಬೃಹಸ್ಪತಿಯು ಕೈಯಲ್ಲಿ ಮಣ್ಣಿನ ಕಮಂಡಲ ಮತ್ತು ಅಕ್ಷಮಾಲೆಯನ್ನು, ಶುಕ್ರನು ಜಿಂಕೆ ಮತ್ತು ಅಕ್ಷ ಮಾಲೆಯನ್ನು, ಶನಿಯು ಕಿಂಗಣಿಸೂತ್ರವನ್ನು, ರಾಹುವು ಅರ್ಧಚಂದ್ರನನ್ನು, ಕೇತುವು ಕೈಯಲ್ಲಿ ಖಡ್ಗ ಮತ್ತು ದೀಪಗಳನ್ನು ಧರಿಸಿರುವಂತೆ ಶಿಲ್ಪಿಸಬೇಕು ಎಂದು ಅಗ್ನಿಪುರಾಣದಲ್ಲಿ ಸೂಚಿಸಲಾಗಿದೆ.

೨. ಚಂದ್ರಗ್ರಹಮೂರ್ತಿ

ಚಂದ್ರಶ್ಚಿತ್ರೇವಿಧಾತವ್ಯಶ್ಶ್ವೇತಾಂಬರ ಸಮಾವೃತಃ
ದಶ ಶ್ವೇತಾಶ್ವ ಸಂಯುಕ್ತ ಮಾರೂಢಂ ಸ್ಯಂದನಂ ಶುಭಮ್ ॥
ದ್ವಿಭುಜಂ ದಕ್ಷಿಣೇ ಪಾಣೌ ಗದಾಂ ಬಿಭ್ರಪೃಥೂದರೀಮ್
ವಾಮಸ್ತು ವರದೇ ಹಸ್ತಶ್ಶಶಾಂಕ ಸ್ಯ ನಿರುಚ್ಯತೇ ॥ – *ಶಿಲ್ಪರತ್ನ*

೩. ಕುಜಗ್ರಹಮೂರ್ತಿ

ಧರಾಪುತ್ರಸ್ಯ ವಕ್ಷ್ಯಾಮಿಲಕ್ಷಣಂ ಚಿತ್ರಕರ್ಮಿಣಿ
ಚತುರ್ಭುಜೋ ಮೇಷಗಮ ಶ್ಚಾಂಗಾರಕ ಸಮುದ್ಯುತಿಃ ॥
ದಕ್ಷಿಣಂ ತದ್ವರಂ ಹಸ್ತಂ ವರದಂ ಪರಿಕಲ್ಪಯೇತ್
ಊರ್ಧ್ವಂ ಶಕ್ತಿಸಮಾಯುಕ್ತಂ ವಾಮೌ ಶುಕ್ಲಗಧಾಧರೌ ॥ – *ಶಿಲ್ಪರತ್ನ*

೪. ಬುಧಗ್ರಹ ಮೂರ್ತಿ

ಸಿಂಹಾರೂಢಂ ಸಂಪ್ರವಕ್ಷ್ಯೇಕರ್ಣಿಕಾರ ಸಮ ಪ್ರಭಮ್
ಪೀತಮಾಲ್ಯಾಂಬರಧರಂ ಸ್ವರ್ಣಭೂಷಾವಿಭೂಷಿತಮ್ ॥
ವರದಂ ಖಡ್ಗ ಸಂಯುಕ್ತಂ ಖೇಟಕೇನ ಸಮನ್ವಿತಮ್
ಗದಯಾಚ ಸಮಾಯುಕ್ತಂ ಬಿಭ್ರಾಣಂ ದೋಶ್ಚತುಷ್ಟಯಮ್ ॥
ಏವಂ ಲಿಖೇಚ್ಚಂದ್ರ ಸೂನಂ ಬುಧಂ ಗ್ರಹಪತಿಂ ಶುಭಮ್ – *ಶಿಲ್ಪರತ್ನ*

೫. ಬೃಹಸ್ಪತಿ ಮೂರ್ತಿ (ಗುರುಗ್ರಹ ಮೂರ್ತಿ)

ಬೃಹಸ್ಪತಿಯು ಶಿಲ್ಪಿ ಶ್ರೇಷ್ಠನು; ಶಿಲ್ಪಿಗಳಿಗೆ ಆದರ್ಶನು ಎಂದೂ ಹೇಳಲಾಗಿದೆ.
ತತೋ ದೇವ ಗುರುರ್ಲೇಖ್ಯಶ್ಶುಕ್ರಶ್ಚ ಭೃಗುನಂದನಃ
ಚತುರ್ಬಾಹುರ್ಯುಕ್ತಶ್ಚಿತ್ರಕಮ್ ವಿಶಾರದೈಃ ॥
ವರದೌ ಸಾಕ್ಷಸೂತ್ರೌಚ ಕಮಂಡಲುಧರೌ ತಥಾ
ದಂಡಿನೌ ಚ ತಥಾ ಬಾಹೌಬಿಭ್ರಾಣೌ ಕಲ್ಪಯೇತ್ ॥ – *ಶಿಲ್ಪರತ್ನ*

೬. ಶುಕ್ರ ಮೂರ್ತಿ

ಶುಕ್ರ ಶ್ವೇತವಪುಃ ಕಾರ್ಯಶ್ವೈತಾಂಬರಧರಸ್ತಥಾ
ದ್ವೌಕರೌ ಕಥಿತೌ ತಸ್ಯ ನಿದಿಪುಸ್ತಕ ಸಂಯುತೌ ॥
ದಶಾಶ್ವೇವಾ ರಥೇ ಕಾರ್ಯೋರಾಜತೇ ಭೃಗುನಂದನಃ –*ವಿಷ್ಣುಧರ್ಮೋತ್ತರ ಪುರಾಣ*

೭. ಶನಿಗ್ರಹ ಮೂರ್ತಿ

ಕೃಷ್ಣವಾಸಾಸ್ತಥಾ ಕೃಷ್ಣಶ್ಶನಿಃ ಕಾಯೋಸಿತಾನನಃ
ದಂಡಾಕ್ಷಮಾಲಾ ಸಂಯುಕ್ತಃ ಕರದ್ವಿತಯ ಭೂಷಣಃ ॥
ಕಾರ್ಷ್ಣಾಯಸೇ ರಥೇಕಾರ್ಯಸ್ತ ಥೈವಾಷ್ಟತುರಂಗಮೇ –*ವಿಷ್ಣುಧರ್ಮೋತ್ತರ ಪುರಾಣ*

೮. ರಾಹುಗ್ರಹ ಮೂರ್ತಿ

ರಾಹುಂ ಮಲಯಜಂ ಶೂದ್ರಂ ಪೈಠೀನಂ ದ್ವಾದಶಾಂಗುಲಮ್
ಕೃಷ್ಣಂ ಕೃಷ್ಣಾಂಬರಂ ಸಿಂಹಾಸನಂ ಧ್ಯಾತ್ವಾ ತಥಾ ಹ್ವಯೇತ್ ॥
ಚತುರ್ಬಾಹುಂ ಖಡ್ಗ ವರಶೂಲಚರ್ಮಕರಂ ತಥಾ
ಕಾಲಾಧಿದೈವಂ ಸೂರ್ಯಾಸ್ಯಾಂ ಸರ್ಪಪ್ರತ್ಯಧಿ ದೈವತಮ್ ॥ –*ಗ್ರಹಯಾಗತತ್ವ*

ಪುರಾಣ ಮತ್ತು ವೈದಿಕ ಉಲ್ಲೇಖಗಳಲ್ಲಿ ರಾಹುವಿಗೆ ಕೇವಲ ಶಿರಮಾತ್ರವೇ ಉಳ್ಳವನೆಂದಿದ್ದರೂ ಮೂರ್ತಿಶಿಲ್ಪದಲ್ಲಿ ಇವನಿಗೆ ದೇಹವನ್ನು ಆರೋಪಿಸಲಾಗಿದೆ. ತಲೆಯುಮಾನವನದಾಗಿದ್ದು ದೇಹವು ಸರ್ಪ ದ್ದಾಗಿರುವ ಉದಾಹರಣೆಗಳೂ ಇವೆ. ಪ್ರಸ್ತುತ ಸಂಪುಟದ ದೇವನಹಳ್ಳಿ ಚೆನ್ನಕೇಶವ ಆಚಾರ್ಯರ ರಾಹು ರೇಖಾಚಿತ್ರ ಕಲ್ಪನೆಯೂ ಇದೇ ದೃಷ್ಟಿಯದು.

೯. ಕೇತುಗ್ರಹಮೂರ್ತಿ

ಧೂಮ್ರವರ್ಣೋ ವಿಶಾಲಕ್ಷಃ ಪುಚ್ಛರೂಪೀ ಚತುರ್ಭುಜಃ
ಖಡ್ಗಚರ್ಮ ಗದಾಬಾಣ ಪಾಣೀಃ ಕೇತುಃ ಶರಾಸನಃ ॥ – *ಕಾಳಿಕಾಪುರಾಣ*




ಚೆನ್ನಕೇಶವ ಆಚಾರ್ಯರು ವಿಶ್ವಕರ್ಮ ಶಿಲ್ಪ/ಪತ್ಯದ ವಿವರಗಳಿಗೆ ಪೂರಕವಾಗಿ ರೇಖಿಸಿದ್ದಾರೆ.

ರಥದ ಹೆಸರು ಮಕರದ್ವಜ, ರಥದ ಸಾರಥಿ ಅರುಣ

ಬಲಕ್ಕೆ ಪತ್ನಿ ಸಂಜ್ಞಾ(ನಿಕ್ಷುಭಾ) ಎಡಕ್ಕೆ ಛಾಯಾ (ರಾಜ್ಞೀ) ಇದ್ದಾರೆ; ಯಮ ಮತ್ತು ಸ್ಕಂದ ಇರುತ್ತಾರೆ.



ಸೂರ್ಯ ಚಂದ್ರ ಕುಜ



ಬುಧ ಗುರು(ಬೃಹಸ್ಪತಿ) ಶುಕ್ರನು



ಬೃಹಸ್ಪತಿ ಸಭಾ

ಎಡಗಡೆಯಿಂದ ಯಕ್ಷ, ಚಿತ್ರಲೇಖ, ಕುಬೇರ, ಕಚ, ತಾರಾ, ಇಂದ್ರ, ಶಚಿ, ವೈಜಯಂತ, ಜಯಂತ ಮೊದಲಾದವರ ರೇಖಾರೂಪ ಕಲ್ಪನೆ




ಅಂಗಾರಕ ಸಭಾ

ಎಡದಿಂದ ಗುರು, ತಾರಾ, ಈಶ್ವರ, ಗೌರಿ, ಶೃಂಗಾರಕ, ಶ್ಯಾಮಲ, ವಿಷ್ಣು, ಲಕ್ಷ್ಮಿ, ಪದ್ಮಿನಿ, ಸೂರ್ಯ ಮೊದಲಾದವರ ರೇಖಾರೂಪ ಕಲ್ಪನೆಗಳು



ಶನೀಶ್ವರ ಸಭಾ

ಎಡದಿಂದ ಬುಧ, ಚಂದ್ರ, ಸೂರ್ಯ, ಯಮ ಮೊದಲಾದವರ ರೇಖಾ ಕಲ್ಪನೆಗಳು



ಶನಿ ರಾಹು ಕೇತು

೧೭. ಅಷ್ಟದಿಕ್ ಪಾಲಕರು

ನಮ್ಮ ಮೂರ್ತಿರೂಪ ಕಲ್ಪನೆಯ ಪರಂಪರೆಯಲ್ಲಿ ದಿಕ್ಪಾಲಕರ ಕಲ್ಪನೆಯು ಅತಿ ಪ್ರಾಚೀನವಾದುದೆಂದು ಹೇಳಲಾಗಿದೆ. ಹಾಗಾಗಿ ಪ್ರಾರಂಭದಲ್ಲಿ ದಿಕ್ಪಾಲಕ ಮೂರ್ತಿಗಳಿಗೆ ಎರಡೇ ಭುಜಗಳಿದ್ದ ವಿವರಗಳು ಬೃಹತ್‌ಸಂಹಿತೆ, ಮತ್ಸ್ಯಪುರಾಣ, ಅಗ್ನಿಪುರಾಣ, ಮಾನಸೋಲ್ಲಾಸಗಳಲ್ಲಿವೆ. ಪೂರಕವಾಗಿ ಅಗ್ನಿಪುರಾಣದ ಈ ವಿವರ ಗಮನಿಸಿ:

ಇಂದ್ರೋವಜ್ರೀಗಜಾರೂಢಶ್ಚಾಗಗೋಗ್ನಿ ಶ್ಚ ಶಕ್ತಿಮಾನ್
ಯಮೋದಂಡೀ ಚ ಮಹಿಷೇ ನೈರ್ಋತಃ ಖಡ್ಗವಾನ್ ಕರೇಃ ॥
ಮಕರೇ ವರುಣಃ ಪಾಶೀ ವಾಯುರ್ಧ್ವಜ ಧರೋ ಮೃಗೇ
ಗದೀ ಕುಬೇರೋ ಮಾನುಷಸ್ಥ ಈಶಾನ ಶ್ಚ ಜಟೀ ವೃಷೇ ॥

ಆನೆ (ಐರಾವತ)ಯ ಮೇಲೆ ಆಸೀನನಾಗಿರುವ ಇಂದ್ರನು ವಜ್ರಾಯುಧವನ್ನು ಹಿಡಿದಿರುತ್ತಾನೆ. ಟಗರು ವಾಹನಾರೂಢ ಅಗ್ನಿಯು ಶಕ್ತಾಯುಧವನ್ನು ಧರಿಸಿರುತ್ತಾನೆ. ಮಹಿಷವಾಹನದ ಯಮನು ದಂಡವನ್ನು ಧರಿಸಿದ್ದಾನೆ. ನಿರ್ಋತಿಯು ಶವ ವಾಹನನಾಗಿ ಖಡ್ಗವನ್ನು ಧರಿಸಿದ್ದಾನೆ. ಜಿಂಕೆಯ ವಾಹನ ಹೊಂದಿರುವ ವಾಯುವು ಧ್ವಜವನ್ನು ಹಿಡಿದಿದ್ದಾನೆ. ಕುಬೇರನು ನರವಾಹನಾರೂಢನಾಗಿ ಗದೆಯನ್ನು ಧರಿಸಿದ್ದಾನೆ. ಈಶಾನನು ವೃಷಭವನ್ನು ವಾಹನವಾಗಿಸಿಕೊಂಡು ಜಟಮುಕುಟಗಳೊಂದಿಗೆ ತ್ರಿಶೂಲವನ್ನು ಧರಿಸಿದ್ದಾನೆ, ಎಂದಿದೆ. ಆದರೆ ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಅಷ್ಟದಿಕ್ಪಾಲಕರಿಗೆ ನಾಲ್ಕು ಕೈಗಳಿರುವುದನ್ನು ವರ್ಣಿಸಲಾಗಿದೆ. 'ಸಮರಾಂಗಣ ಸೂತ್ರಧಾರ'ದಲ್ಲಿಯೂ ಈ ವಿವರಣೆ ಪುನರಾವರ್ತಿತವಾಗಿದೆ. ಆದರೆ ಈ ಪಠ್ಯಗಳಲ್ಲಿ ನಾಲ್ವರು ದಿಕ್ಪಾಲಕರು ಅಂದರೆ ಇಂದ್ರ, ವರುಣ, ಯಮ ಮತ್ತು ಕುಬೇರನ ಬಗ್ಗೆ ಮಾತ್ರ ವಿವರಗಳಿವೆ.

ನಾಲ್ಕು ದಿಕ್ಕುಗಳು ಅಂದರೆ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರಗಳ ಬಗ್ಗೆ ಮಾತ್ರ ಗಮನ ನೀಡಲಾಗಿದೆ. ವಿಷ್ಣು ಧರ್ಮೋತ್ತರ, ಸಮರಾಂಗಣ ಸೂತ್ರಧಾರ, ಮತ್ತು ಅಪರಾಜಿತ ಪೃಚ್ಛಗಳ ವಿವರಗಳನ್ನೇ 'ರೂಪಮಂಡನ'ವು ಅನುಸರಿಸಿದೆ.

ದೇವನಹಳ್ಳಿಯ ದಿ। ಚೆನ್ನಕೇಶವ ಆಚಾರ್ಯರ ದಿಕ್ಪಾಲಕರ ರೇಖಾಚಿತ್ರಗಳು ನಾಲ್ಕು ತೋಳುಗಳನ್ನು ಹೊಂದಿವೆ ಎಂಬುದು ಗಮನಾರ್ಹ. ಹಾಗಾಗಿ ಇವು ಈಚಿನ ರೂಪ ಕಲ್ಪನೆಗಳು.



ಇಂದ್ರ (ಪೂರ್ವ)



ವರುಣ (ಪಶ್ಚಿಮ)



ಯಮ (ದಕ್ಷಿಣ)



ವಾಯುದೇವ (ವಾಯುವ್ಯ)



ಈಶಾನ (ಈಶಾನ್ಯ)




ಯಗ್ನೇಶ್ವರ (ಅಗ್ನೇಯ)




ನಿರ್ಋತಿ



ವರುಣ (ಪಶ್ಚಿಮ), ವರುಣ ಮೂರ್ತಿಸಭಾ




ಕುಬೇರ (ಉತ್ತರ)
ಕುಬೇರ ಸಭಾ : ಚಿತ್ರರೇಖಾದೇವಿ ಮತ್ತಿತರರು



ಈಶಾನ (ಈಶಾನ್ಯ)

ಈಶಾನ ಸಭಾ : ಲಕ್ಷ್ಮಿ, ನಾರಾಯಣ, ಗಣನಾಥ, ಪಾರ್ವತಿ, ಕುಬೇರ ಮೊದಲಾದವರ ರೇಖಾ ರೂಪಗಳು



ನಿರುತಿ ಮೂರ್ತಿ (ನಿರ್ಋತಿ = ನೈಋತ್ಯ)

ನಿರುತಿ ಮೂರ್ತಿ ಸಭಾ

ಎಡದಿಂದ ನಿರೋಚನ, ಭಾರ್ಯ, ಬಲಿ, ಶುಕ್ರಾಚಾರ್ಯ ಇದ್ದಾರೆ



ವಾಯು (ವಾಯುವ್ಯ) : ವಾಯುದೇವ ಸಭಾ :

ಎಡದಿಂದ ಯಕ್ಷ, ಬ್ರಹ್ಮ, ಸರಸ್ವತಿ, ಅಂಜನೇಯ, ಅಂಜನಾದೇವಿ, ಗಂಗಾ, ಈಶ್ವರ, ಯಕ್ಷಿ



ಇಂದ್ರ (ಪೂರ್ವ): ಇಂದ್ರ ಸಭಾ.

೧೮. ಮಹಾವಿಷ್ಣು ಭಕ್ತಿಯ ಆಳ್ವಾರರುಗಳು


ದಕ್ಷಿಣಭಾರತ, ಅದರಲ್ಲಿಯೂ ತಮಿಳುನಾಡಿನ ವಿಷ್ಣು ಭಕ್ತ ಸಂತ ಪರಂಪರೆಯಲ್ಲಿ ವಿಷ್ಣುವಿಗೆ ಎಲ್ಲವನ್ನೂ ಅರ್ಪಿಸಿಕೊಂಡು ದಂತಕತೆಗಳಾದಂತಹವರು ಹನ್ನೆರಡು ಆಳ್ವಾರರುಗಳು. ಇತರರನ್ನೂ ಪ್ರಭಾವಿಸಿದ ಈ ಆಳ್ವಾರರುಗಳನ್ನು ವಿಷ್ಣುವಿನ ಅಥವಾ ಅವನ ಆಯುಧಗಳ ಭಾಗಷಃ ಅವತಾರಗಳೆಂದೇ ನಂಬಿರುವ ಒಂದು ಪರಂಪರೆಯೇ ಅಲ್ಲಿದೆ.


ವೇದಗಳ ಬೋಧನೆಗಳು ಜನ ಸಾಮಾನ್ಯರಿಗೆ ಅರಗಿಸಿಕೊಳ್ಳುವುದು ಅಸಾಧ್ಯವೆಂದೇ ಭಾವಿಸಲಾಗಿದೆ. ಅವುಗಳ ತಾತ್ವಿಕತೆಯಂತೂ ಕಬ್ಬಿಣದ ಕಡಲೆಯೇ ಸರಿ. ಹೀಗಾಗಿ ಜನ ಸಾಮಾನ್ಯರಿಗೂ ದೈವೀಕ ಜ್ಞಾನದ ಪರಮ ಆನಂದದ ಅನುಭವವು ದೊರಕುವ ಹಾದಿಯಲ್ಲಿ ಆಳ್ವಾರರುಗಳು ತಮಿಳು ಭಾಷೆಯಲ್ಲಿ ವೇದಗಳ ಬೋಧನೆಗಳ ಸಾರಾಂಶವನ್ನು ಅಲಂಕರಿಸಿಟ್ಟರು. ಕಾಲಾನಂತರ ಅವುಗಳೆಲ್ಲವೂ ಸುಂದರ ಮತ್ತು ಕಾವ್ಯಮಯ ತಮಿಳುಭಾಷೆಯಲ್ಲಿ 'ನಾಲ್ಕು ಸಾವಿರ ದಿವ್ಯ ಪ್ರಬಂಧಗಳು' ಎಂದು ಸಂಗ್ರಹಿಸಲ್ಪಟ್ಟವು. ಇದನ್ನು 'ತಮಿಳು ವೇದ' ಅಥವಾ 'ದ್ರಾವಿಡವೇದ' ಎಂದು ಅಲ್ಲಿನ ವೈಷ್ಣವರು ಕರೆದರು.

ದಿವ್ಯ ಪ್ರಬಂಧಗಳನ್ನು ಸಂರಚಿಸಿದ ಆಳ್ವಾರರುಗಳ ಜೀವನ ಕಥಾನಕಗಳೂ ತಮ್ಮ ವಿಷ್ಣುಭಕ್ತಿ ಮತ್ತು ಅರ್ಪಣಾ ಮನೋಭಾವಗಳಿಂದ ಇತರರಿಗೆ ಸ್ಫೂರ್ತಿ ನೀಡುವಂತಿವೆ. ಸಾಮಾನ್ಯವಾಗಿ ಆಳ್ವಾರರುಗಳು 12 ಮಂದಿಯಾದರೂ ವಿಷ್ಣುವಿನ ಪರಮಭಕ್ತರಾದ ಇತರರನ್ನೂ ಶ್ರೀ ವೈಷ್ಣವ ಆಳ್ವಾರರುಗಳೆಂದು ಕರೆಯಲಾಗುತ್ತಿದೆ. ಉದಾಹರಣೆಗೆ ಶ್ರೀ ರಾಮಾನುಜರ ಭಕ್ತನನ್ನು 'ಕೂರಟ್ಟಾಳ್ವಾರ್' ಅಥವಾ 'ಆಳ್ವಾರ್' ಎಂದು ಕರೆಯಲಾಗುತ್ತಿದೆ.


ಹಾಗೆಯೇ ಸಾಲಿಗ್ರಾಮ (ಶ್ರೀ ವಿಷ್ಣುವಿನ ಸಾಂಕೇತಿಕ ರೂಪ) ಸ್ಥಾಪಿಸಿರುವ ವೇದಿಕೆಯನ್ನು 'ಕೋವಿಲ್ ಆಳ್ವಾರ್' (ದೇವಾಲಯ ಆಳ್ವಾರ್), ಪವಿತ್ರ ತುಳಸಿಯು ಬೆಳೆಯುವ ಸ್ಥಳವನ್ನು 'ತಿರುತುಳೈ ಆಳ್ವಾರ್', ಖ್ಯಾತ ನಮ್ಮಾಳ್ವಾರ್ ವಾಸಿಸುವ ಹುಣಸೇಮರದ ಕೆಳಗಿನ ಸ್ಥಳವನ್ನು 'ತಿರುಪ್ಪುಳಿ ಆಳ್ವಾರ್' ಶ್ರೀ ವಿಷ್ಣುವಿನ ವಾಹನವಾದ ದಿವ್ಯ ಪಕ್ಷಿ ಗರುಡನನ್ನು 'ಗರುಡಾಳ್ವರ್' ಎಂದು ಕರೆಯುವುದೂ ಗಮನಾರ್ಹ.

ಪ್ರಮುಖ ಆಳ್ವಾರರುಗಳು ಅಂದರೆ ಹನ್ನೆರಡು ಆಳ್ವಾರರುಗಳನ್ನು ಹೀಗೆ ಪಟ್ಟಿಮಾಡಬಹುದು. ಪೊಯ್ಗೈ ಆಳ್ವಾರ್, ಭುತತ್ತ ಆಳ್ವಾರ್, ಪೇ ಆಳ್ವಾರ್, ತಿರುಮಲೈ ಸಾಯಿ ಆಳ್ವಾರ್, ನಮ್ಮಾಳ್ವಾರ್, ಮಧುರ ಕವಿ ಆಳ್ವಾರ್, ಕುಲಶೇಖರ ಆಳ್ವಾರ್, ಪೆರಿಯಾಳ್ವಾರ್, ಶ್ರೀ ಆಂಡಾಳ್, ತೊಂಡರಡಿಪ್ಪೊಡಿ ಆಳ್ವಾರ್, ತಿರುಪ್ಪಾನ್ ಆಳ್ವಾರ್ ಮತ್ತು ತಿರುಮಂಗೈ ಆಳ್ವಾರ್. ತಮಿಳುನಾಡಿನ ವಿಷ್ಣು ದೇವಾಲಯಗಳೇ ಅಲ್ಲದೇ ಕರ್ನಾಟಕದ ಹಲವಾರು ವಿಷ್ಣು ದೇವಾಲಯಗಳಲ್ಲಿಯೂ ಆಳ್ವಾರರುಗಳ ಶಿಲ್ಪಗಳನ್ನು ಪೂಜಿಸುತ್ತಿರುವುದನ್ನು ಗಮನಿಸಬಹುದು. ಹಾಗಾಗಿಯೇ ನಮ್ಮ ಸಂಪ್ರದಾಯ ಶಿಲ್ಪಿಗಳು ಆಳ್ವಾರರುಗಳ, ಆಚಾರ್ಯರುಗಳ ಶಿಲ್ಪಗಳ ಸೃಷ್ಟಿಗೂ ಗಮನ ನೀಡಬೇಕಿತ್ತು. ಹಾಗಾಗಿ ದೇವನಹಳ್ಳಿಯ ಚೆನ್ನಕೇಶವ ಆಚಾರ್ಯರ ರೇಖಾಚಿತ್ರ ಸಂಗ್ರಹದಲ್ಲಿ ಆಳ್ವಾರರುಗಳನ್ನು ಕುರಿತ ಹಲವಾರು ಚಿತ್ರಗಳಿದ್ದವು. ಆಯ್ದು ಕೆಲವು ರೇಖಾ ಚಿತ್ರಗಳನ್ನು ಪ್ರಸ್ತುತ ಸಂಪುಟದಲ್ಲಿ ಬಳಸಲಾಗಿದೆ. ಶ್ರೀ ರಾಮಾನುಜರು, ಶಠಗೋಪಯತಿ ಇಳೈಯಾಳ್ವಾರ್ ರೇಖಾಚಿತ್ರದಲ್ಲಿ ಗೋವಿಂದಭಟ್ಟ, ಯಾದವ ಪ್ರಕಾಶಿ, ನಮ್ಮಾಳ್ವಾರರು, ಕೇಶವಸೋಮಯಾಜಿ, ಕಾಂತಿಮತಿಯವರುಗಳು ಕಾಣಿಸಿಕೊಂಡಿದ್ದಾರೆ. ಬಹುತೇಕ ಈ ಮಾಲೆಯ ರೇಖಾಚಿತ್ರಗಳಲ್ಲಿ ಈ ಬಗೆಯ ಐತಿಹಾಸಿಕ ಪ್ರಜ್ಞೆ ಇರುವುದು ಗಮನಾರ್ಹ. ಹಾಗೆಯೇ ಪೆಯಾಳ್ವಾರ್, ಪೊಯ್‌ಕೈಯಾರ್ ಆಳ್ವಾರ್, ಮಹಾಯೋಗಿ ಪೆರಿಯಾಳ್ವಾರ್, ತಿರುಮೋಜಿ ಆಳ್ವಾರ್, ಶ್ರೀ ಆಂಡಾಳ್ ಗೋದಾದೇವಿ, ತಿರುಮಂಗ ಆಳ್ವಾರ್, ನಂಬಿಶ್ರೀ ಪೆರಿಯಾಳ್ವಾರ್, ಈ ಸಾಲಿನಲ್ಲಿ ನಾದಾನಂದ ಸ್ವಾಮಿ ಭಾಷ್ಯಕಾರರು ಗೋವಿಂದಸ್ವಾಮಿಯ ರೇಖಾಚಿತ್ರವೂ ಇದೆ. ಜತೆಗೆ ಇನ್ನೂ ಹಲವರದೂ ಇದೆ. ಮಹಾವಿಷ್ಣು ಪ್ರಿಯ ಭಕ್ತಿಯ ಪರಾಕಾಷ್ಠೆ ಇದು.





ಶ್ರೀ ರಾಮಾನುಜರು ಶಠಗೋಪಯತಿ ಇಳೈಯಾಳ್ವಾರ್‌ರವರ ಎಡಭಾಗದಲ್ಲಿ ಗೋವಿಂದಭಟ್ಟ, ಯಾದವ ಪ್ರಕಾಶಿ, ನಮ್ಮಾಳ್ವಾರರು. ಬಲಭಾಗದಲ್ಲಿ ತಂಬಿಮಾಂಬ್, ಕೇಶವ ಸೋಮಯಾಜಿ ಮತ್ತು ಕಾಂತಿಮತಿ



పెరియాళ్వార్




ಪೊಯ್ ಕಯ್ಯಾರ್ ಆಳ್ವಾರ್



ಮಹಾಯೋಗಿ ಪೆರಿಯಾಳ್ವಾರ್

























ಸದಾನಂದಸ್ವಾಮಿ

ಭಾಷ್ಯಕಾರರು ಗೋವಿಂದಸ್ವಾಮಿಯವರ ಎಡಭಾಗದಲ್ಲಿ ತಾಂಡೂರಿಯಜ್ಞಮೂರ್ತಿ, ಯತಿ ರಾಜುಲು, ಅಳವಂದ ಆಳ್ವಾರರು.
ಬಲಭಾಗದಲ್ಲಿ ಬಲಗಡೆಯಿಂದ ತಿರುತಬಿನಂಬಿ, ಪೆರಿನಂಬಿ ಮತ್ತು ಗಂಗಾಧರನು

ಪದಸೂಚಿ



೧೯೪೯ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಾಗಟ ಅಗ್ರಹಾರದಲ್ಲಿ ಜನಿಸಿದ ಕೆ.ವಿ. ಸುಬ್ರಹ್ಮಣ್ಯಂ ದೃಶ್ಯಕಲೆಯ ಇತಿಹಾಸ ವಿಮರ್ಶೆಗಳಿಗೆ ಸಂಬಂಧಿಸಿದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದಾರೆ. ಕರ್ನಾಟಕದ ಆಧುನಿಕ ಶಿಲ್ಪಕಲೆ, (೧೯೯೪) ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ (೨೦೦೭), ಮೊದಲಾದ ಪುಸ್ತಕಗಳ ಲೇಖಕರು ಇವರು. 'ಇನ್‌ಸ್ಟಾಲೇಷನ್ ಕಲಾ ಪ್ರಪಂಚ' ಪುಸ್ತಕವು ಪುಸ್ತಕ ಪ್ರಾಧಿಕಾರದ ಪ್ರಶಸ್ತಿಗೆ ಪಾತ್ರವಾಗಿದೆ.

ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ, ೧೯೯೯; United Writers Association of India, ಚೆನ್ನೈನ Fellow 2004; ಹರ್ಯಾಣದ ಸುಭದ್ರಾ ಕುಮಾರಿ ಚೌವ್ಹಾಣ್ ಜನ್ಮಶತಮಾನೋತ್ಸವ ಸಮ್ಮಾನ್, ೨೦೦೪; ಕರ್ನಾಟಕ ಚಿತ್ರಕಲಾ ಪರಿಷತ್ತಿನ ಜೀವಮಾನದ ಸಾಧನೆ ಪುರಸ್ಕಾರ, ೨೦೧೪, ಕಲಬುರಗಿಯ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯ 'ದೃಶ್ಯ ಭೂಷಣ' ಪ್ರಶಸ್ತಿ, ೨೦೧೪, ಬೆಂಗಳೂರು ಆರ್ಟ್ ಫೌಂಡೇಷನ್ನಿನ 'ಕಲಾಧ್ಯಾನ್' ಪುರಸ್ಕಾರ, ೨೦೧೫, ವಿ.ಸೀ. ಸಂಪದದ ಪುರಸ್ಕಾರ, ೨೦೧೬ ಮೊದಲಾದವು ಸಂದಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨
E-mail : shilpakala.academy@gmail.com
web : www.karnatakashilpakalaacademy.org
ದೂರವಾಣಿ : ೦೮೦-೨೨೨೬೮೭೫